ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 14 ಸೋಮವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 207 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ದಸರಾ ವಸ್ತುಪ್ರದರ್ಶನದಲ್ಲಿ ಕನಕದಾಸರ ಜಯಂತಿ ಆಚರಣೆ



ಮೈಸೂರು,ನ.13(ಎಸ್‌ಪಿಎನ್)–ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಗಾನಮಂಟಪದಲ್ಲಿ ದಾಸಶ್ರೇಷ್ಠ ಕನಕದಾಸರ 535ನೇ ಜಯಂತಿಗೆ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕನಕದಾಸರು ದಾಸಶ್ರೇಷ್ಠರಲ್ಲಿ ಪ್ರಮುಖರು. ಉಡುಪಿಯ ವ್ಯಾಸರಾಯರ ಶಿಷ್ಯರಾಗಿ ಕಾಗಿನೆಲೆ ಆದಿಕೇಶವ ಅಂಕಿತನಾಮದ ಮೂಲಕ ಸಮಾಜದಲ್ಲಿದ್ದ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಶ್ರಮಿಸಿದ್ದರು ಎಂದರು.

16ನೇ ಶತಮಾನದಲ್ಲಿ ಭಕ್ತಿ ಮಾರ್ಗದ ಮೂಲಕ ಸಮಾಜದಲ್ಲಿ ಸಮ ಸಮಾಜ ನಿರ್ಮಿಸಲು ಶ್ರಮಿಸಿದ್ದಾರೆ. ಇವರು ರಚಿಸಿದ ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ, ನಳಚರಿತ್ರೆ, ಹರಿಭಕ್ತಿ ಸಾಗರ, 316ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿ ಕನ್ನಡದ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದವರ ಸಾಲಿನಲ್ಲಿ ಮೊದಲಿಗರಾಗಿದ್ದಾರೆ ಎಂದ ಬಣ್ಣಿಸಿದರು.

ವಿದ್ವಾನ್ ರಘುರಾಂ ತಂಡ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿತು. ಸಂಗೀತ ಪಕ್ಕವಾದ್ಯದಲ್ಲಿ ತಬಲವಾದನ ವಿದ್ವಾನ್ ನಾಗರಾಜ್, ಕೀಬೋರ್ಡ್ ರವಿಶಂಕರ್, ರಿದಂ ಪ್ಯಾಡ್, ಶ್ರೀನಿವಾಸ್ ಸೇರಿದಂತೆ ಭಾವರಾಗತಾಳ ಸಂಗೀತ ಶಾಲೆಯ ಮಕ್ಕಳು ಭಾಗವಹಿಸಿದ್ದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ರುದ್ರೇಶ್, ಫನ್ ವರ್ಲ್ಡ್ ರೆಸಾರ್ಟ್ ಮುಖ್ಯಸ್ಥ ಮಲ್ಲಿಕಾರ್ಜುನ, ಕಾಯಕ ಯೋಗಿ ವಿಕಾಸ ವೇದಿಕೆ ಅಧ್ಯಕ್ಷ ಡಾ.ಮಾಲೇಗೌಡ, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ಮರೀಗೌಡ, ನಿರ್ದೇಶಕ ರೇವಣ್ಣ, ನಿರೂಪಕ ಅಜಯ್ ಶಾಸ್ತ್ರಿ, ತಿಮ್ಮೇಗೌಡ, ಮಾದೇಸ್ವಾಮಿ, ಮಾದೇಶ್, ಡಾ. ಗೋಪಿ, ಪುರುಷೋತ್ತಮ್, ಬಸವರಾಜು, ಉಪನ್ಯಾಸಕ ನಿಂಗಪ್ಪ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ನಡೆದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರಿಗೆ 'ದ.ರಾ.ಬೇಂದ್ರೆ' ಪ್ರಶಸ್ತಿಯನ್ನು ಮೇಯರ್ ಶಿವಕುಮಾರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಪ್ರದಾನ ಮಾಡಿದರು. ಈ ವೇಳೆ ಹುಯಿಲಾಳು ಜಯರಾಮು, ಎಂ.ಸಿ.ಚೌಂದಮ್ಮ ಇನ್ನಿತರರು ಉಪಸ್ಥಿತರಿದ್ದರು.

ವೈದ್ಯಕೀಯ ವಿದ್ಯಾರ್ಥಿಗಳಿಂದ ಚಿತ್ರಪಟ ನಾಟಕ ಪ್ರದರ್ಶನ



ಮೈಸೂರು,ನ.13(ಎಸ್‌ಪಿಎನ್)–ಹಿರಿಯ ರಂಗಕರ್ಮಿ ದೀಪಕ್ ಮೈಸೂರು ನಿರ್ದೇಶನದ ವೈದ್ಯಕೀಯ ವಿದ್ಯಾರ್ಥಿಗಳು ಅಭಿನಯದ 'ಚಿತ್ರಪಟ' ನಾಟಕಕ್ಕೆ ಎಂಎಂಸಿ ಮತ್ತು ಆರ್‌ಐನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಚಾಲನೆ ನೀಡಿದರು.

ಮೈಸೂರಿನ ಜೆ.ಕೆ.ಮೈದಾನದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿ ಮತ್ತು ಆರ್‌ಐ)ಯ ಅಮೃತ ಮಹೋತ್ಸವ ಭವನದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ 'ಧಮನಿ–22' ಕಾರ್ಯಕ್ರಮದಡಿ ಮೊದಲ ದಿನದ ಕಾರ್ಯಕ್ರಮದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಅಭಿನಯದ 'ಚಿತ್ರಪಟ' ನಾಟಕಕ್ಕೆ ಚಾಲನೆ ನೀಡಿ, ಮಾತನಾಡಿದರು. ವೈದ್ಯಕೀಯ ವಿದ್ಯಾರ್ಥಿಗಳು ಓದಿನ ಜೊತೆಗೆ ನಮ್ಮ ನೆಲದ ನೆಲ–ಜಲ–ಭಾಷೆ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು ಮತ್ತು ಮಾತೃಭಾಷೆ ಗೌರವ ಭಾವನೆ ಬೆಳಸಿಕೊಂಡು ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇರೆ ಭಾಷೆಯ ಜೊತೆಗೆ ಕನ್ನಡಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದು ತಿಳಿಸಿದರು.

ಈ ವೇಳೆ ವೈದ್ಯಕೀಯ ಕಾಲೇಜು ಕನ್ನಡ ಸಂಘದ ಅಧ್ಯಕ್ಷ ಡಾ.ಸಿ.ರವೀಂದ್ರನಾಥ್, ಉಪಾಧ್ಯಕ್ಷ ಡಾ.ಎಂ.ಎನ್.ರಘುವೀರ್, ಪ್ರಧಾನ ಕಾರ್ಯದರ್ಶಿ ವಿ.ಅರ್ಜುನ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಎಸ್.ಚಂದ್ರಶೇಖರ್, ಆಯೋಜಕ ವಿಶಾಲ್ ಕುಂಬಾರ್ ಉಪಸ್ಥಿತರಿದ್ದರು. ನಂತರ ನಾಟಕಗಾರ ಹೆಚ್.ಎಸ್.ವೆಂಕಟೇಶ್‌ಮೂರ್ತಿ ರಚಿತ 'ಚಿತ್ರಪಟ' ನಾಟಕವನ್ನು, ಹಿರಿಯ ರಂಗಕರ್ಮಿ ದೀಪಕ್ ಮೈಸೂರು ನಿರ್ದೇಶಿಸಿದ್ದು, ಮೈಸೂರು ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಾದ ಚಿನ್ಮಯಿಭಟ್, ಸೃಜನಾ, ಭವ್ಯಶ್ರೀ, ನಿತೀಶ್, ದಾಸಬಾಬು, ಗುಂಡಯ್ಯ, ಸಾಗರ್, ಸ್ವರೂಪ್, ವಿದ್ಯಾ, ಕೀರ್ತಿ ವೀಣಾ, ನಂದಕಿಶೋರ್, ಯವರಾಜ್ ಮತ್ತಿತರರು ಅಭಿನಯಿಸಿ, ಪ್ರೇಕ್ಷಕರಿಂದ ಮೆಚ್ಚುಗೆಗಳಿಸಿದರು.

ಚಿಕ್ಕಣ್ಣ ನಿಧನ



ಮೈಸೂರು, ನ13– ಮೈಸೂರಿನ ಕೆಜಿ.ಕೊಪ್ಪಲು ನಿವಾಸಿ ಯಜಮಾನ್ ಗಿರಿಗೌಡರ ಮಗ ಚಿಕ್ಕಣ್ಣ(ಜಮೀನ್ದಾರ್–75) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ನಾಳೆ(ನ.14) ಮಧ್ಯಾಹ್ನ 12ಕ್ಕೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ನಾಗರಾಜ



ಮೈಸೂರು, ನ.13– ಮೈಸೂರಿನ ಚಾಮರಾಜ ಮೋಹಲ್ಲದ ಡಿ.ಸುಬ್ಬಯ್ಯ ರಸ್ತೆ ನಿವಾಸಿ ನಾಗರಾಜು ಅವರು ಶನಿವಾರ ನಿಧನರಾದರು. ಮೃತರು ಇಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಶಿವಮ್ಮ



ಮೈಸೂರು, ನ.13– ಚಾಮರಾಜನಗರದ ಜಿಲ್ಲೆಯ ಕೆಂಪನಪುರ ಗ್ರಾಮದ ನಿವಾಸಿ ಶಿವಮ್ಮ(86) ಭಾನುವಾರ ನಿಧನರಾದರು.ಮೃತರು ಇಬ್ಬರು ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಂಯೆ ಸೋಮವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಕೆಂಪನಪುರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಅಪ್ಪಾಜಿ



ಕೆ.ಆರ್.ಪೇಟೆ, ನ.13– ಪಟ್ಟಣದ ಅಗ್ರಹಾರ ಬಡಾವಣೆ ನಿವಾಸಿ ಲೇಟ್ ಅಂಕಪ್ಪಾಚಾರ್ ಅವರ ಮಗ ಅಪ್ಪಾಜಿ(46) ಅವರು ಇಂದು ನಿಧನರಾದರು. ಮೃತರು ಪತ್ನಿ ರಾಘವೇಣಿ, ಪುತ್ರರಾದ ಪ್ರಜ್ವಲ್, ಶಿವರಾಜ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಮಧ್ಯಾಹ್ನ ನಡೆಯಿತು.

ಯೋಗ ಸ್ಪರ್ಧೆ: ನಾನಾ ಆಸನಗಳ ಪ್ರದರ್ಶನ

ಮೈಸೂರು ಯೋಗ ಒಕ್ಕೂಟದಿಂದ ಆಯೋಜಿಸಿದ್ದ ಯೋಗಾಸನ ಸ್ಪರ್ಧೆಯಲ್ಲಿ ನೂರಾರು ಪಟುಗಳು ಭಾಗಿ

ಮೈಸೂರು,ನ.13(ಪಿಎಂ)– ಮೈಸೂರು ಯೋಗ ಒಕ್ಕೂಟದ ವತಿಯಿಂದ ಒಕ್ಕೂಟದ 21ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ನೂರಾರು ಮಂದಿ ಯೋಗಪಟುಗಳು ಭಾಗವಹಿಸಿದ್ದರು.

ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶು ವಿಹಾರದ ಆವರಣದಲ್ಲಿ ನಡೆದ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯಲ್ಲಿ ಸರ್ವಾಂಗಾಸನ, ವೃಕ್ಷಾಸನ, ವಾತಾಯನಾಸನ ಸೇರಿದಂತೆ ಮೊದಲಾದ ನಿಗದಿತ ಆಸನಗಳ ಮೂಲಕ ರಾಜ್ಯದ ವಿವಿಧ ಭಾಗಗಳ ಯೋಗ ಪಟುಗಳು ತಮ್ಮ ಯೋಗ ಪ್ರತಿಭೆ ಅನಾವರಣ ಮಾಡಿದರು.

ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಒಟ್ಟು 16 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. 8ರಿಂದ 10 ವರ್ಷದ ಬಾಲಕ–ಬಾಲಕಿಯರ ವಿಭಾಗಗಳು, 11ರಿಂದ 14 ವರ್ಷದ ಬಾಲಕ–ಬಾಲಕಿಯರ ವಿಭಾಗಗಳು, 15ರಿಂದ 18 ವರ್ಷದ ಯುವಕ–ಯುವತಿಯರ ವಿಭಾಗಗಳು, 19ರಿಂದ 25 ವರ್ಷದ ಪುರುಷ–ಮಹಿಳೆಯರ ವಿಭಾಗಗಳು, 26ರಿಂದ 35 ವರ್ಷದ ಪುರುಷ ಮತ್ತು ಮಹಿಳೆಯರ ವಿಭಾಗಗಳು, 36ರಿಂದ 45 ವರ್ಷದ ಪುರುಷ–ಮಹಿಳೆಯರ ವಿಭಾಗಗಳು, 46ರಿಂದ 60 ವರ್ಷದ ಪುರುಷ–ಮಹಿಳೆಯರ ವಿಭಾಗಗಳು ಹಾಗೂ 60 ವರ್ಷ ಮೇಲ್ಪಟ್ಟ ಪುರುಷರು–ಮಹಿಳೆಯರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು.

ಪ್ರತಿ ವಿಭಾಗಗಳಲ್ಲಿಯೂ ಪ್ರಥಮ, ದ್ವಿತೀಯ, ತೃತೀಯ ಸ್ಥಾನಗಳು ಸೇರಿದಂತೆ ಕ್ರಮವಾಗಿ 6 ಸ್ಥಾನಗಳಿಗೆ ಬಹುಮಾನ ನೀಡಲಾಯಿತು. ಪದಕ ಹಾಗೂ ಟ್ರೋಫಿಗಳನ್ನು ಬಹುಮಾನವಾಗಿ ನೀಡಲಾಯಿತು. ಅಲ್ಲದೆ, ಎಲ್ಲಾ ಸ್ಪರ್ಧಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.



ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶುವಿಹಾರದ ಆವರಣದಲ್ಲಿ ಭಾನುವಾರ ನಡೆದ ಯೋಗಾಸನ ಸ್ಪರ್ಧೆಯಲ್ಲಿ ವಿವಿಧ ಆಸನಗಳ ಪ್ರದರ್ಶನ ನೀಡುತ್ತಿರುವ ಪಟುಗಳನ್ನು ಚಿತ್ರದಲ್ಲಿ ಕಾಣಬಹುದು.

ಇದಕ್ಕೂ ಮುನ್ನ ಆಯುಷ್ ಇಲಾಖೆಯ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ ಯೋಗಾಸನ ಸ್ಪರ್ಧೆಗೆ ಚಾಲನೆ ನೀಡಿದರು. ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್, ಕಾರ್ಯಾಧ್ಯಕ್ಷ ಬಿ.ಶಾಂತರಾಮ್, ಉಪಾಧ್ಯಕ್ಷ ಎಂ.ಎಸ್.ಶಿವಪ್ರಕಾಶ್ ಹಾಜರಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಸುಮಾರು 500 ಯೋಗ ಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು ಎಂದು ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಬಿ.ಪಿ.ಮೂರ್ತಿ ತಿಳಿಸಿದರು. ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣಶೆಣೈ, ವಿವೇಕಾನಂದ ಯೋಗ ಸಂಶೋಧನಾ ಕೇಂದ್ರದ ಸಂಸ್ಥಾಪಕ ಡಾ.ಪಿ.ಎನ್.ಗಣೇಶ್ ಕುಮಾರ್, ಭರತ್ ಸ್ವಾಭಿಮಾನ ಟ್ರಸ್ಟ್‌ನ ಎಸ್.ಶಶಿಕುಮಾರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರಕುಮಾರ್, ಉಪಾಧ್ಯಕ್ಷ ಎಂ.ಎಸ್.ರಮೇಶ್‌ಕುಮಾರ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಇಂದು ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ

ಮೈಸೂರು, ನ.13– ಸಾರ್ವಜನಿಕ ಗ್ರಂಥಾಲಯ ಇಲಾಖೆ ಮೈಸೂರು ನಗರ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳ ಸಂಯುಕ್ತಾಶ್ರಯದಲ್ಲಿ ನ.14ರಂದು ಬೆಳಗ್ಗೆ 9:30 ಗಂಟೆಗೆ ನಗರ ಕೇಂದ್ರ ಗ್ರಂಥಾಲಯ ಪೀಪಲ್ ಪಾರ್ಕ್, ನಜರಾಬಾದ್‌ನಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ–2022ರ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸುವರು. ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಪುಸ್ತಕ ಪ್ರದರ್ಶನ ಉದ್ಘಾಟನೆಯನ್ನು ನೆರವೇರಿಸುವರು. ಶಾಸಕ ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಮೇಯರ್ ಶಿವಕುಮಾರ್, ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರ ವ್ಯಾಪ್ತಿಯ ವಿವಿಧ ಶಾಖಾ ಗ್ರಂಥಾಲಯಗಳ ಫೋಟೋಗ್ರಫಿ ಅನಾವರಣ ಮಾಡುವರು. ಸಂಸದ ಪ್ರತಾಪ್ ಸಿಂಹ ಅವರು ಮೈಸೂರು ನಗರದ ಪ್ರಪ್ರಥಮ ಸಾರ್ವಜನಿಕ ಗ್ರಂಥಾಲಯದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನಪರಿಷತ್‌ನ ಶಾಸಕರು ಹಾಗೂ ನಿಗಮ ಮಂಡಳಿ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ತಂತ್ರಜ್ಞಾನದಲ್ಲಿ ಕನ್ನಡ ಬಳಕೆ ನಮ್ಮ ಕರ್ತವ್ಯ

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್.ನಾಗಾಭರಣ

ಮೈಸೂರು, ನ.13(ಎಸ್‌ಪಿಎನ್)– ತಂತ್ರಜ್ಞಾನದಲ್ಲೂ ಕನ್ನಡ ಬಳಕೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಇದರಿಂದ ಕನ್ನಡ ಭಾಷೆ ಬೆಳವಣಿಗೆಗೆ ಮತ್ತಷ್ಟು ಕೊಡುಗೆ ನೀಡಿದಂತೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅಭಿಪ್ರಾಯಪಟ್ಟರು.

ಮೈಸೂರಿನ ಜೆ.ಕೆ.ಮೈದಾನದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ(ಎಂಎಂಸಿ ಮತ್ತು ಆರ್‌ಐ)ಯ ಅಮೃತ ಮಹೋತ್ಸವ ಭವನದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ 'ಧಮನಿ–22' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಪ್ರತಿಯೊಬ್ಬರು ಸಾಮಾಜಿಕ ಜಾಲತಾಣವನ್ನು ಬಳಕೆ ಮಾಡುತ್ತಿದ್ದಾರೆ. ತಂತ್ರಜ್ಞಾನ ಮುಂದುವರೆದಂತೆ ತಮ್ಮ ಮೊಬೈಲ್ ಫೋನ್‌ನಲ್ಲೇ ಬೇಕಾದ ಮಾಹಿತಿಯನ್ನು ಪಡೆಯಬಹುದಾಗಿದೆ. ಹೀಗೆ ಎಲ್ಲದ್ದಕ್ಕೂ ಸಾಮಾಜಿಕ ಜಾಲತಾಣ ಬಳಕೆ ಮಾಡುವಾಗ ಕನ್ನಡ ಬಳಸಿ, ಕನ್ನಡ ಪರಂಪರೆ ಬೆಳವಣಿಗೆಗೆ ನಾಂದಿಯಾಗಬೇಕು ಎಂದು ಪ್ರತಿಪಾದಿಸಿದರು.

'ಮೈಸೂರು ಮಲ್ಲಿಗೆ' ಚಿತ್ರವು ಕನ್ನಡ ಮತ್ತು ಭಾರತೀಯ ಚಿತ್ರರಂಗದಲ್ಲಿ ಒಂದು ಮೈಲಿಗಲ್ಲಾಗಿದ್ದು, ಕಾವ್ಯಗಳಿಂದ ಕೂಡಿದ ಚಿತ್ರವಾಗಿದೆ ಎಂದ ಅವರು, ನನ್ನ ಬಾಲ್ಯದಲ್ಲಿ ಕದ್ದು ಮುಚ್ಚಿ ಸಿನಿಮಾಗಳನ್ನು ನೋಡುತ್ತಿದ್ದದ್ದು ಹಾಗೂ ವಿದ್ಯಾರ್ಥಿ ದಿಸೆಯಲ್ಲಿ ನಾಟಕಗಳಲ್ಲಿ ಅಭಿನಯಿಸಿದ್ದ ಪ್ರಸಂಗವನ್ನು ನೆನೆದರು.

ತರಗತಿಯಲ್ಲಿ ನಾನು ಯಾವಾಗಲೂ ಲಾಸ್ಟ್ ಬೆಂಚ್ ವಿದ್ಯಾರ್ಥಿ. ಶಿಕ್ಷಕರೊಬ್ಬರು ನನ್ನನ್ನು ತಿದ್ದಿ–ತೀಡಿ ಜೀವನ ರೂಪಿಸಿದ ಪ್ರಸಂಗವನ್ನು ಎಳೆಎಳೆಯಾಗಿ ಬಿಚ್ಚಿಟ್ಟರಲ್ಲದೆ, ರಂಗಭೂಮಿಗೆ ಬಂದ ಮೇಲೆ ಡಾ.ಬಿ.ವಿ.ಕಾರಂತ, ಡಾ.ಗಿರೀಶ್ ಕಾರ್ನಾಡ್ ಸೇರಿದಂತೆ



ಅನೇಕ ಖ್ಯಾತನಾಮರ ಜೊತೆ ಕೆಲಸ ಮಾಡಿದ್ದೇನೆ. ರಂಗಭೂಮಿಯಲ್ಲಿ ಸಿಗುವಷ್ಟು ಖುಷಿ, ಸಿನಿಮಾದಲ್ಲಿ ಸಿಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಹಾಗಾಗಿ ಮೈಸೂರು ಮೆಡಿಕಲ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿಗಳು ಕನ್ನಡ ರಾಜ್ಯೋತ್ಸವದ ಜೊತೆಗೆ ಹಿರಿಯ ರಂಗಕರ್ಮಿ ದೀಪಕ್ ಮೈಸೂರು ನೇತೃತ್ವದಲ್ಲಿ ಸಂಘಟನೆಯಾಗಿ 'ಚಿತ್ರಪಟ' ನಾಟಕವನ್ನು ಪ್ರದರ್ಶಿಸಿರುವುದು ಮೆಚ್ಚುಗೆಯ ಸಂಗತಿ. ಸದಾ ಒಂದಿಲ್ಲೊಂದು ಕಾರ್ಯಕ್ರಮದಲ್ಲಿ ಬಿಸಿಯಾಗಿರುವ ವಿದ್ಯಾರ್ಥಿಗಳಿಗೆ ಆ ಒತ್ತಡದಿಂದ ಹೊರಬರಲು ರಂಗಭೂಮಿ ಉತ್ತಮ ವೇದಿಕೆಯಾಗಲಿದ್ದು, ಬಿಡುವಿನ ಸಮಯದಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ವೈದ್ಯಕೀಯ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಯೋಜಿಸಿರುವ ವೈದ್ಯಕೀಯ ಕಾಲೇಜಿನ ಡಾ.ರವೀಂದ್ರನಾಥ್ ಸೇರಿದಂತೆ ಇತರೆ ಪ್ರಾಧ್ಯಾಪಕರು ಕನ್ನಡ ಭಾಷೆ ಬೆಳವಣಿಗೆಗೆ ಒತ್ತು ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಈ ವೇಳೆ ಎಂಎಂಸಿ ಮತ್ತು ಆರ್‌ಐನ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ನಂಜುಂಡಸ್ವಾಮಿ, ಚೆಲುವಾಂಬ ಆಸ್ಪತ್ರೆಯ ಡಾ.ರಾಜೇಂದ್ರ, ವೈದ್ಯಕೀಯ ಕಾಲೇಜು ಕನ್ನಡ ಸಂಘದ ಅಧ್ಯಕ್ಷ ಡಾ.ಸಿ.ರವೀಂದ್ರನಾಥ್, ಉಪಾಧ್ಯಕ್ಷ ಡಾ.ಎಂ.ಎನ್.ರಘುವೀರ್, ಪ್ರಧಾನ ಕಾರ್ಯದರ್ಶಿ ವಿ.ಅರ್ಜುನ್, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಎಸ್.ಚಂದ್ರಶೇಖರ್, ಆಯೋಜಕ ವಿಶಾಲ್ ಕುಂಬಾರ್ ಉಪಸ್ಥಿತರಿದ್ದರು.

ಇಂದು ಮೈಸೂರಿನ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.13–ಚೆಸ್ಕಾಂ ವತಿಯಿಂದ ನ.14ರಂದು ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ. ಆದುದರಿಂದ ಸಾರ್ವಜನಿಕರು ಹಾಗೂ ಕೈಗಾರಿಕೋದ್ಯಮಿಗಳು ಸಹಕರಿಸಬೇಕೆಂದು ಈ ಮೂಲಕ ಕೋರಲಾಗಿದೆ.

ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು: ಬೆಮೆಲ್ ಬಡಾವಣೆ, ರಿಂಗ್ ರಸ್ತೆ, ಸಾಯಿ ಬಡಾವಣೆ, ಗುರುಕುಲ ಬಡಾವಣೆ, ಕೊಪ್ಪಲೂರು, ಮಂಜುನಾಥ ಬಡಾವಣೆ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ ಜಯಂತಿ ಆಚರಣೆ



ಮೈಸೂರು. ನ.13(ಎಸ್‌ಪಿಎನ್)– ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಶುಕ್ರವಾರ ಕಲಾಮಂದಿರದಲ್ಲಿ ಆಚರಿಸಲಾಯಿತು.

ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಿತ್ತೂರು ಚೆನ್ನಮ್ಮ ಜಯಂತೋತ್ಸವ ಸಮಿತಿ ಹಾಗೂ ಒನಕೆ ಓಬವ್ವ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಮೇಯರ್ ಶಿವಕುಮಾರ್ ಚಾಲನೆ ನೀಡಿ, ಮಾತನಾಡಿದರು.

ವೀರ ವನಿತೆಯರ ಈ ಕಾರ್ಯಕ್ರಮಗಳು ಇವತ್ತಿನ ಎಲ್ಲಾ ಹೆಣ್ಣು ಮಕ್ಕಳಿಗೆ ಸ್ಫೂರ್ತಿದಾಯಕ. ದೇಶಭಕ್ತಿ ಮತ್ತು ಧೈರ್ಯವನ್ನು ತೋರಲಿಕ್ಕೆ ಈ ರೀತಿಯ ಜಯಂತಿಗಳನ್ನು ಸರ್ಕಾರ ಆಚರಿಸುತ್ತಿವೆ ಹಾಗೂ ಚಿತ್ರದುರ್ಗದ ಮದಕರಿ ನಾಯಕರ ಕೋಟೆಯನ್ನು ಹೈದರಾಲಿ ಸೇನೆ ಮುತ್ತಿಗೆ ಹಾಕಿದಾಗ ಒನಕೆ ಓಬವ್ವ ತೋರಿದ ಧೈರ್ಯ ಸಾಹಸ ಯಾರೂ ಮರೆಯಲು ಸಾಧ್ಯವಿಲ್ಲ. ಓಬವ್ವ ತನ್ನ ದೊರೆಗೆ ತೋರಿದ ಸ್ವಾಮಿ ನಿಷ್ಠೆ ಧೈರ್ಯ, ತ್ಯಾಗದ ಸಂಗಮ ಎಂದು ಅಭಿಪ್ರಾಯಪಟ್ಟರು. ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಪ್ರೀತಿ ಶುಭಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಅಮ್ಮರ್ ಆಲಿ ಮುಸೇದ್ ಅಲ್ಲಿನಾಯ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ನ.13– ಡಾ. ಡಿ.ಸೋನರ್ ನಂದಪ್ಪ ಅವರ ಮಾರ್ಗದರ್ಶನದಲ್ಲಿ ಅಮ್ಮರ್ ಆಲಿ ಮುಸೇದ್ ಅಲ್ಲಿನಾಯ್ ಅವರು ಗಣಿತ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.11.2022 ಸೋಮವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ : ಪುನರ್ವಸು, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಭಾನವಿ ಆಸ್ಪತ್ರೆ :** ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಮಧುಮೇಹ ಜಾಗೃತಿ ಕಾರ್ಯಕ್ರಮ, ಮಧುಮೇಹ ಆರೋಗ್ಯ ತಪಾಸಣಾ ಶಿಬಿರ, ವಾಕಥಾನ್ ಜಾಗೃತಿ ಜಾಥಾ, ಸ್ಥಳ: ಭಾನವಿ ಆಸ್ಪತ್ರೆ ಆವರಣ, ಬೆಳಗ್ಗೆ 7 ಗಂಟೆಗೆ.

■ **ಅಸೋಸಿಯೇಷನ್ ಆಫ್ ಫಿಜಿಷಿಯನ್ಸ್ ಆಫ್ ಇಂಡಿಯಾ :** ವಿಶ್ವ ಮಧುಮೇಹ ದಿನಾಚರಣೆ, ವಾಕಥಾನ್, ಉದ್ಘಾಟನೆ: ಹಿರಿಯ ಫಿಜಿಷಿಯನ್ ಡಾ.ಸಿ.ಡಿ.ಶ್ರೀನಿವಾಸಮೂರ್ತಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ, ಬೆಳಗ್ಗೆ 7.30ಕ್ಕೆ.

■ **ಎಎಸ್‌ಜಿ ಕಣ್ಣಿನ ಆಸ್ಪತ್ರೆ :** ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಡಯಾ ವಾಕ್ ರ್‍ಯಾಲಿ, ಸ್ಥಳ: ಎಎಸ್‌ಜಿ ಕಣ್ಣಿನ ಆಸ್ಪತ್ರೆ ಆವರಣದಿಂದ, ಬೆಳಗ್ಗೆ 8 ಗಂಟೆಗೆ, ಆಸ್ಪತ್ರೆಯಲ್ಲಿ ಮಧುಮೇಹ ರೋಗಿಗಳಿಗೆ ಉಚಿತ ಡಯಾಬಿಟಿಕ್ ರೆಟಿನೋಪತಿ ಸ್ಕ್ರೀನಿಂಗ್ ಶಿಬಿರ.

■ **ಶ್ರೀ ಉತ್ತರಾದಿ ಮಠ, ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಗಣಪತಿ, ನವಗ್ರಹ ಹಾಗೂ ಅಶ್ವತ್ಥ ವೃಕ್ಷ ಸನ್ನಿಧಾನ :** ಕಾರ್ತಿಕ ಸೋಮವಾರದ ಅಂಗವಾಗಿ ಸಾಮೂಹಿಕ ರುದ್ರಾಭಿಷೇಕ, ಬಿಲ್ವಾರ್ಚನೆ, ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರ ಅನುಗ್ರಹ, ಸ್ಥಳ: ಸಿಎಫ್‌ಟಿಆರ್‌ಐ ಪಕ್ಕ, ರೈಲ್ವೇ ಮ್ಯೂಸಿಯಂ ಎದುರು, ಬೆಳಗ್ಗೆ 8 ಗಂಟೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ :** ಪ್ರೊ.ಕೆ.ಎಸ್. ರಂಗಪ್ಪ ಆಡಿಟೋರಿಯಂ ಉದ್ಘಾಟನೆ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಸ್ಥಳ: ಸಂಸ್ಥೆಯ ಆವರಣ, ಬೆಳಗ್ಗೆ 10 ಗಂಟೆಗೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಜೆಎಸ್‌ಎಸ್ ಔಷಧ ಮಹಾವಿದ್ಯಾಲಯ:** 61ನೇ ರಾಷ್ಟ್ರೀಯ ಔಷಧ ಸಪ್ತಾಹ–2022, ಉದ್ಘಾಟನೆ: ಸಂಸದ ವಿ. ಶ್ರೀನಿವಾಸಪ್ರಸಾದ್, ಸ್ಥಳ: ಶ್ರೀ ರಾಜೇಂದ್ರ ಆಡಿಟೋರಿಯಂ, ಜೆಎಸ್‌ಎಸ್ ಕಾಲೇಜು, ಬೆಳಗ್ಗೆ 11 ಗಂಟೆಗೆ, ರಕ್ತದಾನ ಶಿಬಿರ, ಲಲಿತ್ ಮಹಲ್, ಬನ್ನಿಮಂಟಪ ಬಡಾವಣೆ, ಆಕಾಶವಾಣಿ ಸರ್ಕಲ್‌ನಲ್ಲಿ ಆರೋಗ್ಯ ತಪಾಸಣಾ ಶಿಬಿರ ಬೆಳಗ್ಗೆ 10 ಗಂಟೆಯಿಂದ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರಿ ಇಲಾಖೆ:** 69ನೇ ಅಖಿಲ ಭಾರತ ಸಹಕಾರ ಸಪ್ತಾಹ–2022, ಸಪ್ತವರ್ಣದ ಸಹಕಾರ ಧ್ವಜಾರೋಹಣ ಹಾಗೂ ಅಧ್ಯಕ್ಷತೆ: ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್, ಉದ್ಘಾಟನೆ: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಸ್ಥಳ: ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣ, ಬೆಳಗ್ಗೆ 10 ಗಂಟೆಗೆ.

■ **ಚೈಲ್ಡ್‌ಲೈನ್, ಮೈಸೂರು:** ಮಕ್ಕಳ ದಿನಾಚರಣೆ ಅಂಗವಾಗಿ ಮೈತ್ರಿ ಸಪ್ತಾಹ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಮೇಟಗಳ್ಳಿ, ಬೆಳಗ್ಗೆ 10.30ಕ್ಕೆ.

■ **ಒಡನಾಡಿ ಸೇವಾ ಸಂಸ್ಥೆ :** ಬಸವರಾಜು ಕುಕ್ಕರಹಳ್ಳಿ ಅವರಿಗೆ ನುಡಿನಮನ, ಸ್ಥಳ: ಜೀವ ಸಂಗಮ ಶ್ರೀ ರಾಜಶೇಖರಕೋಟಿ ಸಭಾಂಗಣ, ಒಡನಾಡಿ ಸೇವಾ ಸಂಸ್ಥೆ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ.ಎಂ.ಎಸ್.ಮೂರ್ತಿ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ: ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಮತ್ತೂರು ಕುಮಾರಸ್ವಾಮಿ, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಪ್ರೊ. ಮೈಸೂರು ಕೃಷ್ಣಮೂರ್ತಿ, 9.00 ಕನ್ನಡ ಕಜ್ಜಾಯ, 10.00 ಲಯ ಸಂಭ್ರಮ, ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ "ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಶಿವ ಶರಣರ ಕೊಡುಗೆ" ರಚನೆ ಹಾಗೂ ನಿರೂಪಣೆ–ಡಾ.ಜ್ಯೋತಿ ಶಂಕರ್, ಪ್ರಸ್ತುತಿ:– ಹೆಚ್.ಎಲ್.ಶಿವಶಂಕರಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ –ಶಂಕರ್ ಶ್ಯಾನುಭಾಗ್, ಎಲ್.ಅರ್ಚನಾ, 12.45 ನಮ್ಮ ಆರೋಗ್ಯ ಕಾರ್ಯಕ್ರಮ ಸಾಂಕ್ರಾಮಿಕ ರೂಪದ ಮಧುಮೇಹ ಕುರಿತು ಡಾ.ವಿ.ಲಕ್ಷ್ಮೀನಾರಾಯಣ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ದೀಪಾ ಸತ್ಯನಾರಾಯಣ, ಎನ್.ಜ್ಯೋತಿ, ಸ್ಟ್ಯಾನ್ಲೀ ಪಾರ್ಕರ್, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್. **ಸಂಜೆ:** 4.00 ಮಹಿಳಾರಂಗ 'ಡಾಕ್ಟರ್ ಸಮಯ' ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ– ತಾಯಿ ಮತ್ತು ನವಜಾತ ಶಿಶು, ಭಾಗವಹಿಸುವವರು: ಡಾ. ಶುಭಾ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ತೋಟಗಾರಿಕೆ ಬೆಳೆಗಳಲ್ಲಿ ನೈಸರ್ಗಿಕ ಕೃಷಿ ಅನುಭವ ಕುರಿತು ವರದರಾಜು ಅವರೊಡನೆ ಸಂದರ್ಶನ. **ರಾತ್ರಿ:** 9.30 'ನೆಲ ಮೂಲ' ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಕಾರ್ಯಕ್ರಮ, ರಚನೆ– ಡಾ.ಪಿ.ಕೆ.ರಾಜಶೇಖರ್ ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳಗ್ಗೆ 7 ಗಂಟೆಯಿಂದ, ವೈಷ್ಣವಿ ಭಜನಾ ಮಂಡಳಿಯಿಂದ ದೇವರನಾಮ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 11 ಗಂಟೆಗೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ, ಸ್ಥಳ: 510, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು (ರಾಷ್ಟ್ರೀಯ ಸೇವಾ ಯೋಜನೆ) :** ವಾರ್ಷಿಕ ವಿಶೇಷ ಶಿಬಿರ–2022–23 ಪಾಂಡವಪುರ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಎನ್.ಎಂ. ಶಿವಪ್ರಕಾಶ್ ಅವರಿಂದ ಉಪನ್ಯಾಸ, ವಿಷಯ: ಇಂದಿನ ದಿನಗಳಲ್ಲಿ ಮಾನವೀಯ ಮೌಲ್ಯಗಳ ಪ್ರಸ್ತುತತೆ, ಸ್ಥಳ: ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದದ ಹತ್ತಿರ, ಸಂಜೆ 4.30ರಿಂದ.

■ **ನಟನ ರಂಗಶಾಲೆ :** ಮಕ್ಕಳ ದಿನಾಚರಣೆ ಪ್ರಯುಕ್ತ ಹೊಸ ನಾಟಕ 'ನಾಯಿಮರಿ', ಸ್ಥಳ: ನಟನ ರಂಗಶಾಲೆ, ಸಂಜೆ 6.30ಕ್ಕೆ.

■ **ಶ್ರೀ ಮಲೆಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 24ನೇ ಮಹಾಕುಂಬಾಭಿಷೇಕ ಮತ್ತು 8ನೇ ವರ್ಷದ ಹಾಲರವಿ ಸೇವೆ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಸಂಜೆ 7ಕ್ಕೆ.

■ **ಭೂಷಣ್ಸ್ ಪ್ರದರ್ಶನ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಕೇಂದ್ರ :** ರಾಷ್ಟ್ರೀಯ ನೃತ್ಯೋತ್ಸವ, ಉದ್ಘಾಟನೆ: ನಾಟ್ಯಚಾರ್ಯ ರಾಮಮೂರ್ತಿರಾವ್, ಶ್ರೀಮತಿ ಡಾ. ವಸುಂಧರಾ ದೊರೆಸ್ವಾಮಿ ಅವರ 'ಅಮ್ಮ' ನೃತ್ಯ, ಸಂಜೆ 6 ಗಂಟೆಗೆ, ಶ್ರೀ ಸತ್ಯನಾರಾಣರಾಜು ಅವರ ಏಕವ್ಯಕ್ತಿ ಭರತನಾಟ್ಯ ಕಾರ್ಯಕ್ರಮ, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 7.30ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 14 ಸೋಮವಾರ 2022

ಸಂಪುಟ: 43 | ಸಂಚಿಕೆ: 207 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಕೋಲಾರದಲ್ಲಿ ಸಿದ್ದರಾಮಯ್ಯ ಸ್ಪರ್ಧೆ ಖಚಿತ

● ನಾಮಿನೇಷನ್ ಹಾಕೋದಾದ್ರೆ ಮತ್ತೆ ಕೋಲಾರಕ್ಕೆ ಬರ್ತೀನಿ: ಸಿದ್ದು ಘೋಷಣೆ ● ಕೋಲಾರದ ಎಲ್ಲಾ ನಾಯಕರ ಒತ್ತಾಸೆಗೆ ಚಿರಋಣಿ ● ಮಂದಿರ, ಮಸೀದಿ, ಚರ್ಚ್‌ಗೆ ಭೇಟಿ ● ವಾಲ್ಮೀಕಿ, ಸರ್ವಜ್ಞ, ಸಂಗೊಳ್ಳಿ ರಾಯಣ್ಣ, ಗಾಂಧೀಜಿ ಪ್ರತಿಮೆಗಳಿಗೆ ಮಾಲಾರ್ಪಣೆ ● ಕೋಲಾರದಲ್ಲಿ ಸಿದ್ದರಾಮಯ್ಯಗೆ ಅಭೂತಪೂರ್ವ ಸ್ವಾಗತ

ಕೋಲಾರ, ನ.13–ಹಾಲಿ ಬಾದಾಮಿ ಕ್ಷೇತ್ರದ ಶಾಸಕರಾಗಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಮುಂದಿನ ಚುನಾವಣೆಯಲ್ಲಿ ಕೋಲಾರದಿಂದ ಸ್ಪರ್ಧಿಸುವುದು ಖಚಿತವಾಗಿದೆ. ಕೋಲಾರದಲ್ಲಿ ಇಂದು ನೆರೆದಿದ್ದ ಭಾರೀ ಜನಸ್ತೋಮವನ್ನು ನೋಡಿದ ಸಿದ್ದರಾಮಯ್ಯ, 'ನಾಮಪತ್ರ ಸಲ್ಲಿಸಲು ಕೋಲಾರಕ್ಕೆ ಬರುತ್ತೇನೆ' ಎಂದು ಹೇಳುವ ಮೂಲಕ ತಾವು ಕೋಲಾರದಿಂದ ಸ್ಪರ್ಧಿಸುವುದನ್ನು ಖಚಿತಪಡಿಸಿದ್ದಾರೆ.

ಕೋಲಾರ ಜನತೆಯ ನಾಡಿ ಮಿಡಿತ ಅರಿಯುವ ಸಲುವಾಗಿ ಭಾನುವಾರ ಕೋಲಾರಕ್ಕೆ ಭೇಟಿ ನೀಡಿದ ಸಿದ್ದರಾಮಯ್ಯ ಅವರನ್ನು ಸಾವಿರಾರು ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು. ಅವರಿಗೆ ಬೃಹತ್ ಸೇಬಿನ ಹಾರ, ಹೂವಿನ ಹಾರ ಮಾತ್ರವಲ್ಲದೇ ಕಂಬಳಿ ಹೊದಿಸಿ ಸಂಭ್ರಮಿಸಿದರು. ಅಲ್ಲಲ್ಲಿ ಪುಷ್ಪವೃಷ್ಟಿ ಮಾಡುವ ಮೂಲಕ ಸಂಭ್ರಮಿಸಿದರು.

ಚೌಡೇನಹಳ್ಳಿಯಲ್ಲಿರುವ ಶಾಸಕ ಕೃಷ್ಣಭೈರೇಗೌಡರ ತೋಟದ ಮನೆ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೋಲಾರದಲ್ಲಿ ನನಗೆ ಹೆಚ್ಚಿನ ಸ್ನೇಹಿತರಿದ್ದಾರೆ. ರಮೇಶ್ ಕುಮಾರ್ ಅವರು ಕೋಲಾರದಲ್ಲೇ ಸ್ಪರ್ಧಿಸಬೇಕೆಂದು ಮನವಿ ಮಾಡಿದ್ದಾರೆ. ಕೆ.ಹೆಚ್.ಮುನಿಯಪ್ಪ ಅವರ ಜೊತೆಯೂ ಮಾತನಾಡಿದ್ದೇನೆ. ಅವರು ನನಗೆ ಫುಲ್ ಸಪೋರ್ಟ್ ಮಾಡುವುದಾಗಿ ತಿಳಿಸಿದ್ದಾರೆ. ಶಾಸಕ ಶ್ರೀನಿವಾಸಗೌಡ ಅವರೂ ಕೂಡ ನನ್ನನ್ನು ಇಲ್ಲೇ ಸ್ಪರ್ಧಿಸುವಂತೆ ಒತ್ತಾಯ ಮಾಡುತ್ತಿದ್ದಾರೆ. ಒಂದು ಅಥವಾ ಎರಡು ದಿನ ನೀವು ಇಲ್ಲಿ ಓಡಾಡಿದರೂ ಸಾಕು, ನಾವೇ ನಿಮ್ಮನ್ನು ಗೆಲ್ಲಿಸುತ್ತೇವೆ ಎಂದು ಎಲ್ಲರೂ ಹೇಳುತ್ತಿದ್ದಾರೆ ಎಂದ ಸಿದ್ದರಾಮಯ್ಯ, ಕೋಲಾರ ಜಿಲ್ಲೆಯ ಎಲ್ಲಾ ನಾಯಕರ ಒತ್ತಾಸೆಗೆ ನಾನು ಚಿರಋಣಿ. ಇಲ್ಲಿನ ಜನರೂ ಕೂಡ ನನಗೆ ಅಭೂತಪೂರ್ವ ಸ್ವಾಗತ ಕೋರುವ ಮೂಲಕ ಬೆಂಬಲ ವ್ಯಕ್ತಪಡಿಸಿದ್ದಾರೆ. ಅಂತಿಮವಾಗಿ ಹೈಕಮಾಂಡ್ ಎಲ್ಲಿ ಸ್ಪರ್ಧಿಸಲು ಹೇಳಿದರೆ ಅಲ್ಲಿ ಸ್ಪರ್ಧಿಸುತ್ತೇನೆ ಎಂದರು.

ಇಂದು ಸಿದ್ದರಾಮಯ್ಯ ಕೋಲಾರಕ್ಕೆ ಆಗಮಿಸಿದಾಗ ಅವರಿಗೆ ಅಭೂತಪೂರ್ವ ಸ್ವಾಗತ ದೊರೆತಿದೆ. ವೇಮಗಲ್ ಸಮೀಪದ ▶ 8ನೇ ಪುಟಕ್ಕೆ



ಭಾನುವಾರ ಕೋಲಾರಕ್ಕೆ ಭೇಟಿ ನೀಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಸಾವಿರಾರು ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು.

“ ಬಾದಾಮಿ ಕ್ಷೇತ್ರದಲ್ಲಿ ನನ್ನ ಸ್ಪರ್ಧೆ ರೂಲ್ಡ್ ಔಟ್ ಎಂದು ಹೇಳುವ ಮೂಲಕ ಮತ್ತೆ ಬಾದಾಮಿಯಲ್ಲಿ ಸ್ಪರ್ಧಿಸುವುದಿಲ್ಲ ಎಂಬುದನ್ನು ಮಾಜಿ ಸಿಎಂ ಸಿದ್ದರಾಮಯ್ಯ ಖಚಿತಪಡಿಸಿದರು. ನಾಮಪತ್ರ ಸಲ್ಲಿಸಬೇಕಾದರೆ ಇಲ್ಲಿಗೆ ಬರುತ್ತೇನೆ ಎಂದು ಹೇಳುವ ಮೂಲಕ ತಾವು ಕೋಲಾರದಲ್ಲೇ ಸ್ಪರ್ಧಿಸುವುದನ್ನು ಅವರು ಖಚಿತಪಡಿಸಿದ್ದಾರೆ. ಬಾದಾಮಿಯಲ್ಲಿ ಸ್ಪರ್ಧಿಸಲು ನನಗೇನೂ ಹೆದರಿಕೆ ಇಲ್ಲ. ಆದರೆ ಬಾದಾಮಿ ಕ್ಷೇತ್ರ ದೂರದಲ್ಲಿದೆ. ಶಾಸಕ ಅಂದರೆ ಜನರ ಪ್ರತಿನಿಧಿ. ಅವರ ಕಷ್ಟ–ಸುಖಕ್ಕೆ ಸ್ಪಂದಿಸುವುದು ಶಾಸಕರ ಜವಾಬ್ದಾರಿ. ದೂರದಲ್ಲಿದ್ದರೆ ಹೋಗಲು ಸಾಧ್ಯವಾಗುವುದಿಲ್ಲ. ಅದಕ್ಕೆ ಹತ್ತಿರದಲ್ಲಿರುವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬ ಅಭಿಪ್ರಾಯ ಹೇಳಿದಾಗ, ವರುಣಾ, ಹೆಬ್ಬಾಳ, ಬಾದಾಮಿ, ಚಾಮರಾಜಪೇಟೆ ಸೇರಿದಂತೆ ಹಲವು ಕ್ಷೇತ್ರಗಳಿಂದ ಸ್ಪರ್ಧಿಸುವಂತೆ ನನಗೆ ಆಹ್ವಾನ ಕೊಟ್ಟಿದ್ದಾರೆ. ಈ ವಿಚಾರವನ್ನು ಹೈಕಮಾಂಡ್ ಜೊತೆಯೂ ಮಾತನಾಡಿದ್ದೇನೆ. ನೀವು ಹೇಳಿದ ಕ್ಷೇತ್ರವನ್ನು ನಾವು ಒಪ್ಪುತ್ತೇವೆ ಎಂದು ಅವರು ತಿಳಿಸಿದ್ದಾರೆ. ಆದರೆ ಹೈಕಮಾಂಡ್ ಸೂಚಿಸಿದ ಕ್ಷೇತ್ರದಲ್ಲಿ ನಾನು ಸ್ಪರ್ಧಿಸುತ್ತೇನೆ ಎಂದು ಹೇಳಿದ ಸಿದ್ದರಾಮಯ್ಯ, ಕೋಲಾರದಿಂದ ಹೆಚ್ಚು ಒತ್ತಡ ಬರುತ್ತಿದೆ ಎಂದು ಪುನರುಚ್ಚರಿಸಿದರು. ಅಲ್ಲದೇ ನಾಮಿನೇಷನ್ ಹಾಕಬೇಕು ಅಂದಾಗ ಮತ್ತೆ ಕೋಲಾರಕ್ಕೆ ಬರ್ತೀನಿ ಎಂದು ಹೇಳುವ ಮೂಲಕ ತಾವು ಸ್ಪರ್ಧಿಸುವ ಕ್ಷೇತ್ರವನ್ನು ಘೋಷಿಸಿದರು.

ಪರಮೇಶ್ವರ್–ಹೆಚ್.ಸಿ. ಮಹದೇವಪ್ಪ ಭೇಟಿ

● ರಾಜಕೀಯ ವಿದ್ಯಮಾನ, ಎಸ್ಸಿ, ಎಸ್ಟಿ ಸಂಘಟನೆ ಬಗ್ಗೆ ಚರ್ಚೆ ● ನ.20ಕ್ಕೆ ಎಸ್ಸಿ, ಎಸ್ಟಿ ಸಮಾವೇಶದ ಪೂರ್ವಭಾವಿ ಸಭೆ ● ದಲಿತ ನಾಯಕರ ಭೇಟಿಯಿಂದ ಮುನ್ನೆಲೆಗೆ ಬರುವುದೇ ದಲಿತ ಮುಖ್ಯಮಂತ್ರಿ ಕೂಗು?



ಮೈಸೂರು, ನ.13–ರಾಜ್ಯ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ ದಲಿತ ನಾಯಕರಾದ ಮಾಜಿ ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಮತ್ತು ಸಿದ್ದರಾಮಯ್ಯನವರ ಆಪ್ತರಾದ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭಾನುವಾರ ಮೈಸೂರಿನಲ್ಲಿ ಭೇಟಿ ಮಾಡಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ.

ರಾಜ್ಯದ ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದ ನಂತರ ಕಾಂಗ್ರೆಸ್‌ನ ದಲಿತ ಮುಖಂಡರಿಗೆ ಹೊಸ ಚೈತನ್ಯ ದೊರೆತಂತಾಗಿದ್ದು, ಖರ್ಗೆ ಅಧ್ಯಕ್ಷರಾದ ನಂತರ ಇವರಿಬ್ಬರೂ ದಲಿತ ನಾಯಕರು ಭೇಟಿಯಾಗಿ ರಾಜಕೀಯ ವಿದ್ಯಮಾನ ಕುರಿತು ಚರ್ಚೆ ಮಾಡಿರುವುದು ಮಹತ್ವ ಪಡೆದುಕೊಂಡಿದೆ. ಇವರ ಭೇಟಿ ಹಿನ್ನೆಲೆಯಲ್ಲಿ ಮತ್ತೆ ದಲಿತ ಮುಖ್ಯಮಂತ್ರಿ ಕೂಗು ಬಲವಾಗಿ ಕೇಳಿ ಬರುವುದೇ ಎಂಬ ಪ್ರಶ್ನೆ ರಾಜಕೀಯ ವಲಯದಲ್ಲಿ ಉದ್ಭವಿಸಿದೆ.

ಇದಕ್ಕೆ ಪೂರಕವೆಂಬಂತೆ ಡಾ. ಜಿ.ಪರಮೇಶ್ವರ್ ಅವರು ಸದ್ಯದಲ್ಲೇ ಎಸ್ಸಿ, ಎಸ್ಟಿ ಸಮಾವೇಶ ನಡೆಸಲು ಸಿದ್ಧತೆ ಮಾಡಿಕೊಂಡಿದ್ದು, ನ.20ರಂದು ಬೆಂಗಳೂರಿನಲ್ಲಿ ▶ 8ನೇ ಪುಟಕ್ಕೆ

ಸಿದ್ದರಾಮಯ್ಯನವರಿಗೆ ಹೈಟೆಕ್ ಬಸ್ ಸಿದ್ಧ

● ಎಂಟು ಆಸನ, ಎಲ್‌ಇಡಿ ಪರದೆ, ಶೌಚಾಲಯ ಲಭ್ಯ, ವಿಶ್ರಾಂತಿ ಪಡೆಯಲು ಮಂಚವೂ ಇದೆ ● ಚುನಾವಣಾ ಭಾಷಣ ಮಾಡಲು ಲಿಫ್ಟ್ ಸೌಲಭ್ಯದ ಪೋಡಿಯಂ ನಿರ್ಮಾಣ ● ಮೊದಲ ದಿನ ಬೆಂಗಳೂರಿನಿಂದ ಕೋಲಾರಕ್ಕೆ ಪ್ರಯಾಣ





ಮೈಸೂರು, ನ.13 (ಎಂಟಿವೈ)– ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ, ಚುನಾವಣಾ ಪ್ರಚಾರಕ್ಕಾಗಿ ರಾಜ್ಯ ಪ್ರವಾಸ ಮಾಡಲು ಅತ್ಯಾಧುನಿಕ ವ್ಯವಸ್ಥೆಯುಳ್ಳ ಹೈಟೆಕ್ ಬಸ್(ಕ್ಯಾರವಾನ್) ಸಜ್ಜುಗೊಳಿಸಲಾಗಿದೆ. 2023ರ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಐಷಾರಾಮಿ ಬಸ್ ಸಜ್ಜುಗೊಳಿಸಲಾಗಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಪ್ರತ್ಯೇಕ ಎರಡು ಹವಾನಿಯಂತ್ರಿತ ಹಾಗೂ ಅತ್ಯಾಧುನಿಕ ಸೌಲಭ್ಯವುಳ್ಳ ಕ್ಯಾರವಾನ್(ಬಸ್) ಸಿದ್ಧಪಡಿಸಲಾಗಿದ್ದು, ತಮಗಾಗಿ ಸಜ್ಜುಗೊಳಿಸಿರುವ ಬಸ್‌ನಲ್ಲಿ ಬೆಂಗಳೂರಿಂದ ಕೋಲಾರಕ್ಕೆ ಪ್ರಾಯೋಗಿಕವಾಗಿ ಸಿದ್ಧರಾಮಯ್ಯ ಪ್ರಯಾಣ ಬೆಳೆಸಿದರು. ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುವ ಅದ್ಧೂರಿ ಬಸ್‌ನಲ್ಲಿ 8 ಆಸನಗಳಿದ್ದು, ಅವುಗಳನ್ನು ಮೇಲಕ್ಕೆ ▶ 8ನೇ ಪುಟಕ್ಕೆ

ಮೈಸೂರಿನ ಎಲೆತೋಟದಲ್ಲಿ ಮತ್ತೆ ಮೊಸಳೆ ಪ್ರತ್ಯಕ್ಷ

● ಕರು ಕೊಂದು ಎಳೆದೊಯ್ದ ಮೊಸಳೆ ● ಮೊಸಳೆ ಸೆರೆ ಕಾರ್ಯಾಚರಣೆ ಮತ್ತೊಮ್ಮೆ ವಿಫಲ






ಮೊಸಳೆ ಸೆರೆಗೆ ಹೊಂಡದಲ್ಲಿರುವ ನೀರನ್ನು ಮೇಲೆತ್ತುವುದನ್ನು ಚಿತ್ರದಲ್ಲಿ ಕಾಣಬಹುದು. ಬಲಚಿತ್ರದಲ್ಲಿ ಹೊಂಡದಲ್ಲಿ ಕರುವಿನ ಕಳೇಬರ.

ಮೈಸೂರು, ನ.13(ಎಂಟಿವೈ)–ಮೈಸೂರಿನ ರಾಮಾನುಜ ರಸ್ತೆಯ 9ನೇ ಕ್ರಾಸ್ ಬಳಿ ಎಲೆತೋಟದಲ್ಲಿ ಮತ್ತೊಮ್ಮೆ ಮೊಸಳೆ ಕಾಣಿಸಿಕೊಂಡಿದ್ದು, ಕರುವೊಂದನ್ನು ಕೊಂದು ಎಳೆದೊಯ್ದ ಹಿನ್ನೆಲೆಯಲ್ಲಿ ಸ್ಥಳೀಯರಲ್ಲಿ ಮತ್ತೆ ಮೊಸಳೆಯ ಆತಂಕ ಹೆಚ್ಚಾಗಿದೆ.

ಕಳೆದ 15 ದಿನದಿಂದ ಎರಡು–ಮೂರು ಬಾರಿ ಪ್ರತ್ಯಕ್ಷಗೊಂಡು ಜನರಲ್ಲಿ ಭಯದ ವಾತಾವರಣ ಉಂಟು ಮಾಡಿದ್ದ ಮೊಸಳೆ ಸೆರೆ ಕಾರ್ಯಾಚರಣೆ ನಡೆಸಲು ಬಂದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಚಳ್ಳೆಹಣ್ಣು ತಿನ್ನಿಸಿ, ಪರಾರಿಯಾಗುತ್ತಿತ್ತು. ಅಲ್ಲದೇ ಎಲೆತೋಟದ ರಸ್ತೆಯ ಸೇತುವೆಯ ಮೇಲೆ ಬಾಯ್ತೆರೆದು ಸಾಕಷ್ಟು ಸಮಯ ಮಲಗಿದ ಸ್ಥಿತಿಯಲ್ಲಿ ಕಂಡು ಬಂದಿದ್ದ ಬೃಹತ್ ಗಾತ್ರದ ಮೊಸಳೆ ಜನರ ನಿದ್ದೆಗೆಡಿಸಿತು. ವಿಷಯ ತಿಳಿದು ಎರಡರಿಂದ ಮೂರು ಬಾರಿ ಮೊಸಳೆ ಹಿಡಿಯಲು ಅರಣ್ಯ ಇಲಾಖೆ ನಡೆಸಿದ ಪ್ರಯತ್ನ ವಿಫಲಗೊಂಡಿತ್ತು.

ಆದರೆ ಭಾನುವಾರ ರಾಮಾನುಜ ರಸ್ತೆಯ 9ನೇ ಕ್ರಾಸ್‌ಗೆ ಹೊಂದಿಕೊಂಡಂತಿರುವ ಎಲೆತೋಟದ ಬಳಿ ಮೇಯುತ್ತಿದ್ದ ಕರುವೊಂದರ ಮೇಲೆ ದಾಳಿ ಮಾಡಿರುವ ಮೊಸಳೆ, ಕರುವನ್ನು ಕೊಂದು ಸಮೀಪದಲ್ಲೇ ನೀರು ತುಂಬಿದ್ದ ಹೊಂಡಕ್ಕೆ ಎಳೆದೊಯ್ದಿದೆ. ಮೊಸಳೆ ಈ ಕೃತ್ಯವನ್ನು ಕಂಡ ಸ್ಥಳೀಯರು ▶ 8ನೇ ಪುಟಕ್ಕೆ

ನಿವೃತ್ತ ಐಟಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆಗೆ ಕಾರಣವಾದ ಕಟ್ಟಡ ನ.16ರಂದು ಪಾಲಿಕೆಯಿಂದಲೇ ತೆರವು ಸಾಧ್ಯತೆ



ಮೈಸೂರು,ನ.13(ಎಂಟಿವೈ)–ಇಂಟಲಿಜೆನ್ಸ್ ಬ್ಯೂರೋ (ಐಬಿ) ನಿವೃತ್ತ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಹತ್ಯೆಗೆ ಕಾರಣವಾದ ನಿಯಮಬಾಹಿರವಾಗಿ ಕಟ್ಟಿರುವ ಕಟ್ಟಡ ನೆಲಸಮಕ್ಕೆ ಗಡುವು ಮುಗಿದಿರುವ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಬುಧವಾರ(ನ.16) ಕಟ್ಟಡ ತೆರವು ಕಾರ್ಯಾಚರಣೆ ನಡೆಸಲು ನಿರ್ಧರಿಸಿದೆ ಎಂದು ಬಲ್ಲಮೂಲಗಳು ತಿಳಿಸಿವೆ.


ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ನಿವಾಸದ ಪಕ್ಕದ ನಿವೇಶನದಲ್ಲಿ ಮಾದಪ್ಪ ಎಂಬುವರು ನಿಯಮ ಗಾಳಿಗೆ ತೂರಿ ಕಟ್ಟಡ ನಿರ್ಮಿಸಿದ್ದರು. ಇದನ್ನು ಆಕ್ಷೇಪಿಸಿದ್ದ ಆರ್.ಎನ್. ಕುಲಕರ್ಣಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ನಿಯಮ ಉಲ್ಲಂಘನೆ ಖಚಿತವಾದ ಹಿನ್ನೆಲೆಯಲ್ಲಿ ಕಟ್ಟಡ ತೆರವು ಮಾಡುವಂತೆ ಮೈಸೂರು ಮಹಾನಗರ ಪಾಲಿಕೆ ನೋಟಿಸ್ ಜಾರಿಗೊಳಿಸಿತ್ತು. ಇದರಿಂದ ಅಸಮಾಧಾನಗೊಂಡಿದ್ದ ಮಾದಪ್ಪ ಅವರ ಮಕ್ಕಳು ನ.4ರಂದು ಸಂಜೆ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯುವಿಹಾರ ನಡೆಸುತ್ತಿದ್ದ ಆರ್.ಎನ್.ಕುಲಕರ್ಣಿ ಅವರನ್ನು ಕಾರಿನಿಂದ ಡಿಕ್ಕಿ ಹೊಡೆದು ಹತ್ಯೆ ಮಾಡಲಾಗಿತ್ತು. ತನಿಖೆ ಆರಂಭಿಸಿದ ಪೊಲೀಸರು ಸಿಸಿಟಿವಿ ಚಿತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಇದೊಂದು ಯೋಜಿತ ಕೊಲೆ ಎಂದು ದೃಢಪಟ್ಟ ಹಿನ್ನೆಲೆಯಲ್ಲಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಕೃತ್ಯ ಸ್ಥಳದಲ್ಲಿ ದೊರೆತ ಸಾಕ್ಷಿ ಹಾಗೂ ತಾಂತ್ರಿಕ ಮಾಹಿತಿ ಆಧರಿಸಿ ಆರ್.ಎನ್.ಕುಲಕರ್ಣಿ ಅವರ ಹತ್ಯೆ ಕೃತ್ಯದಲ್ಲಿ ನೆರೆಮನೆ ನಿವಾಸಿ ಮಾದಪ್ಪ ಅವರ ಮಗ ಹಾಗೂ ಆತನ ಸ್ನೇಹಿತ ಭಾಗಿಯಾಗಿರುವುದು ದೃಢಪಟ್ಟಿತ್ತು.

ನಿವೃತ್ತ ಅಧಿಕಾರಿ ಕುಲಕರ್ಣಿ ಹತ್ಯೆ ಪ್ರಕರಣದಿಂದಾಗಿ ಅಕ್ರಮ ಕಟ್ಟಡ ನೆಲಸಮಕ್ಕೆ ಸಾರ್ವಜನಿಕ ವಲಯದಿಂದಲೂ ಒತ್ತಾಯ ಕೇಳಿ ಬಂದಿತ್ತು. ಕೊಲೆಗೆ ಕಾರಣವಾದ ಅಕ್ರಮ ಕಟ್ಟಡದ ಭಾಗವನ್ನು ನ.12 ರೊಳಗೆ ಸ್ವಯಂ ತೆರವು ಮಾಡುವಂತೆ ಸೂಚನೆ ನೀಡಿದ್ದ ಪಾಲಿಕೆ ಅಧಿಕಾರಿಗಳು, ಒಂದು ವೇಳೆ ಗಡುವಿನ ವೇಳೆಯಲ್ಲಿ ತೆರವುಗೊಳಿಸದಿದ್ದಲ್ಲಿ ಪಾಲಿಕೆ ವತಿಯಿಂದಲೇ ಕಟ್ಟಡದ ತೆರವು ಕಾರ್ಯಾಚರಣೆ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು.

ಕಟ್ಟಡ ತೆರವಿಗಾಗಿ ನೀಡಿದ್ದ ಗಡುವು ಮುಗಿದು 1 ದಿನ ಕಳೆದಿದೆ. ನ.12ರಂದು 2ನೇ ಶನಿವಾರ ಸರ್ಕಾರಿ ರಜೆ, ನ.13ರಂದು ಭಾನುವಾರವಾಗಿರುವ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ನಡೆಸುವ ಪ್ರಯತ್ನವನ್ನು ಪಾಲಿಕೆ ಮಾಡಿಲ್ಲ. ಇನ್ನೆರಡು ದಿನದಲ್ಲಿ ಪಾಲಿಕೆ ವಲಯ ಕಚೇರಿ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ತೆರವು ಕಾರ್ಯಾಚರಣೆ ಆರಂಭಿಸದಿದ್ದರೆ, ನ.16 ಅಥವಾ 17ರ ನಂತರ ಪಾಲಿಕೆಯ ವತಿಯಿಂದಲೇ ತೆರವು ಕಾರ್ಯಾಚರಣೆ ನಡೆಸಲು ಉದ್ದೇಶಿಸಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

“ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡದ ಭಾಗ ತೆರವು ಮಾಡುವಂತೆ ನೀಡಿದ್ದ ಗಡುವು ಮುಗಿದಿದೆ. ಎರಡು ದಿನ ಸರ್ಕಾರಿ ರಜೆ ಇದ್ದ ಕಾರಣ ಪಾಲಿಕೆ ವತಿಯಿಂದ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಇನ್ನೆರಡು ದಿನದಲ್ಲಿ ಕಟ್ಟಡದ ಮಾಲೀಕರು ನಿಯಮ ಉಲ್ಲಂಘಿಸಿ ಕಟ್ಟಿರುವ ಕಟ್ಟಡದ ಭಾಗವನ್ನು ತೆರವುಗೊಳಿಸದಿದ್ದಲ್ಲಿ, ಬುಧವಾರ ಅಥವಾ ಗುರುವಾರದಿಂದ ತೆರವು ಕಾರ್ಯಾಚರಣೆ ನಡೆಸಲಾಗುತ್ತದೆ. ಮುಂದಿನ ವಾರದೊಳಗೆ ಅತಿಕ್ರಮ ಭಾಗವನ್ನು ತೆರವುಗೊಳಿಸುವ ಪ್ರಕ್ರಿಯೆ ಪೂರ್ಣಗೊಳಿಸುತ್ತೇವೆ.



–ಜಿ.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ





ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಮ್ಮ ಮದುವೆಯಾಗಿ 5 ವರ್ಷ ಆಯ್ತು ಕಣ್ರೀ...
ಗಂಡ : ಓ ಹಾಗಾ... ಮತ್ತೆ ಚುನಾವಣೆ ಮಾಡೋ ಚಾನ್ಸ್ ಸಿಗುತ್ತಾ! ಅಥವಾ ಇದೇ ಸರ್ಕಾರ ಮುಂದುವರೆಯುತ್ತಾ!

ಮೈಸೂರು ಮಿತ್ರ
ಸೋಮವಾರ, 14 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

"ಅಸೂಯೆ ಎಂಬುದು ಎಲ್ಲಾ ಗುಲಾಮರ ಹಾನಿಕರ ಲಕ್ಷಣ. ಅದೇ ನಮ್ಮ ದೇಶದ ದೊಡ್ಡ ಪಿಡುಗು. ಅದನ್ನು ಯಾವಾಗಲೂ ತೊಡೆದು ಹಾಕಿ.

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡು.

ನಿಮ್ಮ ಪತ್ರಗಳು

ಮುಖ್ಯಮಂತ್ರಿ ಹುದ್ದೆ ವಂಚಿತ ಮುತ್ಸದ್ದಿ, ವಿ.ಶ್ರೀನಿವಾಸಪ್ರಸಾದ್

ಮಾನ್ಯರೆ,

ಇತ್ತೀಚೆಗೆ ರಾಜಕೀಯ ನಿವೃತ್ತಿ ಘೋಷಿಸಿ ಮಾದರಿಯಾಗಿರುವ, 2024ನೇ



ಇಸವಿಗೆ ರಾಜಕೀಯಕ್ಕೆ ಬಂದು 50 ವರ್ಷ ಪೂರೈಸುತ್ತಿರುವ ಈ ನಾಡು ಕಂಡ ಅತ್ಯಂತ ಹಿರಿಯ ಹೆಮ್ಮೆಯ ರಾಜಕೀಯ ಮುತ್ಸದ್ದಿ ವಿ.ಶ್ರೀನಿವಾಸಪ್ರಸಾದ್. ಇವರು 14 ಚುನಾವಣೆಗಳಲ್ಲಿ ಸ್ಪರ್ಧಿಸಿ 11 ಚುನಾವಣೆಗಳಲ್ಲಿ ಜಯ ಸಾಧಿಸಿದ ಅಪರೂಪದ ಜನನಾಯಕ. ಇವರು ಜನತಾ ಪಕ್ಷ, ಕಾಂಗ್ರೆಸ್, ಬಿಜೆಪಿ ಮತ್ತಿತರ ಪಕ್ಷಗಳ್ಯಾವುದೇ ಇರಲಿ, ಪಕ್ಷಕ್ಕಿಂತ ವ್ಯಕ್ತಿ ಮುಖ್ಯ ಎನ್ನುವ, ನಿರಾಳವಾಗಿ ನಿಶ್ಚಯವಾಗಿ ಗೆಲ್ಲುವ ಅಗಾಧ ವಿಶ್ವಾಸ ಮೂಡಿಸಿದ್ದರು. ಇವರ ಅವಿರತ ಹೋರಾಟದ ಕೇಂದ್ರ ಬಿಂದುವೇ ಅಸಮಾನತೆ, ಅಸ್ಪೃಶ್ಯತೆ, ಅನಕ್ಷರತೆ. ಇವುಗಳ ವಿರುದ್ಧ ಇವರಷ್ಟು ದಿಟ್ಟತನದಿಂದ ಧ್ವನಿ ಎತ್ತುವ ವ್ಯಕ್ತಿ ಇನ್ನೊಬ್ಬರಿಲ್ಲ.

ತಮಗೆ, ತಮ್ಮ ಸಮುದಾಯಕ್ಕೆ ಮುಜುಗರ ತರುವ ಸಂದರ್ಭ ಬಂದಾಗ ಅದು ಆಡಳಿತ ಪಕ್ಷವಿರಲೀ, ವಿರೋಧ ಪಕ್ಷವಿರಲೀ, ಅದೆಂಥ ಮಹಾನಾಯಕರಿರಲೀ, ಮುಲಾಜಿಲ್ಲದೆ ತೀಕ್ಷ್ಣವಾಗಿ ಖಂಡಿಸುವರು. ಅಭಿಮಾನಕ್ಕೆ ಧಕ್ಕೆಯಾದರೆ ಅಧಿಕಾರದ ಜೊತೆಗೆ ಪಕ್ಷವನ್ನೂ ತ್ಯಜಿಸುವಂತಹ ಅಪ್ರತಿಮ ಸ್ವಾಭಿಮಾನಿ. ಒಂದು ಪಕ್ಷ ತೊರೆದು, ಇನ್ನೊಂದು ಪಕ್ಷಕ್ಕೆ ಅಧಿಕಾರಕ್ಕಾಗಿ ಎಂದೂ ಯಾರ ಮನೆ ಬಾಗಿಲಿಗೂ ಇವರು ಹೋದವರಲ್ಲ. ಇವರ ವಿಚಾರದಲ್ಲಿ ರಾಜಕೀಯ ಪಕ್ಷವೇ ನಾ ಮುಂದು, ತಾ ಮುಂದು ಎಂದು ಇವರ ಮನೆಗೆ ಬಂದು ಕಾಡಿ–ಬೇಡಿ ಟಿಕೆಟ್ ನೀಡಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ವಾಡಿಕೆಯೇ ಇಂದಿಗೂ ಇರುವುದು.

ಇವರು ಒಂದು ಮಾತು ಹೇಳಿದರೆ ಸಾಕು, ಇವರು ಹೇಳಿದ ವ್ಯಕ್ತಿಗೆ ಕ್ಯಾಬಿನೆಟ್ ಮಿನಿಸ್ಟರ್, ನಿಗಮ ಮಂಡಳಿ ಅಧ್ಯಕ್ಷರು, ಮೇಯರ್, ಉಪ ಮೇಯರ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷ–ಉಪಾಧ್ಯಕ್ಷರು, ಶಾಸಕ, ಸಂಸದ ಪದವಿಗಳು ಸಲೀಸಾಗಿ ಸಿಗುವುವು. ಇವರು ಶಾಸಕ, ಸಂಸದ, ಕಂದಾಯ ಸಚಿವ, ಕೇಂದ್ರ ಸಚಿವ ಹುದ್ದೆಗಳನ್ನು ಯಾವುದೇ ವಿವಾದಕ್ಕೆ ಒಳಗಾಗದೇ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಪ್ರಾಮಾಣಿಕ ರಾಜಕಾರಣಿ, ಭ್ರಷ್ಟಾಚಾರ, ಅಧಿಕಾರ ದುರುಪಯೋಗದಂತಹ ಆರೋಪಗಳಾಗಲೀ, ಕಳಂಕಗಳಾಗಲೀ ಇವರ ಹತ್ತಿರ ಕೂಡ ಸುಳಿಯುವುದಿಲ್ಲ.

ವ್ಯವಸ್ಥೆಗೆ ಹೊಂದಿಕೊಂಡು ಹೋದರೂ, ವ್ಯವಸ್ಥೆಗೆ ವಿರುದ್ಧವಾಗಿ ಹೋರಾಡಿಕೊಂಡು ಹೋದರೂ ಸಹ ಅಂದುಕೊಂಡಷ್ಟು ಸುಧಾರಣೆಗಳನ್ನು ಸಮಾಜದಲ್ಲಿ ಮಾಡಲು ಸಾಧ್ಯವಾಗಲಿಲ್ಲ ಎಂಬ ನೋವು ಇವರನ್ನು ಕಾಡುತ್ತಲಿದೆ. ಶೋಷಿತರು, ಹಣ, ಅಂತಸ್ತು, ಆಸ್ತಿ ವಿಚಾರದಲ್ಲಿ ಪೈಪೋಟಿ ನೀಡಲು ಸಾಧ್ಯವಿಲ್ಲ. ಮನಸ್ಸು ಮಾಡಿದರೆ ಶಿಕ್ಷಣದಲ್ಲಿ ಇತರರಿಗೆ ಧಾರಾಳವಾಗಿ ಪೈಪೋಟಿ ನೀಡಬಹುದು. ಆದುದರಿಂದ ಇತರರನ್ನು ದೂಷಿಸುತ್ತಾ ಕಾಲ ಕಳೆಯುವ ಬದಲು ನಮ್ಮ ಸಮಾಜಕ್ಕೆ ಶತ್ರುಗಳಾಗಿರುವ ಕುಡಿತ, ಅನಕ್ಷರತೆ, ಅತೀ ಸಂತಾನಗಳನ್ನು ದಮನ ಮಾಡಿ, ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದು ಸ್ವಾಭಿಮಾನಿಗಳಾಗಿ, ಸ್ವಾವಲಂಬಿಗಳಾಗಿ ಎಂದು ಎಚ್ಚರಿಸುವ ಕೆಲಸವನ್ನು ಈಗಲೂ ಮಾಡುತ್ತಿದ್ದಾರೆ.

ಇವರ ಅರ್ಹತೆಗೆ, ಇವರ ದಕ್ಷತೆಗೆ ಮುಖ್ಯಮಂತ್ರಿ ಹುದ್ದೆಯೂ ಕಡಿಮೆಯೇ. ಆದರೆ ಜಾತಿಯ ಮೇಲೆ ನಿರ್ಣಯ, ನಿರ್ಧಾರ ಕೈಗೊಳ್ಳುವ ಕೊಳಕು ಮನಸ್ಸುಗಳೇ ಇಂದಿಗೂ ವಿಜೃಂಭಿಸುತ್ತಿರುವುದರಿಂದ ಮುಖ್ಯಮಂತ್ರಿ ಹುದ್ದೆ ಇವರಿಗೆ ದಕ್ಕಲಿಲ್ಲ. ಬಿ.ರಾಚಯ್ಯ, ಬಿ.ಬಸವಲಿಂಗಪ್ಪ, ಮಲ್ಲಿಕಾರ್ಜುನ ಖರ್ಗೆ, ವಿ.ಶ್ರೀನಿವಾಸಪ್ರಸಾದ್‌ರಂತಹ ಅರ್ಹರಿಗೆ ಮುಖ್ಯಮಂತ್ರಿ ಹುದ್ದೆ ಸಿಗುವಂತಾಗಲು ವ್ಯವಸ್ಥೆಯಲ್ಲಿ ಬದಲಾವಣೆ ತರುವ ಪ್ರಬುದ್ಧ ಚಿಂತನೆಯ ಅಗತ್ಯ ಇದೆ.

– ಶ್ರೀಧರ, ಎಸ್.ಕಲ್ಕುಣಿ, ಬೋಗಾದಿ ಮೈಸೂರು.

ಶಿಕ್ಷಣ ವ್ಯಾಪಾರವಲ್ಲ: ಸುಪ್ರೀಂ ಹೇಳಿಕೆ ಗಮನಾರ್ಹ

ಮಾನ್ಯರೆ,

ಉನ್ನತ ಶಿಕ್ಷಣ ಎನ್ನುವುದು ಹಣ ಇದ್ದವರಿಗೆ ಮಾತ್ರ ಎನ್ನುವಂತಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಆಡಳಿತ ನಡೆಸುವ ಸರ್ಕಾರ ಆರೋಗ್ಯ, ಶಿಕ್ಷಣ, ಸ್ವಂತ ವಸತಿ ಕಲ್ಪಿಸಿ ಕೊಡಬೇಕಾದದ್ದು ಸರ್ಕಾರದ ಧರ್ಮ. ಆದರೆ ಪ್ರಸ್ತುತ ದಿನಗಳಲ್ಲಿ ಆರೋಗ್ಯ, ಶಿಕ್ಷಣ, ವಸತಿ ಹಣ ಉಳ್ಳವರಿಗೆ ಮಾತ್ರ ಎನ್ನುವಂತಾಗಿದೆ. ಇಂತಹ ಪ್ರಸ್ತುತ ದಿನಗಳಲ್ಲಿ ಎಂಬಿಬಿಎಸ್ ಶಿಕ್ಷಣ ಬೋಧನಾ ಶುಲ್ಕವನ್ನು 7 ಲಕ್ಷ ರೂಪಾಯಿಗಳಿಂದ 24 ಲಕ್ಷ ರೂಪಾಯಿಗೆ ಏರಿಸಿರುವ ಆಂಧ್ರ ಪ್ರದೇಶ ಸರ್ಕಾರದ ಕ್ರಮ ಅಸಮರ್ಥನೀಯ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಮತ್ತು ಸುಧಾಂಶು ಧುಲಿಯಾ ಅವರು ಶಿಕ್ಷಣ ಲಾಭ ಮಾಡುವ ವ್ಯಾಪಾರವಲ್ಲ ಬೋಧನಾ ಶುಲ್ಕ ಕೈಗೆಟುಕುವಂತಿರಬೇಕು ಎಂದು ಹೇಳಿದ್ದಾರೆ.

ಆಂಧ್ರ ಸರ್ಕಾರ ನಿರ್ಧಾರವನ್ನು ತಳ್ಳಿ ಹಾಕಿದ ಆಂಧ್ರ ಪ್ರದೇಶದ ಹೈಕೋರ್ಟ್ ಆದೇಶವನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿರುವುದು ಗಮನಾರ್ಹ

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು.

ಇದೇನು ರಸ್ತೆಯೋ, ಕೆಸರು ಗದ್ದೆಯೋ

ಮಾನ್ಯರೆ,

ನಾವು ವೃತ್ತಿಯಲ್ಲಿ ಶಾಲಾ ಮಕ್ಕಳ ವ್ಯಾನ್ ಚಾಲಕರಾಗಿದ್ದು, ಮೈಸೂರಿನ ವಿ.ವಿ. ಮೊಹಲ್ಲಾ ನಿರ್ಮಲಾ ಕಾನ್ವೆಂಟ್ ಶಾಲೆಯ ಮುಂದಿನ ರಸ್ತೆಯು ಗುಂಡಿಮಯವಾಗಿದೆ. ವಾಹನ ಚಲಾಯಿಸುವುದಿರಲಿ ನಡೆದಾಡು ವುದೂ ದುಸ್ತರವಾಗಿದೆ. ಪಾಪ ಶಾಲಾ ಮಕ್ಕಳ ಪರಿಸ್ಥಿತಿಯನ್ನು ಆ ದೇವರೇ ಕಾಪಾಡಬೇಕು. ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗಿಲ್ಲ. ಈ ರಸ್ತೆಯನ್ನು ಉತ್ತಮ ಗುಣಮಟ್ಟದಲ್ಲಿ ಸಂಪೂರ್ಣ ಡಾಂಬರೀಕರಣಗೊಳಿಸಬೇಕೆಂದು ಮನವಿ.

– ನೊಂದ ಶಾಲಾ ಮಕ್ಕಳ ಪೋಷಕರು, ವ್ಯಾನ್ ಚಾಲಕರು, ಮೈಸೂರು.

ತಂಗುದಾಣಕ್ಕೆ ಬೆಳಕಿನ ಸೌಲಭ್ಯ ಕಲ್ಪಿಸಿ


ಮಾನ್ಯರೆ,

ಮೈಸೂರು ನಗರದ ಯಾದವಗಿರಿ ಅಂಚೆ ಕಚೇರಿಯ ಎಡಭಾಗದಲ್ಲಿರುವ ತಂಗುದಾಣಕ್ಕೆ ಬೆಳಕಿನ ಸೌಲಭ್ಯವಿಲ್ಲ. ಹೀಗಾಗಿ ಈ ಪ್ರದೇಶದಲ್ಲಿರುವ ಅನೇಕ ಕಚೇರಿಗಳ, ಕಾರ್ಖಾನೆಗಳ ನೌಕರರು ಮತ್ತು ಸಾರ್ವಜನಿಕರು ಕತ್ತಲಿನಲ್ಲಿ ಭಯದಿಂದ ಈ ತಂಗು ದಾಣದಲ್ಲಿ ಬಸ್ಸಿಗಾಗಿ ಕಾಯಬೇಕಾಗಿದೆ. ಆದ ಕಾರಣ ಸಂಬಂಧಪಟ್ಟ ನಗರ ಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಈ ತಂಗುದಾಣಕ್ಕೆ ಬೆಳಕಿನ ಸೌಲಭ್ಯ ಕಲ್ಪಿಸಬೇಕೆಂದು ಈ ಮೂಲಕ ಮನವಿ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ಇಂದು ಮಕ್ಕಳ ದಿನಾಚರಣೆ

"ಮಕ್ಕಳಲ್ಲಿ ದೇವರನ್ನು ಕಾಣಿ, ಮಕ್ಕಳು ಮನೆಯಂಗಳ ಬೆಳಗುವ ಮಂಗಳ ದೀಪಗಳು, ಶಾಲೆಯೇ ದೇವಸ್ಥಾನ, ವಿದ್ಯಾರ್ಥಿಗಳೇ ದೇವರು, ಶಿಕ್ಷಕನೇ ಪೂಜಾರಿ."



ಜವಾಹರಲಾಲ್ ನೆಹರೂ ಅವರು 1889ರ ನವೆಂಬರ್ 14 ರಂದು ಅಲಹಾಬಾದ್‌ನಲ್ಲಿ ಜನಿಸಿದರು. ತಂದೆ ಮೋತಿಲಾಲ್ ನೆಹರೂ, ತಾಯಿ ಸ್ವರೂಪ ರಾಣಿ. ಇವರದು ಆಗರ್ಭ ಶ್ರೀಮಂತ ಕುಟುಂಬವಾಗಿತ್ತು. ಪಂಡಿತ್ ಜವಾಹರಲಾಲ್ ನೆಹರೂ ಅವರ ಜನ್ಮದಿನದ ಜ್ಞಾಪಕಾರ್ಥವಾಗಿ 'ಮಕ್ಕಳ ದಿನ'ವನ್ನಾಗಿ ಆಚರಿಸುತ್ತೇವೆ. ನೆಹರೂ ಅವರಿಗೆ ಮಕ್ಕಳು ಎಂದರೆ ಪ್ರಾಣ.

ಅಲ್ಲದೇ ಗುಲಾಬಿ ಹೂ ಪ್ರಿಯವಾಗಿತ್ತು. ನೆಹರೂ ಅವರ ಅಭಿಮಾನಿಗಳು ಅವರ ಜನ್ಮ ದಿನಾಚರಣೆ ಆಚರಿಸಲು ಅವರನ್ನು ಕೇಳಿದರು. ಆಗ ನೆಹರೂ ಅವರು, ನನ್ನ ಜನ್ಮ ದಿನಾಚರಣೆ ಆಚರಿಸಬೇಡಿ, ನಾನು ಇಂದೋ–ನಾಳೆಯೋ ಬಿದ್ದು ಹೋಗುವ ಮರ. ಮಕ್ಕಳು ಅರಳುವ ಹೂವುಗಳು, ನಾಳಿನ ಭವಿಷ್ಯದ ರೂವಾರಿಗಳು. ಇಂದಿನ ಮಕ್ಕಳೇ ಮುಂದಿನ ನಾಯಕರು. ಆದ್ದರಿಂದ ನೀವು ಮಕ್ಕಳ ದಿನಾಚರಣೆಯನ್ನು ಆಚರಿಸಿರಿ ಎಂದರು. ಅಂದಿನಿಂದ ಪ್ರತಿ ವರ್ಷ ನವೆಂಬರ್ 14ರ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ನೆಹರೂ ಅವರನ್ನು ಮಕ್ಕಳು ಮುದ್ದಾಗಿ 'ಚಾಚಾ ನೆಹರೂ' ಎಂದು ಕರೆಯುತ್ತಿದ್ದರು. ನೆಹರೂ ಅವರು ಯಾವುದೇ ಸಭೆ–ಸಮಾರಂಭಗಳಿಗೆ ತೆರಳಿದಾಗ ಮಕ್ಕಳನ್ನು ಆದರಿಸಿ ಪ್ರೀತಿಯಿಂದ ಮಾತನಾಡಿಸಿ, ಅವರಿಗೆ ಗುಲಾಬಿ ಹೂವನ್ನು ಕೊಡುತ್ತಿದ್ದರು.

ವ್ಯಕ್ತಿ ಪೂಜೆಗಿಂತ ಮಕ್ಕಳ ಶ್ರೇಯಸ್ಸು ಮುಖ್ಯವೆಂದು ಅವರು ಆಗಾಗ ಹೇಳುತ್ತಿದ್ದರು. ಶ್ರೀಮಂತ ಮನೆತನದಲ್ಲಿ ಹುಟ್ಟಿದ್ದರೂ, ಅಲ್ಪರಿಗೂ, ಬಡವರಿಗೂ ಹಾಗೂ ದೀನ–ದಲಿತರಿಗೂ ಉಪಕಾರ, ಸಹಾಯ ಮಾಡುತ್ತಿದ್ದರು. ಹೆಚ್ಚು ಓದಿದ್ದರೂ ಕೂಡ ಅದನ್ನು ತೋರಿಸದೆ, ಎಲ್ಲರೊಡನೆ ಬೆರೆತು ಅವರ ಕಷ್ಟ–ನಷ್ಟಗಳಿಗೆ ಸ್ಪಂದಿಸುತ್ತಿದ್ದರು. ಇದು ಇವರ ವಿಶೇಷ ಗುಣ. ಇವರು ಕಾಶ್ಮೀರದಲ್ಲಿ ಇದ್ದಾಗ ಇವರನ್ನು ರಾಜಕುಲ ಕುಟುಂಬದವರು ಎಂದು ಕರೆಯುತ್ತಿದ್ದರು. ಜವಾಹರಲಾಲ್ ನೆಹರೂ ಅವರು ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದರು. ಅನಂತರ ಬ್ಯಾರಿಸ್ಟರ್ ಪದವಿ ಪಡೆದರು. ವಕೀಲ ವೃತ್ತಿಯನ್ನೂ ಕೂಡ ಆರಂಭಿಸಿದರು. ಜವಾಹರಲಾಲ್ ನೆಹರೂ ಅವರ ಶ್ರೀಮತಿಯ ಹೆಸರು ಕಮಲಾ ನೆಹರೂ. ಈ ದಂಪತಿಗಳಿಗೆ ಇಂದಿರಾಗಾಂಧಿ ಎಂಬ ಪುತ್ರಿ ಜನಿಸಿದರು.

ಜವಾಹರಲಾಲ್ ನೆಹರೂ ಅವರು ಮಹಾತ್ಮಗಾಂಧೀಜಿ ಅವರ ಕರೆಗೆ ಓಗೊಟ್ಟು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಅನೇಕ ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದರು. ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿಗಳಾಗಿ ಕ್ರಿ.ಶ.1947 ರಿಂದ 1964ರವರೆಗೂ ಸತತ 17 ವರ್ಷಗಳ ಕಾಲ ಜವಾಹರಲಾಲ್ ನೆಹರೂ ಅವರು ಭಾರತದ ಪ್ರಗತಿಗೆ ಭದ್ರ ಬುನಾದಿ ಹಾಕಿದರು.

ಕ್ರಿ.ಶ. 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಭಾರತದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಸ್ವಾತಂತ್ರ್ಯ ಸಂದರ್ಭದಲ್ಲಿ ಕರ್ತವ್ಯ, ಅನಕ್ಷರತೆ, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳಿಂದ ತುಂಬಿತ್ತು. ಇಂತಹ ಸಮಯದಲ್ಲಿ ನೆಹರೂ ಅವರು ದಿಟ್ಟತನದಿಂದ ಪ್ರಧಾನಮಂತ್ರಿ ಪೀಠ ಏರಿ ಸಮಸ್ಯೆಗಳನ್ನು ನಿವಾರಿಸಲು ಶ್ರಮಿಸಿದರು.

ನೆಹರೂ ಅವರು ಅಲಿಪ್ತ ನೀತಿಯ ನೇತಾರ ಮತ್ತು ಶಾಂತಿದೂತರೂ ಸಹ ಹೌದು. ಪಂಚಶೀಲ ತತ್ವಗಳನ್ನು ಜಾರಿಗೆ ತಂದರು. ತಮ್ಮ ನೇತೃತ್ವದಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಅವರ ಕಾಲದಲ್ಲಿ ರೂಪುಗೊಂಡ ಪಂಚವಾರ್ಷಿಕ ಯೋಜನೆಗಳಲ್ಲಿ ವ್ಯವಸಾಯ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆಗಳಿಗೂ ಹೆಚ್ಚಿನ ಆದ್ಯತೆಗಳನ್ನು ಕೊಟ್ಟರು. ದೇಶದ ಪ್ರಜೆಗಳಿಗೆ ಮೊದಲು ಆಹಾರ ಪೂರೈಕೆ ಅಗತ್ಯವೆಂದು ವ್ಯವಸಾಯ ಕ್ರಮಗಳಿಗೆ ಹೆಚ್ಚಿನ ಗಮನ ಕೊಟ್ಟರು. ಶಿಕ್ಷಣ, ಸಮಾಜದ ಏಳಿಗೆಗಳಿಗೂ ಸ್ಥಾನಗಳನ್ನು ಹೆಚ್ಚಿಸಿದರು. ಇವರು ಉತ್ತಮ ಸಾಹಿತಿಗಳಲ್ಲೊಬ್ಬರಾಗಿದ್ದರು. ಇವರು ಬರೆದ Glimpses of World History(1934), Auto biography(1936) ಮತ್ತು Discovery of India (1946) ಮುಂತಾದ ಪುಸ್ತಕಗಳು ಬಹಳ ಪ್ರಸಿದ್ಧಿಯಲ್ಲಿವೆ. ಸಹಾನುಭೂತಿ, ವಿನಯ, ವಿಧೇಯತೆ ಹಾಗೂ ಸಹಜೀವನ ಮುಂತಾದವುಗಳು ಅವರಲ್ಲಿ ಕಂಡು ಬಂದ ವಿಶೇಷ ಗುಣಗಳು.

> "ನೆಹರೂ ಅವರ ಅಭಿಮಾನಿಗಳು ಅವರ ಜನ್ಮ ದಿನಾಚರಣೆ ಆಚರಿಸಲು ಅವರನ್ನು ಕೇಳಿದರು. ಆಗ ನೆಹರೂ ಅವರು, ನನ್ನ ಜನ್ಮ ದಿನಾಚರಣೆ ಆಚರಿಸಬೇಡಿ, ನಾನು ಇಂದೋ-ನಾಳೆಯೋ ಬಿದ್ದು ಹೋಗುವ ಮರ. ಮಕ್ಕಳು ಅರಳುವ ಹೂವುಗಳು, ನಾಳಿನ ಭವಿಷ್ಯದ ರೂವಾರಿಗಳು. ಇಂದಿನ ಮಕ್ಕಳೇ ಮುಂದಿನ ನಾಯಕರು. ಆದ್ದರಿಂದ ನೀವು ಮಕ್ಕಳ ದಿನಾಚರಣೆಯನ್ನು ಆಚರಿಸಿರಿ ಎಂದರು. ಅಂದಿನಿಂದ ಪ್ರತಿ ವರ್ಷ ನವೆಂಬರ್ 14ರ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ.

ಅವರ ಮಾರ್ಗದರ್ಶನ ನಮ್ಮ ನಾಗರಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಮಕ್ಕಳಿಗೆ ಮೇಲ್ಪಂಕ್ತಿಯಾಗಿದೆ. ಒಬ್ಬ ಧೀಮಂತ ಆದರ್ಶ ವ್ಯಕ್ತಿಯಾಗಿ ಬದುಕಿನ ಚೇತನ ನೆಹರೂ ಅವರದ್ದು. ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ನೆಹರೂ ಅವರು ಮಕ್ಕಳ ಹಿತಕ್ಕಾಗಿ ದುಡಿದರು. ದೈಹಿಕ, ಮಾನಸಿಕ ಬೆಳವಣಿಗೆ ಹೆಚ್ಚಾದಂತೆ ಮುಂದೆ ಮಕ್ಕಳು ರಾಷ್ಟ್ರಕ್ಕೆ ಹೆಚ್ಚಿನ ಸೇವೆ ಸಲ್ಲಿಸಬಹುದು. ಆದ್ದರಿಂದ ಶಾಲೆಗಳಲ್ಲಿ, ಮನೆಗಳಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಗುರುಗಳು, ಪೋಷಕರು ಮತ್ತು ತಂದೆ–ತಾಯಂದಿರು ಮುಖ್ಯ ಪಾತ್ರ ವಹಿಸಬೇಕು. ದೇಶಾದ್ಯಂತ ಆಚರಿಸುವ 'ಮಕ್ಕಳ ದಿನಾಚರಣೆ' ಕೇವಲ ಸಮಾರಂಭ ವಾಗದೆ, ನೆಹರೂ ಅವರ ಆದರ್ಶ ಜೀವನ, ರಾಷ್ಟ್ರ ಪ್ರೇಮ, ಅವರ ವಿಶೇಷ ಗುಣ ಮುಂತಾದವುಗಳನ್ನು ಅನುಸರಿಸುವುದು ಮುಖ್ಯ. ನೆಹರೂ ಅವರ ಜಯಂತಿ ಮಕ್ಕಳ ಜಯಂತಿ. ಅವರಂತೆ ನಮ್ಮ ಮಕ್ಕಳನ್ನು ಬೆಳೆಸುವುದು ನಮ್ಮೆಲ್ಲರ ಕರ್ತವ್ಯ.

– ಆರ್.ಜಯನಾಯಕ್, ಎಂ.ಎ., ಬಿ.ಇಡಿ., ಕೊಡಗು. ಮೊ: 8277236075.

ಓದಿನ ಜೊತೆಗೆ ಕೌಶಲ್ಯ ವೃದ್ಧಿಸಿಕೊಂಡರೆ ಭವಿಷ್ಯ ಉಜ್ವಲ



ಮೈಸೂರು, ನ.13– ಯುವ ಸಮುದಾಯ ಓದಿನ ಜೊತೆಗೆ ಕೌಶಲ್ಯ ವೃದ್ಧಿಸಿಕೊಂಡಾಗ ಮಾತ್ರ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ಸಾಧ್ಯ ಎಂದು ಹೋಮಿಯೋಪತಿ ವೈದ್ಯರು ಹಾಗೂ ಅರಿವು ಶಿಕ್ಷಣ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಡಾ. ಎಂ.ಸಿ.ಮನೋಹರ್ ಸಲಹೆ ನೀಡಿದರು.

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಎನ್‌ಎಸ್‌ಎಸ್ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಸೇವಾ ಯೋಜನೆಯ 2022–23ನೇ ಸಾಲಿನ ಕಾರ್ಯ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಹೆಚ್ಚಿದ್ದರೂ ಕೌಶಲ್ಯ ಪಡೆದವರ ಸಂಖ್ಯೆ ಕಡಿಮೆಯಿದೆ. ಹಾಗಾಗಿ ಹೆಚ್ಚಿನವರು ತಮಗೆ ಬೇಕಾದ ಉದ್ಯೋಗವನ್ನು ದಕ್ಕಿಸಿಕೊಳ್ಳಲು ವಿಫಲರಾಗುತ್ತಿದ್ದಾರೆ. ಕಲಿಕೆಯ ಜೊತೆಗೆ ಕೌಶಲ್ಯವೂ ಇದ್ದರೆ ಸುಲಭವಾಗಿ ಉದ್ಯೋಗ ದಕ್ಕಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಕಾಲೇಜಿನಲ್ಲಿದ್ದಾಗ ನಡೆಸಲಾದ ಎನ್‌ಎಸ್‌ಎಸ್ ಚಟುವಟಿಕೆಗಳು ನಮ್ಮ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಸೇವಾ ಮನೋಭಾವ, ಸ್ವಚ್ಛತೆ, ಪರಿಸರ ಕಾಳಜಿ ಹಾಗೂ ಏನಾದರೂ ಸಾಧಿಸಬೇಕೆಂಬ ಹುಬಲ ಸಮಾಜ ಸೇವೆಯಲ್ಲಿ ತೊಡಗುವಂತೆ ಮಾಡಿವೆ. ಅರಿವು ಶಿಕ್ಷಣ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಗೆ ಸೇವಾ ಮನೋಭಾವವೇ ಮುಖ್ಯ ಪ್ರೇರಣೆ ಎಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ ಸೋಮಣ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಎನ್‌ಎಸ್‌ಎಸ್ ಕಾರ್ಯ ಸ್ವರೂಪಗಳಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಶ್ರಮದಾನ, ಸ್ವಚ್ಛತಾ ಕಾರ್ಯಕ್ರಮಕ್ಕಿಂತ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡುವುದು ಇಂದಿನ ಅಗತ್ಯ ಎಂದು ಅಭಿಪ್ರಾಯಪಟ್ಟರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ.ಆರ್. ನಳಿನಿ, ಐಕ್ಯೂಎಸಿ ಸಂಚಾಲಕ ಡಾ.ಎಸ್. ಮಂಜು, ಎನ್‌ಎಸ್‌ಎಸ್ ಅಧಿಕಾರಿಗಳಾದ ಡಾ.ಕೆ.ಇ.ಗೋವಿಂದೇಗೌಡ, ಡಾ.ಎಚ್.ಎಸ್. ಧನಲಕ್ಷ್ಮಿ, ಕನ್ನಡ ಅಧ್ಯಾಪಕ ಎಚ್.ಎಸ್. ಶಂಕರಪ್ಪ ಎನ್‌ಎಸ್‌ಎಸ್ ತಂಡದ ನಾಯಕಿ ಮೇಘನಾ ಎಂ.ಮಲ್ಲಣ್ಣ ಹಾಜರಿದ್ದರು. ಸ್ವಯಂಸೇವಕಿ ವೈಷ್ಣವಿರಾಜ್ ಸ್ವಾಗತಿಸಿದರು. ಸ್ವಯಂಸೇವಕಿ ಭೂಮಿಕಾ ನಿರೂಪಿಸಿದರು. ಸ್ವಯಂಸೇವಕಿ ಮೇಘಶ್ರೀ ಸೌಪರ್ಣಿಕ ವಂದಿಸಿದರು. ಸ್ಪಂದನ ಮತ್ತು ತಂಡ ಪ್ರಾರ್ಥನೆ ಗೀತೆ ಹಾಡಿದರು. ವೈಷ್ಣವಿ ಮತ್ತು ಸುಷ್ಮಿತ ತಂಡ ಎನ್‌ಎಸ್‌ಎಸ್ ಗೀತೆ ಹಾಡಿದರು.

ಜಿ–20 ಶೃಂಗಸಭೆ: ಪ್ರಮುಖ ಚರ್ಚೆಗಳಲ್ಲಿ ಪಾಲ್ಗೊಳ್ಳಲಿರುವ ಮೋದಿ

ನವದೆಹಲಿ, ನ.13– ಇಂಡೊನೇಷ್ಯಾದ ಬಾಲಿಯಲ್ಲಿ ನಡೆಯಲಿರುವ ಜಿ20 ನಾಯಕರ ಶೃಂಗಸಭೆಯಲ್ಲಿ ಆಹಾರ ಮತ್ತು ಇಂಧನ ಭದ್ರತೆ, ಡಿಜಿಟಲ್ ರೂಪಾಂತರ ಮತ್ತು ಆರೋಗ್ಯ ವಿಷಯಗಳ ಕುರಿತ ಚರ್ಚೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವರು ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಭಾನುವಾರ ತಿಳಿಸಿದ್ದಾರೆ. ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮೋದಿ ಅವರು ಸೋಮವಾರ ಬಾಲಿಗೆ ತೆರಳಲಿದ್ದಾರೆ ಎಂದೂ ಹೇಳಿದ್ದಾರೆ. ಶೃಂಗಸಭೆಯಲ್ಲಿ ಉಕ್ರೇನ್ ಯುದ್ಧ ಮತ್ತು ಅದರ ಪರಿಣಾಮಗಳು ಸೇರಿದಂತೆ ಜಾಗತಿಕ ಮಟ್ಟದ ವಿವಿಧ ಸವಾಲುಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದಿದ್ದಾರೆ.

ಅಯೋಧ್ಯೆ ಮಸೀದಿ ನಿರ್ಮಾಣ ಕಾರ್ಯ 2023ಕ್ಕೆ ಪೂರ್ಣ ಸಾಧ್ಯತೆ

ಲಕ್ನೋ, ನ.13– ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ಮಸೀದಿಯ ಕಾಮಗಾರಿಯು 2023ರ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಈ ಸಂಬಂಧ ಟ್ರಸ್ಟ್ ಮಾಹಿತಿ ನೀಡಿದೆ.



ರಾಮ ಜನ್ಮಭೂಮಿ–ಬಾಬರಿ ಮಸೀದಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಅಯೋಧ್ಯೆಯಲ್ಲಿ ಮಸೀದಿ ನಿರ್ಮಿಸಲಾಗುತ್ತಿದೆ. ಪ್ರಸ್ತಾವಿತ ಮಸೀದಿ, ಆಸ್ಪತ್ರೆ, ಸಮುದಾಯ ಅಡುಗೆ ಕೋಣೆ, ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರದ ನಕ್ಷೆಗೆ ಈ ತಿಂಗಳ ಅಂತ್ಯದೊಳಗೆ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಸಿಗಲಿದೆ ಎಂದು ನಾವು ಭಾವಿಸಿದ್ದೇವೆ. ಶೀಘ್ರದಲ್ಲೇ ನಾವು ಮಸೀದಿಯ ನಿರ್ಮಾಣವನ್ನು ಪ್ರಾರಂಭಿಸುತ್ತೇವೆ ಎಂದು ಇಂಡೋ–ಇಸ್ಲಾಮಿಕ್ ಕಲ್ಚರಲ್ ಫೌಂಡೇಶನ್ ಟ್ರಸ್ಟ್ ಕಾರ್ಯದರ್ಶಿ ಅಥರ್ ಹುಸೇನ್ ತಿಳಿಸಿದ್ದಾರೆ.

ಧನ್ನಿಪುರ ಅಯೋಧ್ಯೆ ಮಸೀದಿಯ ನಿರ್ಮಾಣವು ಡಿಸೆಂಬರ್ 2023 ರ ಅಂತ್ಯದ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಐದು ಎಕರೆ ವಿಸ್ತೀರ್ಣದಲ್ಲಿ ಮಸೀದಿ ನಿರ್ಮಾಣವಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಸುದೀರ್ಘ ಕಾಲದ ಅಯೋಧ್ಯೆ ವಿವಾದದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಬಾಬರಿ ಮಸೀದಿ ಇದ್ದ 2.77 ಎಕರೆ ಜಾಗದಲ್ಲಿ ರಾಮಮಂದಿರವನ್ನು ನಿರ್ಮಿಸಲು ಆದೇಶಿಸಿತು. ಉತ್ತರ ಪ್ರದೇಶದಲ್ಲೇ ಬೇರೆಡೆ ಮಸೀದಿ ನಿರ್ಮಿಸಲು ಐದು ಎಕರೆ ಜಾಗವನ್ನು ಮಂಜೂರು ಮಾಡುವಂತೆ ಆದೇಶಿಸಿತ್ತು. ಅಯೋಧ್ಯೆ ರಾಮಮಂದಿರ ದೇವಾಲಯದ ಭೂಮಿಪೂಜೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಆಗಸ್ಟ್ 2020 ರಲ್ಲಿ ನೆರವೇರಿಸಿದರು. ದೇವಾಲಯದ ಟ್ರಸ್ಟ್ ಪ್ರಕಾರ, ಜನವರಿ 2024 ರ ವೇಳೆಗೆ ರಾಮಮಂದಿರ ಭಕ್ತರ ದರ್ಶನಕ್ಕೆ ತೆರೆಯುವ ಸಾಧ್ಯತೆಯಿದೆ. ಮಸೀದಿ ನಿರ್ಮಾಣಕ್ಕಾಗಿ ಉತ್ತರ ಪ್ರದೇಶ ಸುನ್ನಿ ಸೆಂಟ್ರಲ್ ವಕ್ಫ್ ಬೋರ್ಡ್ ರಚಿಸಿರುವ ಇಂಡೋ–ಇಸ್ಲಾಮಿಕ್ ಕಲ್ಚರಲ್ ಫೌಂಡೇಶನ್ ಟ್ರಸ್ಟ್ ಆಸ್ಪತ್ರೆ ಸಮುದಾಯ ಅಡುಗೆ ಮನೆ, ಗ್ರಂಥಾಲಯ ಮತ್ತು ಸಂಶೋಧನಾ ಸಂಸ್ಥೆಯನ್ನು ನಿರ್ಮಿಸಲು ನಿರ್ಧರಿಸಿದೆ. ಆಸ್ಪತ್ರೆಯು ಆರಂಭದಲ್ಲಿ 100 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ನಂತರ ಅದನ್ನು 200ಕ್ಕೆ ಹಾಸಿಗೆ ವ್ಯವಸ್ಥೆಗೆ ನವೀಕರಿಸಲಾಗುವುದು. ಸಮುದಾಯ ಅಡುಗೆಮನೆಯು ಆರಂಭದಲ್ಲಿ ಪ್ರತಿದಿನ 1,000 ಜನರಿಗೆ ಆಹಾರ ಪೂರೈಸುವ ವ್ಯವಸ್ಥೆ ಹೊಂದಿರುತ್ತದೆ ಎಂದು ಹುಸೇನ್ ಹೇಳಿದ್ದಾರೆ.

ಚಾಮುಂಡಿಬೆಟ್ಟದ ನಂದಿಗೆ ವೈಭವದ ಮಹಾಭಿಷೇಕ



ಬೆಟ್ಟದ ರಸ್ತೆ ದುರಸ್ತಿ ಹಿನ್ನೆಲೆಯಲ್ಲಿ ಸರಳವಾಗಿ ಆಚರಣೆ




ಮೈಸೂರು, ನ.13(ಎಂಟಿವೈ)– ಕಾರ್ತಿಕ ಮಾಸದ ಅಂಗವಾಗಿ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ವತಿಯಿಂದ ಚಾಮುಂಡಿಬೆಟ್ಟದಲ್ಲಿರುವ ಪುರಾತನ ನಂದಿ ವಿಗ್ರಹಕ್ಕೆ ಭಾನುವಾರ 17ನೇ ವರ್ಷದ ಮಹಾಭಿಷೇಕವನ್ನು ವಿಜೃಂಭಣೆ ಯಿಂದ ನೆರವೇರಿಸಲಾಯಿತು.

ಮಹಾಭಿಷೇಕದ ಪೂಜಾ ಮಹೋತ್ಸವದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹಾಗೂ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಅವರು ನಂದಿ ಮೂರ್ತಿಗೆ ಹಾಲಭಿಷೇಕ ಮಾಡುವ ಮೂಲಕ ಚಾಲನೆ ನೀಡಿದರು. ಬಳಿಕ ಪೂಜಾ ಮಹೋತ್ಸವದಲ್ಲಿ ಖಾದ್ಯ ಮಧುಪರ್ಕ, ಖರ್ಜೂರ, ಅರಿಶಿನ, ಕುಂಕುಮ, ಹಾಲು, ತುಪ್ಪ, ಜೇನುತುಪ್ಪ ಸೇರಿದಂತೆ 32 ಬಗೆಯ ವಸ್ತುಗಳಿಂದ ವೇದಘೋಷದೊಂದಿಗೆ ಅಭಿಷೇಕ ಮಾಡಲಾಯಿತು. ಈ ಬಾರಿ ನಂದಿವಿಗ್ರಹಕ್ಕೆ ಹೊಂದಿಕೊಂಡಿರುವ ಬೆಟ್ಟದ ರಸ್ತೆ ದುರಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಯಿತು.

ಹಾಲು, ಮೊಸರು ಹಾಗೂ ಭಸ್ಮಗಳಿಂದ ಮಾಡಿದ ಅಭಿಷೇಕದಿಂದ ಕಪ್ಪು ಶಿಲಾನಂದಿ ವಿಗ್ರಹ ಅಕ್ಷರಶಃ ಶ್ವೇತವರ್ಣಕ್ಕೆ ಬದಲಾಯಿತು. ಅರಿಸಿನ ಹಾಗೂ ಚಂದನದ ಅಭಿಷೇಕದ ಬಳಿಕ ಹಳದಿ ಬಣ್ಣ, ಕುಂಕುಮದ ಅಭಿಷೇಕದ ವೇಳೆ ಕೆಂಪು ಬಣ್ಣದಿಂದ ಕಂಗೊಳಿಸಿದ ನಂದಿ ಮೂರ್ತಿಯನ್ನು ಕಂಡು ಭಕ್ತರು ಹಾಗೂ ಪ್ರವಾಸಿಗರು ಸಂಭ್ರಮಿಸಿದರು. ಬಳಿಕ ಎಳನೀರು, ಜೇನುತುಪ್ಪ, ಕಬ್ಬಿನಹಾಲು, ದ್ರಾಕ್ಷಾರಸ, ಪಂಚಾಮೃತ, ಬಾಳೆಹಣ್ಣು, ಸೌತೆಕಾಯಿ ಅಭಿಷೇಕ, ಸುವರ್ಣದ ಅಭಿಷೇಕದಲ್ಲಿ(ನಾಣ್ಯ) ಮಾಡಲಾಯಿತು.

ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುತ್ತಿದ್ದ ಭಕ್ತರು ಹಾಗೂ ಪ್ರವಾಸಿಗರು ಕೆಲ ಹೊತ್ತು ನಿಂತು ಅಭಿಷೇಕವನ್ನು ಕಣ್ತುಂಬಿಕೊಂಡರು. ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಸದಸ್ಯರು ಮಹಾಭಿಷೇಕಕ್ಕೆ ಸಾಕ್ಷಿಯಾದರು. ಬಳಿಕ ನಂದಿಯನ್ನು ಸ್ವಚ್ಛಗೊಳಿಸಿ ಅಲಂಕಾರ ಮಾಡಿ ಅಷ್ಟೋತ್ತರ ಹಾಗೂ ಪೂಜೆ ನಡೆಸಿ ಮಹಾಮಂಗಳಾರತಿ ಬೆಳಗಲಾಯಿತು. ಈ ಸಂದರ್ಭದಲ್ಲಿ ನಾಡಿನ ಜನತೆಗೆ ತಾಯಿ ಚಾಮುಂಡೇಶ್ವರಿ ಮತ್ತು ನಂದಿಯು ಸುಖ, ಶಾಂತಿ, ನೆಮ್ಮದಿಯನ್ನು ಕರುಣಿಸಲೆಂದು ಪ್ರಾರ್ಥಿಸಲಾಯಿತು. ಬಳಿಕ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗಿಸಲಾಯಿತು. ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಸ್. ಪ್ರಕಾಶ್, ಕಾರ್ಯದರ್ಶಿ ಎನ್.ಗೋವಿಂದ, ಖಜಾಂಚಿ ವಿ.ಎನ್.ಸುಂದರ್ ಇತರರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿದ್ಯಾರ್ಥಿಗಳಿಗೆ ಚಿತ್ರಕಲೆ, ಭಿತ್ತಿಚಿತ್ರ ರಚನಾ ಸ್ಪರ್ಧೆ

ಒಟ್ಟು 89 ವಿದ್ಯಾರ್ಥಿಗಳು ಭಾಗಿ



ಮೈಸೂರು, ನ.13– ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಮೈಸೂರು ನಗರ ಮತ್ತು ಜಿಲ್ಲಾ ಗ್ರಂಥಾಲಯಗಳ ವತಿಯಿಂದ ಭಾನುವಾರ ಮೈಸೂರಿನ ಪೀಪಲ್ಸ್ ಪಾರ್ಕ್ ನಗರ ಕೇಂದ್ರ ಗ್ರಂಥಾಲಯ ಆವರಣದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಭಿತ್ತಿ ಚಿತ್ರಗಳ ರಚನಾ ಸ್ಪರ್ಧೆಯಲ್ಲಿ ಒಟ್ಟು 89 ಮಂದಿ ಭಾಗವಹಿಸಿ, ತಮ್ಮ ಚಿತ್ರಕಲೆಯನ್ನು ಪ್ರತಿಭೆಯನ್ನು ಹೊರಹೊಮ್ಮಿಸಿದರು.

1ರಿಂದ 3ನೇ ತರಗತಿ ವಿದ್ಯಾರ್ಥಿಗಳಿಗೆ 'ಪ್ರಕೃತಿ ಚಿತ್ರಣ;, 4ರಿಂದ 6ನೇ ತರಗತಿ ವಿದ್ಯಾರ್ಥಿಗಳಿಗೆ 'ನಾನು ಮತ್ತು ಪುಸ್ತಕ', 7ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ 'ನನ್ನ ಕಲ್ಪನೆಯ ಗ್ರಂಥಾಲಯ' ಕುರಿತು ಚಿತ್ರಕಲೆ ಸ್ಪರ್ಧೆ ನಡೆಯಿತು. ಕಲಾಶಾಲೆ ಹಾಗೂ ಇತರೆ ಕಾಲೇಜು ವಿದ್ಯಾರ್ಥಿಗಳಿಗೆ 'ಡಿಜಿಟಲ್ ಗ್ರಂಥಾಲಯ' ಕುರಿತು ಭಿತ್ತಿ ಚಿತ್ರ ಸ್ಪರ್ಧೆಗಳು ನಡೆದವು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ: ಇಂದು ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ನಾಲ್ವಡಿ ಪುತ್ಥಳಿ ಅನಾವರಣ


ಮೈಸೂರು, ನ.13(ಆರ್‌ಕೆಬಿ)– ಮೈಸೂರಿನ ನಜರ್‌ಬಾದ್‌ನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಯಲದಲ್ಲಿ ಸೋಮವಾರ (ನ.14) ಬೆಳಗ್ಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಏರ್ಪಡಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಪುಸ್ತಕ ಪ್ರದರ್ಶನ ಉದ್ಘಾಟಿಸಲಿದ್ದರೆ.



ಮೈಸೂರಿನಲ್ಲಿ ಸಾರ್ವಜನಿಕ ಗ್ರಂಥಾಲಯ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಯನ್ನು ಗ್ರಂಥಾಲಯ ಆವರಣದಲ್ಲಿ ಸ್ಥಾಪಿಸಲಾಗುತ್ತಿದ್ದು, ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಉದ್ಘಾಟಿಸಲಿದ್ದಾರೆ.

ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರ ವ್ಯಾಪ್ತಿಯ ವಿವಿಧ ಹಾಗೂ ಗ್ರಂಥಾಲಯಗಳ ಮೋನೋಗ್ರಫಿಯನ್ನು ಮೇಯರ್ ಶಿವಕುಮಾರ್ ಅನಾವರಣಗೊಳಿಸುವರು.

ನಾಲ್ವಡಿ ಪುತ್ಥಳಿ ನಿರ್ಮಿಸಿದ ಕಲಾವಿದ ರಾಜೇಶ್: ಮೈಸೂರು ಗ್ರಂಥಾಲಯದ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಎರಡೂವರೆ ಅಡಿ ಎತ್ತರದ ಸುಂದರ ಪುತ್ಥಳಿಯನ್ನು ಮೈಸೂರಿನ ಕಲಾವಿದ ರಾಜೇಶ್ ನಿರ್ಮಿಸಿ ಕೊಟ್ಟಿದ್ದಾರೆ. 90 ಸಾವಿರ ರೂ. ವೆಚ್ಚದ ಈ ಕಲಾಕೃತಿಯನ್ನು ಫೈಬರ್‌ನಿಂದ ತಯಾರಿಸಲಾಗಿದೆ. ಇದೇ ಸಂದರ್ಭದಲ್ಲಿ ಗ್ರಂಥಾಲಯ ವಿಜ್ಞಾನಿ ಡಾ.ಎಸ್.ಆರ್.ರಂಗನಾಥನ್ ಅವರ ಪುತ್ಥಳಿಯನ್ನು ಸಹ ಅನಾವರಣಗೊಳಿಸಲಾಗುತ್ತಿದೆ.



ಇಂಗ್ಲೆಂಡ್ ಟಿ20 ವಿಶ್ವಕಪ್ ಚಾಂಪಿಯನ್



ಮೆಲ್ಬರ್ನ್, ನ.13– ಆಸ್ಟ್ರೇಲಿಯಾದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾನುವಾರ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ 5 ವಿಕೆಟ್‌ಗಳ ಗೆಲುವು ದಾಖಲಿಸಿದ ಇಂಗ್ಲೆಂಡ್ ವಿಶ್ವಕಪ್ ಕಿರೀಟ ಮುಡಿಗೇರಿಸಿಕೊಂಡಿದೆ.

ಆ ಮೂಲಕ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಇತಿಹಾಸದಲ್ಲಿ ವೆಸ್ಟ್‌ಇಂಡೀಸ್ ಬಳಿಕ ಇಂಗ್ಲೆಂಡ್ 2ನೇ ಬಾರಿಗೆ ವಿಶ್ವಕಪ್ ಗೆದ್ದ ಸಾಧನೆ ಮಾಡಿದೆ. ಈ ಹಿಂದೆ 2010ರಲ್ಲಿ ಆಸ್ಟ್ರೇಲಿಯಾ ಮಣಿಸಿದ್ದ ಇಂಗ್ಲೆಂಡ್ ಚಾಂಪಿಯನ್ ಎನಿಸಿಕೊಂಡಿತು. ಇದೀಗ 12 ವರ್ಷಗಳ ಬಳಿಕ ಮತ್ತೊಮ್ಮೆ ಚಾಂಪಿಯನ್ಸ್ ಪಟ್ಟ ಅಲಂಕರಿಸಿದೆ. ಅಲ್ಲದೇ 2019ರಲ್ಲಿ ಒಡಿಐ ವಿಶ್ವಕಪ್ ಗೆದ್ದು, ಈಗ ಟಿ20 ವಿಶ್ವಕಪ್ ಕೂಡ ಗೆದ್ದ ಇಂಗ್ಲೆಂಡ್ ಏಕಾಕಾಲದಲ್ಲಿ ಎರಡೂ ಟ್ರೋಫಿಗಳನ್ನು ಹೊಂದಿರುವ ವಿಶ್ವದ ಏಕಮಾತ್ರ ತಂಡ ಎಂಬ ಇತಿಹಾಸ ನಿರ್ಮಿಸಿದೆ.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಪಾಕಿಸ್ತಾನ ನೀಡಿದ 138 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 19 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಇನ್ನು 1 ಓವರ್ ಬಾಕಿ ಇರುವಾಗಲೇ ಟ್ರೋಫಿ ಗೆದ್ದು ಬೀಗಿತು. ಅಲ್ಪಮೊತ್ತ ಬೆನ್ನಟ್ಟಿದ ಇಂಗ್ಲೆಂಡ್ ಆರಂಭಿಕ ಆಘಾತ ಅನುಭವಿಸಿತು. ಕಳೆದ ಪಂದ್ಯದ ಹೀರೋ ಅಲೆಕ್ಸ್ ಹೇಲ್ಸ್ ಆಟ ಕೇವಲ 1 ರನ್‌ಗೆ ಕೊನೆಗೊಂಡಿತು. ಬಳಿಕ ಬಂದ ಫಿಲ್ ಸಾಲ್ಟ್ 10 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಬಟ್ಲರ್ ಕೂಡ 26 ರನ್ ಗಳಿಸಿ ಔಟಾದರು.

ಈ ಹಂತದಲ್ಲಿ 84 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ಇಂಗ್ಲೆಂಡ್‌ಗೆ ಬೆನ್‌ಸ್ಟೋಕ್ಸ್ ಆಸರೆಯಾದರು. ಪಾಕಿಸ್ತಾನ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿದ ಸ್ಟೋಕ್ಸ್ 49 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಒಳಗೊಂಡ ಅಜೇಯ 52 ರನ್ ಗಳಿಸುವ ಮೂಲಕ ಕೊನೆಯವರೆಗೆ ಹೋರಾಡಿ ಜಯ ತಂದುಕೊಟ್ಟರು. ಇವರಿಗೆ ಉತ್ತಮ ಸಾಥ್ ನೀಡಿದ ಮೊಯಿನ್ ಅಲಿ 19, ಹ್ಯಾರಿ ಬ್ರೂಕ್ಸ್ 20 ರನ್ ಗಳಿಸಿದರು. ಪಾಕಿಸ್ತಾನದ ಪರ ಹ್ಯಾರೀಸ್ ರೌಫ್ 2, ಶಹೀನ್ ಷಾ ಆಫ್ರಿದಿ, ಶದಾಬ್ ಖಾನ್ ಹಾಗೂ ಮೊಹಮ್ಮದ್ ವಾಸಿಂ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 137 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ತಂಡದ ಪರ ಮೊಹಮ್ಮದ್ ರಿಜ್ವಾನ್ 15, ಬಾಬರ್ ಅಜಂ 32, ಮೊಹಮ್ಮದ್ ಹ್ಯಾರೀಸ್ 8, ಶಾನ್ ಮಸೂದ್ 38, ಶಾಬಾಝ್ ಖಾನ್ 20 ರನ್ ಗಳಿಸಿದರು. ಇಂಗ್ಲೆಂಡ್ ಪರ ಸ್ಯಾಮ್ ಕರ್ರನ್ 3, ಆದಿಲ್ ರಶೀದ್, ಕ್ರಿಸ್ ಜಾರ್ಡನ್ ತಲಾ 2, ಬೆನ್‌ಸ್ಟೋಕ್ಸ್ 1 ವಿಕೆಟ್ ಉರುಳಿಸಿದರು. ಪಂದ್ಯ ಹಾಗೂ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಸ್ಯಾಮ್ ಕರ್ರನ್ ಪಂದ್ಯಶ್ರೇಷ್ಠ, ಸರಣಿ ಶ್ರೇಷ್ಠ ಆಟಗಾರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ರೈಲಿನಲ್ಲಿ ಕಾಶಿಯಾತ್ರೆ
10/03/2023, ರಿಂದ ರೈಲಿನಲ್ಲಿ 10 ದಿನಗಳ ಪ್ರವಾಸ, ಸ್ಥಳಗಳು ; ಕಾಶಿ, ಸಾರನಾಥ, ಅಯೋಧ್ಯ, ಅಲಹಾಬಾದ್, ಸೀತಾಮುಡಿ, ಗಯಾ , ಬುದ್ಧಗಯಾ, ಇತ್ಯಾದಿ. ಊಟ, ಕೊಠಡಿ, ರೈಲು ಟಿಕೆಟ್, ಬಸ್. ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 11000/– ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ 5000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್, ನಜರ್‌ಬಾದ್ ಮೈಸೂರು.
9342118682 / 9449128682

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಶ್ರೀ ಮೂರ್ತಿ ಟೂರಿಸ್ಟ್
21.11.22 ಕಾರ್ತಿಕ ಸೋಮವಾರಕ್ಕಾಗಿ, ಮಹದೇಶ್ವರ ಬೆಟ್ಟ ತಿಂಡಿ ಕಾಫೀ, ಊಟ ಸೇರಿದೆ.
26.11.22 (1 ದಿನ) ತಲಕಾವೇರಿ, ಭಾಗಮಂಡಲ, ಅಬ್ಬಿಫಾಲ್ಸ್
27.11.22 (4 ದಿನ) ಹೊರನಾಡು ಶೃಂಗೇರಿ, ಕೊಲ್ಲೂರು, ಮುರುಡೇಶ್ವರ, ಆನೇಗುಡ್ಡ, ಅಂಬಲಪಾಡಿ, ಉಡುಪಿ, ಧರ್ಮಸ್ಥಳ, ಸುಬ್ರಹ್ಮಣ್ಯ ಪ್ರವಾಸ.
9480733069
Tickets at your Door Step

ಶ್ರೀ ಗೌರಿಶಂಕರ ಟ್ರಾವೆಲ್ಸ್
10–12–22 (4 ದಿನ) ಶಿರಡಿ, ಬಾಂಬೆ ತ್ರಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ ಇತ್ಯಾದಿ.
18–12–22 (1 ದಿನ) ಕೋಟಿಲಿಂಗ, ಘಾಟಿಸುಬ್ರಹ್ಮಣ್ಯ.
24–12–22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೆಂಡ್ರಂ, ಕೊಚ್ಚಿನ್ ಇತ್ಯಾದಿ.
ವಿಮಾನ / ಬಸ್/ ರೂಂ / ಊಟ
9620002114

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.
9740733021 / 9535028750

ಮೈಸೂರು ಮ್ಯಾರೇಜ್ ಬ್ಯೂರೋ
ವಧು ವರರನ್ನು ಹುಡುಕಲು ಸಹಾಯಬೇಕೇ? ನಮಗೆ ಕರೆಮಾಡಿ.
www.bhandhana.con
ಡಾ.ಗುರೂಜಿ ಮೈಸೂರು
6361740552
9448229184

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಬೋಳು ತಲೆಯ ಸಮಸ್ಯೆಯೇ?


ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

FOR SALE
Site 30x50 W/F, House 13 Sq. (G+1 Floor) Vaastu Compliant Chamunde Township - Gated Community (MUDA Approved) Nanjanagudu, Off Ooty Highway
9480182216

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರಿ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ರಿಂದ 18,000 (ESI, PF ಸೌಲಭ್ಯ ಇರುತ್ತದೆ)
8050699742 / 7892480649

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

SITE FOR SALE
30x40 N-W Corner Site @ PAMA Enclave Near Vasanthanagar, Mysore.
9742144553 / 9844226639

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಹೊಸ ಮನೆ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು ಲಾಲ್‌ಬಹದ್ದೂರ್ ಶಾಸ್ತ್ರಿನಗರದಲ್ಲಿ ಮೈಸೂರು. ಸಂಪರ್ಕಿಸಿ.
9986737936
8749092901

ಕೇರಳ ಶ್ರೀ ಆದಿ ಶಕ್ತಿ ಜ್ಯೋತಿಷ್ಯಾಲಯ
ಪಂಡಿತ್ : ಶಿವಪ್ರಸಾದ್ ತಂತ್ರಿ
ಮೊ.: 9686525894
ನಿಮ್ಮ ಜೀವನದ ಯಾವುದೇ ರೀತಿಯ, ದಾಂಪತ್ಯ ಸಮಸ್ಯೆ, ಲೈಂಗಿಕ, ಶತ್ರುಗಳ ಕಾಟ, ಮನೆಯಲ್ಲಿ ಅಶಾಂತಿ, ಜಾಗದ ತೊಂದರೆ ಇನ್ನೂ ಯಾವುದೇ ರೀತಿಯ ಕಠಿಣ ಸಮಸ್ಯೆಗಳಿಗೆ ಇದ್ದರೂ ಕೇರಳದ ಶಾಸ್ತ್ರೋಕ್ತ ಪದ್ಧತಿಯಿಂದ ಬಲಿಷ್ಠ ದೇವ ದೈವಗಳ ಮಂತ್ರ ಶಕ್ತಿಗಳಿಂದ ಕೇವಲ 2 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮನೆ ವಿಳಾಸ: ಕುಮಾರ್ ಮೆಡಿಕಲ್ ಪಂಚಮಂತ್ರರೋಡ್, ಕುವೆಂಪುನಗರ, ಮೈಸೂರು.

ಹೊಸ ಮನೆ ಮಾರಾಟಕ್ಕಿದೆ
1,400 ಅಡಿ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಮಾರಾಟಕ್ಕಿದೆ
ಅಗ್ರಹಾರ ಬಸವೇಶ್ವರ ರಸ್ತೆ, 5ನೇ ಕ್ರಾಸಿನಲ್ಲಿರುವ ಮನೆ ನಂ.2249 K-11 ಸಂಖ್ಯೆಯ ಮನೆ ಮಾರಾಟಕ್ಕಿದೆ. ಅಳತೆ 30x42 ಅಡಿ, ಸಿಂಗಲ್ ಬೆಡ್ ರೂಂನ 3 ಮನೆ, ಎರಡು ಬೆಡ್ ರೂಂನ 2 ಮನೆ. ಆಸಕ್ತರು ಸಂಪರ್ಕಿಸುವ ದೂರವಾಣಿ ಸಂಖ್ಯೆ:
9972596865 / 8494927949

ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ. ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಮೇಲ್ಪಟ್ಟು ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ. ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಸೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು. ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು. ಸಂದರ್ಶನ ದಿನಾಂಕ: 16–11–2022, ಸಮಯ: 11.30ಕ್ಕೆ. ಸಂಪರ್ಕಿಸಿ:
7892303484 / 9483247455

WANTED IMMEDIATELY
Quality Executives. (Qualification M.Sc in Food Science) Male. Stores Executives (Qualification any Degree) Male. Age Below : 30 Yrs, Experience: Min 1 to 2 Yrs. Address: The Akshayapatra Foundation Mysore. No.31 18th Cross, Jayanagar, Mysore
9964451366

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME-BASED
ecode GAS SAFE | All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಬೋದಲು ಬಂದವರಿಗೆ ಆದ್ಯತೆ — ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

Join ASFT Fashion Design Courses
* Certification Course
* Diploma Course
* Advance Diploma Course

Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಬಟ್ಟೆ ಅಂಗಡಿಗೆ ಹೆಲ್ಪರ್ ಹುಡುಗರು ಮತ್ತು ಮಾರ್ಕೆಟಿಂಗ್‌ಗೆ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ. ವೇತನ 12000 ದಿಂದ 15000 ರವರೆಗೆ.
Mob: 9342118153

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

CHANGE OF NAME
I, Raju, residing at #124, Chikkankanahalli Village, Srirangapatna Taluk, Mandya District-571415, have changed my name as Anil P. on my own free will, in front of Notary D.C. Anantha Kumar on 9-11-2022. I hereby declare that I shall at all times hereafter, in all actions and proceedings, in all records, deeds and instruments in writings and in all dealings & upon all ocasions whatsoever use and sign the said name of Anil P.
Sd/- Anil P.

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

JOB VACANCIES
Sri Vinayaka Technologies
Computer and CCTV Technician, Sales & Service of Computers, CCTV, UPS & Batteries.
Mob: 7348977948

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ)
ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)
ಮೊ.: 9036984793
ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತ ಬಾಧೆ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಸಿದ್ಧ. ಖಾಯಂ ವಿಳಾಸ– #1140, ವಿಹಾರ ಮಾರ್ಗ, ಹಳೇ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

FOR SALE
1) 30x40 - 12 Lakhs 30x50 15 L sites available attach Brahmins E blk layout.
2) 12x36 G+2 house Kuvempunagar 28 Guntas Land in Varkodu.
3) 30x40 advocates layout Bannur Road
4) 30x40 - 10 lakhs, Hunsur road Prakruthi Properties
5) 30x40 - 20 lakhs Dadadahalli (JP Nagar)

Prakruthi Properties
90359 90359, 95386 90359

WANTED FOR RENT
3 BHK independent house (within 2 km radius of Andolana Circle). *Contact:*
Mob: 9141736993

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಟಿನರಸೀಪುರ ಪಕ್ಕದ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ +ESI+PF ಸೌಲಭ್ಯ ಇರುತ್ತದೆ.
9538094337 / 9606263898
9740161217

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, N.R.Mohalla ಮುಂತಾದ ಏರಿಯಾಗಳಲ್ಲಿನ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ, ಸಂಬಳ 14,000–36000/– ಸಂಪರ್ಕಿಸಿ
7892878915
9663704915

ಬೇಕಾಗಿದ್ದಾರೆ
ಮೈಸೂರಿನ ಕೆಳಕಂಡ ಸ್ಥಳಗಳಲ್ಲಿ 12 ಗಂಟೆ ಪಾಳಿಯಲ್ಲಿ ಕಾರ್ಯ ನಿರ್ವಹಿಸಲು
1) ಸೆಕ್ಯೂರಿಟಿ ಗಾರ್ಡ್ (SSLC / PUC - Pass / Fail) ವಯಸ್ಸು 30 ರಿಂದ 50 ವರ್ಷಗಳು. ಸ್ಥಳ: ಬೆಳವಾಡಿ, ಹೂಟಗಳ್ಳಿ, ವಿಜಯನಗರ ಹಾಗೂ ಮೈಸೂರಿನ ಸುತ್ತಮುತ್ತ ಪ್ರದೇಶಗಳು, ಸೌಲಭ್ಯ: ESI, PF ಮತ್ತು ಉತ್ತಮ ಸಂಬಳವಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9739199355 / 9739166772

ನಿವೃತ್ತರಿಗೆ ವಿಶೇಷ ಅವಕಾಶ
VRS, ನಿವೃತ್ತ ರಾಜ್ಯ / ಕೇಂದ್ರ / ಬ್ಯಾಂಕಿಂಗ್ / ಖಾಸಗಿ ಹಾಗೂ ಬಿಜಿನೆಸ್ ವಲಯ / Housewives ಇವರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ವಿಶೇಷ ಅವಕಾಶ, ಸೆಮಿನಾರ್‌ಗೆ ಬನ್ನಿರಿ. ಸ್ಥಳ: ನಳಪಾಕ್ ರೆಸ್ಟೋರೆಂಟ್, ಗೋಕುಲಂ (ನಿರ್ಮಲ ಕಾನ್ವೆಂಟ್ ಹತ್ತಿರ) ದಿನಾಂಕ: 16–11–2022, ಸಮಯ: ಬೆಳಿಗ್ಗೆ 11.00 ಗಂಟೆಗೆ, ಬೆನಿಫಿಟ್: ಸ್ಯಾಲರಿ, ಪಿಎಫ್, ಇಎಸ್‌ಐ, ಇನ್ಸೆಂಟೀವ್, ನೊಂದಾಯಿಸಲು ಬೇಕಾಗಿರು ದಾಖಲೆಗಳು ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ವಿದ್ಯಾರ್ಹತೆ ದಾಖಲೆ, International Conventions ಬ್ಯಾಂಕ್ ಪಾಸ್ ಪುಸ್ತಕ (ಮೊದಲನೇ ಪೇಜ್) ನೊಂದಾಯಿಸಲು ಕರೆ ಮಾಡಿ:
9845458130 / 9880115979 / 7349052084

WANTED DTP OPERATOR
Having Good Kannada & English Typing skills Computer Knowledge only for Female ಕಂಪ್ಯೂಟರ್ ಮತ್ತು ಡಿ.ಟಿ.ಪಿ. ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು) ಸಂಪರ್ಕಿಸಿ:
8050473454

ಬೇಕಾಗಿದ್ದಾರೆ
ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಗೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವಯಸ್ಸಿನ ಮಿತಿ: 25 ರಿಂದ 45, ವಿದ್ಯಾರ್ಹತೆ: SSLC Pass ಮೇಲ್ಪಟ್ಟು, ಸಂಬಳ: Rs. 17,500/-, ESI, PF, EL, NFH, Bonus, Insurance ದೊರೆಯುತ್ತದೆ. 3 ಜೊತೆ ಸಮವಸ್ತ್ರ ಉಚಿತ. ವಿಳಾಸ: ಪ್ರೈವೇಟ್ ಐ ಪ್ರೈವೇಟ್ ಲಿಮಿಟೆಡ್, ಸರಸ್ವತಿಪುರಂ ಕನ್ವೆನ್ಷನ್ ಹಾಲ್ ಹತ್ತಿರ, ಹೂಟಗಳ್ಳಿ, ಮೈಸೂರು.
9538014456 / 9538886654

ಬೇಕಾಗಿದ್ದಾರೆ
1) ಹೌಸ್ ಕೀಪಿಂಗ್ ಸೂಪರ್‌ವೈಸರ್ (ವೇತನ 15 ರಿಂದ 18 ಸಾವಿರ).
2) ಹೌಸ್ ಮೆನ್ (ವೇತನ 12 ರಿಂದ 13 ಸಾವಿರ).
3) ಸ್ಟೀವರ್ಡ್ (ವೇತನ 12 ರಿಂದ 13 ಸಾವಿರ).
ದಿ ಕೋರಮ್ ಹೋಟೆಲ್‌ಗಾಗಿ #2257/1, ವಿನೋಬ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು. ಸಂಪರ್ಕಿಸಿ:
9620274629 / 9620274630

ಬೇಕಾಗಿದ್ದಾರೆ
Receptionist
Ayurvedic Therapist
Physiotherapist
Acupuncturist
ಸಂಪರ್ಕಿಸಿ: ಡಾ.ವಿಜಯ್
Orioles Diabetic Center, Shop No.10, MUDA Commercial Complex, Kalidasa Road, Vijayanagar 1st Stage, Mysuru
9035159747

ತಕ್ಷಣ ಬೇಕಾಗಿದ್ದಾರೆ
ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಲು "ಸೆಕ್ಯೂರಿಟಿ ಗಾರ್ಡ್‌ಗಳು" ಬೇಕಾಗಿದ್ದಾರೆ.
1) ಬಲ್ಲಾಳ್ ಸರ್ಕಲ್, 2) ವಿದ್ಯಾರಣ್ಯಪುರಂ, 3) ಸಯ್ಯಾಜಿರಾವ್ ರಸ್ತೆ, 4) ನಜರ್‌ಬಾದ್
ಊಟ ವಸತಿ ಹಾಗೂ ಊಟದ ವ್ಯವಸ್ಥೆಯಿದೆ. ESI/ PF ಜೊತೆಗೆ ಉತ್ತಮ ಸಂಬಳವಿದೆ.
9686422400 / 9686566261
9242406261

SITE FOR SALE
40x60 West Site Sale Old R T Nagar (ಶಾರದಾ ಸ್ಕೂಲ್ ಹಿಂಭಾಗ) ಕಾಲ್:
9880273834

ಈ ತಕ್ಷಣವೇ ಬೇಕಾಗಿದ್ದಾರೆ
ಹೆಬ್ಬಾಳಿನ ಕಂಪನಿಯೊಂದರಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು, ಟೈಲರುಗಳು, ಹೆಲ್ಪರುಗಳು ಬೇಕಾಗಿದ್ದಾರೆ.
ಸಂಪರ್ಕಿಸಿ:
7795285485
8105249880

CHANGE OF NAME
I, Abhishek .R S/o Ramakrishnan.K residing at 41/3, 5th Cross, 5th Main, Jayanagara, Mysuru - 570014. have changed my name as Pavan Gowda.R, on my own free will, in front of Notary K.V.Ravichandra on 31/10/22. Here after in all proceedings, dealings and transactions, private as well as upon all occasions whatsoever, use and sign the name of Pavan Gowda.R.
Sd/- Pavan Gowda.R

ಪುಸ್ತಕ ದಾನಿಗಳಲ್ಲಿ ಮನವಿ
ಸಹೃದಯಿ ಬಂಧುಗಳೇ, ತಮ್ಮಲ್ಲಿರುವ ಕನ್ನಡ & ಇಂಗ್ಲೀಷ್ ಕಥೆ, ಕಾದಂಬರಿಗಳು, ಕಾಮಿಕ್ಸ್‌ಗಳು, ಬಾಲಮಿತ್ರ & ಚಂದಮಾಮಗಳನ್ನು ದಾನ ಮಾಡಲಿಚ್ಛಿಸುವ ಬಂಧು ಭಗನಿಯರು ಈ ಕೆಳಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ. Prabhudeva M.K. #315, 25th Cross, Hebbal 2nd Stage, Sankranti Circle Mys-17. (ಕರೆ ಮಾಡಿದರೇ ನಾವೇ ಬಂದು ಸ್ವೀಕರಿಸುತ್ತೇವೆ)
9886739125

WANTED
Office Space around 100 to 200 Sq.ft. in the locality of Ramakrishna Nagar, Dattagalli, Sharadadevi Nagar, Andolana Circle, Neveditha Nagar, Kuvepunagar, Contact:
9090109012 / 7676767420

ಉದ್ಯೋಗವಕಾಶದ ಸೆಮಿನಾರ್
ನಿವೃತ್ತ ಕೇಂದ್ರ / ರಾಜ್ಯ / ನಿವೃತ್ತ ಬ್ಯಾಂಕ್ ನೌಕರರಿಗೆ ವಿಶ್ವಾಸಾರ್ಹ ಬ್ಯಾಂಕ್ ಸಂಸ್ಥೆಯಲ್ಲಿ ಉದ್ಯೋಗವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ಸ್ಥಳ: ಮೌರ್ಯ ರೆಸಿಡೆನ್ಸಿ, ಶ್ರೀ ಹರ್ಷ ರಸ್ತೆ, ಬೆಳಗ್ಗೆ 11 ಗಂಟೆಗೆ, ದಿನಾಂಕ: 15–11–2022, Benefits: 1) Fixed Salary +PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ದಾಖಲಾತಿಗಳನ್ನು ತರಬೇಕು. Followed by Lunch ಸಂಪರ್ಕಿಸಿ:
9449068132 / 7022034200

HOUSE FOR LEASE
(20X30) in Vasantnagar, Mysore, 4th Main, Vasanthanagar Behind Vidya Vikas College, Bannur Road, Mysore-570002. Contact:
8310427773

PART TIME JOB
Receptionist / Office Assistant
Timings 5 am to 8 am and 7 pm to 9 pm, Salary : Rs.5000/-, Males only (18 years above)
Kuvempunagar. Contact:
9845646800

ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ಹೊಸದಾಗಿ ಪ್ರಾರಂಭವಾಗಿರುವ ಸಂಸ್ಥೆಗೆ ಟೆಲಿಕಾಲಿಂಗ್ ಮಾಡಲು ಆಸಕ್ತಿಯುಳ್ಳ 22 ಯುವತಿಯರು ತಕ್ಷಣ ಬೇಕಾಗಿದ್ದಾರೆ. ಸ್ಥಳ: ಸೂರ್ಯ ಬೇಕರಿ, ವೇತನ: 7,000 – 14,000, (ಹೆಚ್ಚಿನ ಅದ್ಯತೆ:- ಹೆಬ್ಬಾಳ್, ಮೇಟಗಳ್ಳಿ, ಕುಂಬಾರ್ ಕೊಪ್ಪಲು, ಸೂರ್ಯ ಬೇಕರಿ) ಕೆಲಸದ ಸಮಯ : 9.30 am - 6.00 pm, Sunday Holiday. ಶಿಲ್ಪ
9632600132

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಅಡ್ಡಂಡ ಕಾರ್ಯಪ್ಪ ಅವರ 'ಟಿಪ್ಪು ನಿಜ ಕನಸುಗಳು' ಕೃತಿ ಬಿಡುಗಡೆ

ಟಿಪ್ಪು ಪುಸ್ತಕ ಓದುವುದಷ್ಟೇ ಅಲ್ಲ, ಸತ್ಯಾಂಶ ಇತರರಿಗೆ ತಿಳಿಸಬೇಕು


ಪ್ರಸಿದ್ಧ ಕಾದಂಬರಿಕಾರ ಎಸ್.ಎಲ್.ಭೈರಪ್ಪ

ಮೈಸೂರು, ನ.13(ಎಸ್‌ಬಿಡಿ)– ಟಿಪ್ಪು ಸ್ವಭಾವತಃ ಕ್ರೂರಿ. ಆತನ ಕುರಿತ ಪುಸ್ತಕ ಓದುವುದು, ನಾಟಕ ನೋಡುವುದಷ್ಟೇ ಅಲ್ಲ, ಸತ್ಯಾಂಶವನ್ನು ಇತರರಿಗೆ ತಿಳಿಸಬೇಕು ಎಂದು ಪ್ರಸಿದ್ಧ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪನವರು ಹೇಳಿದರು.

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿಯನ್ನು ಭೂಮಿಗೀತ ವೇದಿಕೆಯಲ್ಲಿ ಭಾನುವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರು ಭಾಗದವರಲ್ಲದ ಹೆಚ್.ಡಿ.ಶರ್ಮಾ ಅವರ 'ದಿ ರಿಯಲ್ ಟಿಪ್ಪು' ಪುಸ್ತಕವನ್ನು ಪ್ರಧಾನ ಗುರುದತ್ತ ಅವರು 'ಟಿಪ್ಪೂ–ನಿಜ ಸ್ವರೂಪ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. 17 ಮರು ಮುದ್ರಣವಾಗಿರುವ ಆ ಪುಸ್ತಕದಲ್ಲಿ ಟಿಪ್ಪುವಿನ ನಿಜವಾದ ಗುಣ ಅನಾವರಣವಾಗಿದೆ. ಇಂತಹ ಹಲವು ಪುಸ್ತಕಗಳು ಪ್ರಕಟವಾಗಿವೆ. ಜನರನ್ನು ಆನೆ ಕಾಲಿಗೆ ಕಟ್ಟಿ ಎಳೆಸುತ್ತಿದ್ದ ಟಿಪ್ಪು, ಕೈಕಾಲು ಕಟ್ಟಿ ಗೋಣಿಚೀಲದಲ್ಲಿ ಬಂಧಿಸಿ ನಂದಿಬೆಟ್ಟದ ದೊಡ್ಡ ಬಂಡೆಯ ಮೇಲಿಂದ ಕೆಳಗೆಸೆಯುತ್ತಿದ್ದನಂತೆ. ಆ ಸ್ಥಳಕ್ಕೆ 'ಟಿಪ್ಪು ಡ್ರಾಪ್' ಎಂದು ಹೆಸರಿಡಲಾಗಿದೆ. ಸ್ವಭಾವತಃ ಕ್ರೂರಿಯಾಗಿದ್ದ ಟಿಪ್ಪುವಿನ ಬಗ್ಗೆ ತಿಳಿದವರು ಬೇರೆಯವರಿಗೂ ಹೇಳಬೇಕು ಎಂದು ತಿಳಿಸಿದರು.

ಬಿಜಾಪುರ ಸುಲ್ತಾನ ಅಫ್ಜಲ್‌ಖಾನ್‌ನನ್ನು ಶಿವಾಜಿ ವಿರುದ್ಧ ಯುದ್ಧಕ್ಕೆ ಕಳುಹಿಸುತ್ತಾನೆ. ಆರು ಅಡಿ ಮೂರು ಅಂಗುಲದ ಅಜಾನುಬಾಹು ಅಫ್ಜಲ್ ಖಾನ್ ದೊಡ್ಡ ಸೈನ್ಯದೊಂದಿಗೆ ಮಹಾರಾಷ್ಟ್ರದ ಪ್ರತಾಪಗಢಕ್ಕೆ ತೆರಳುತ್ತಾನೆ. ಅಲ್ಲಿನ ಬೆಟ್ಟದ ಮೇಲೆ ದೇವಿ ದೇವಸ್ಥಾನದ ಸುತ್ತ ಕೋಟೆ ನಿರ್ಮಿಸಿಕೊಂಡಿದ್ದ ಶಿವಾಜಿ ಬಳಿ ದೊಡ್ಡ ಸೈನ್ಯವಿರಲಿಲ್ಲ. ಐದೂವರೆ ಅಡಿಯಿದ್ದ ಶಿವಾಜಿಯನ್ನು ತಬ್ಬಿ ಹಿಸುಕಿ ಸಾಯಿಸಬಹುದು ಎಂದು ಅಫ್ಜಲ್ ಖಾನ್ ತಿಳಿಸಿದ್ದ. ಇದನ್ನು ಊಹಿಸಿದ್ದ ಶಿವಾಜಿ ಹುಲಿಯ ಉಗುರುಗಳನ್ನು ಬಳಸಿ ರಕ್ಷಣಾತ್ಮಕ ಪರಿಕರವನ್ನು ಧರಿಸಿದ್ದ. ಶಿವಾಜಿಯನ್ನು ತಬ್ಬುತ್ತಿದ್ದಂತೆ ಅಫ್ಜಲ್ ಖಾನ್ ನೋವಿನಿಂದ ಚೀರಿದ. ಆಗ ಶಿವಾಜಿ ಸೈನಿಕರು ಸುತ್ತುವರಿದಿದ್ದರಿಂದ ಶತ್ರು ಸೈನ್ಯ ಪರಾರಿಯಾಯಿತು. ಇದು ನಮಗೆ ಪ್ರೌಢಶಾಲಾ ಪಠ್ಯದಲ್ಲಿತ್ತು. ನಾನು ಪ್ರತಾಪಗಢ ನೋಡಲು ಹೋದಾಗ ಗೈಡ್‌ಗೆ 5 ರೂ. ಟಿಪ್ಸ್ ನೀಡಿ ಒತ್ತಾಯಿಸಿದ್ದರಿಂದ ಶಿವಾಜಿ ಯುದ್ಧಗೆದ್ದ ಸ್ಥಳವನ್ನು ತೋರಿಸಿದ. ಅಲ್ಲಿ ದಟ್ಟಹಸಿರು ಬಣ್ಣದ ಮಂಟಪವಿತ್ತು. ಒಂದು ಫಲಕವೂ ಇರಲಿಲ್ಲ ಆ ಬಗ್ಗೆ ಕೇಳಿದಾಗ ಕಳೆದಬಾರಿ ಚುನಾವಣೆ ಸಂದರ್ಭದಲ್ಲಿ ಫಲಕ ತೆಗೆಸಿದರು. ಅಫ್ಜಲ್‌ಖಾನ್‌ನ ಪವಿತ್ರ ಸ್ಥಳವಾದ ಇದನ್ನು ನಮಗೆ ನೀಡಿದರೆ ಎಲ್ಲಾ ಮತವನ್ನೂ ನೀಡುವುದಾಗಿ ತಿಳಿಸಿದ್ದರಿಂದ ಹಾಗೆಯೇ ಮಾಡಿದರು. ಈಗ ಇದನ್ನು ದರ್ಗಾ ಎನ್ನುತ್ತಾರೆ ಎಂದು ಗೈಡ್ ವಿವರಿಸಿದ ಎಂದರು.

ನಮ್ಮ ದೇಶದ ಪ್ರಜಾಪ್ರಭುತ್ವ ನಮ್ಮನ್ನು ಎಲ್ಲಿಗೆ ತಂದಿದೆ ನೋಡಿ. ಚುನಾವಣೆ ಹಾಗೂ ಮತಕ್ಕಾಗಿ ಹೆತ್ತ ತಾಯಿಯ ಜುಟ್ಟು ಹಿಡಿದು ಒಪ್ಪಿಸಿಬಿಡುತ್ತಾರೆ. ಇದಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ, ಸ್ವಾತಂತ್ರ್ಯ ಪಡೆಯಬೇಕಿತ್ತಾ?. ನೀವು ಪ್ರತಾಪಗಢಕ್ಕೆ ಹೋದಾಗ ಶಿವಾಜಿ ಹೆಸರನ್ನೇ ಮುಚ್ಚಿಸಿ ದರ್ಗಾ ಮಾಡಿರುವ ಜಾಗವನ್ನು ನೋಡಿ. ಎಲ್ಲವೂ ನಿಮ್ಮ ಕೈಯಲ್ಲಿದೆ. ನೀವು ತಿಳಿದ ಸತ್ಯವನ್ನು ನಿಮ್ಮ ಹಳ್ಳಿ, ಏರಿಯಾ, ಕೇರಿಗಳಲ್ಲಿ ತಿಳಿಸಿ ಜನರನ್ನು ಶಿಕ್ಷಿತರನ್ನಾಗಿ ಮಾಡದಿದ್ದರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ಅಭಿಪ್ರಾಯಿಸಿದರು.



ಮೈಸೂರು ರಂಗಾಯಣದ ಭೂಮಿಗೀತ ವೇದಿಕೆಯಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿಯನ್ನು ಪ್ರಸಿದ್ಧ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪನವರು ಬಿಡುಗಡೆ ಮಾಡಿದರು. ವಿಕ್ರಮ ಸಂಪಾದಕ ವೃಷಾಂಕ್ ಭಟ್, ಸಾಮಾಜಿಕ ಕಾರ್ಯಕರ್ತ ವಾದಿರಾಜ್, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಸಂಸದ ಪ್ರತಾಪ್ ಸಿಂಹ, ಲೇಖಕ ರೋಹಿತ್ ಚಕ್ರತೀರ್ಥ, ಅಯೋಧ್ಯಾ ಪ್ರಕಾಶನದ ಶಶಾಂಕ್ ಭಟ್ ಉಪಸ್ಥಿತರಿದ್ದರು.

ಬಿಗಿ ಪೊಲೀಸ್ ಬಂದೋಬಸ್ತ್...

'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಅಡ್ಡಿ ಉಂಟಾಗಬಹುದು ಎಂಬ ಕಾರಣಕ್ಕೆ ಮುಂಜಾಗ್ರತಾ ಕ್ರಮವಾಗಿ ರಂಗಾಯಣದ ಮುಖ್ಯ ಗೇಟ್ ಮತ್ತು ಭೂಮಿಗೀತದ ಪ್ರವೇಶ ದ್ವಾರದಲ್ಲಿ ನಿಂತಿದ್ದ ಪೊಲೀಸರು, ಪ್ರತಿಯೊಬ್ಬರನ್ನೂ ತಪಾಸಣೆಗೆ ಒಳಪಡಿಸಿ ಒಳಗೆ ಬಿಟ್ಟರು. ಅಲ್ಲದೆ ರಂಗಾಯಣದ ಕುಕ್ಕರಹಳ್ಳಿಕೆರೆ ಮಾರ್ಗದ ಗೇಟ್ ಮತ್ತು ವಿನೋಬಾ ರಸ್ತೆಯ ಕಲಾಮಂದಿರ ದ್ವಾರದಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ಶಿಕ್ಷಣ ಸಚಿವರಾಗಿದ್ದ ಡಿ.ಎಸ್.ಶಂಕರಮೂರ್ತಿ ಅವರು ಟಿಪ್ಪು ಕನ್ನಡಕ್ಕೆ ದ್ರೋಹ ಮಾಡಿದ್ದಾನೆ ಎಂದು 2006ರಲ್ಲಿ ಶಿವಮೊಗ್ಗದಲ್ಲಿ ಹೇಳಿದರು. ಆಗ ಒಂದು ಪಂಥದವರು ಗಿರೀಶ್ ಕಾರ್ನಾಡರ ನೇತೃತ್ವದಲ್ಲಿ ಚಳವಳಿ ಆರಂಭಿಸಿದರು. ಶಂಕರಮೂರ್ತಿ ಅವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸದಿದ್ದರೆ ಗಾಂಧೀ ಪ್ರತಿಮೆ ಮುಂದೆ ಧರಣಿ ನಡೆಸುವುದಾಗಿ ಹೇಳಿದ್ದರು. ಅದೇ ವೇಳೆ ಕಾರ್ನಾಡರು 'ನಾನು ಟಿಪ್ಪು ಬಗ್ಗೆ ನಾಟಕ ಬರೆದಿದ್ದು, ಬಹಿರಂಗ ಚರ್ಚೆಗೂ ಸಿದ್ಧನಿದ್ದೇನೆ' ಎಂದು ಆಹ್ವಾನಿಸಿದರು. ಆಗ ವಿಶ್ವೇಶ್ವರ ಭಟ್ಟರು ಒಂದೇ ದಿನದಲ್ಲಿ ಲೇಖನ ಬೇಕೆಂದು ಒತ್ತಾಯಿಸಿದ್ದರಿಂದ 'ಆವರಣ' ಕಾದಂಬರಿಗಾಗಿ ಸಂಗ್ರಹಿಸಿದ್ದ ದಾಖಲೆಗಳನ್ನು ಅವಲೋಕಿಸಿ ಲೇಖನ ಬರೆದೆ. ಒಡೆಯರ್ ಕಾಲದಲ್ಲಿ ಕನ್ನಡ ಆಡಳಿತ ಭಾಷೆಯಾಗಿತ್ತು. ನಂತರ ಆಳ್ವಿಕೆ ಮಾಡಿದ ಟಿಪ್ಪು ಕಂದಾಯ ಇಲಾಖೆಯಲ್ಲಿ ಬಳಸುವ ಪದಗಳನ್ನು ಪಾರ್ಸಿಗೆ ಬದಲಿಸಿದ. ಮೈಸೂರನ್ನು ನಜರ್‌ಬಾದ್ ಎಂದು, ಬ್ರಹ್ಮಪುರಿಯನ್ನು ಸುಲ್ತಾನ್‌ಪೇಟೆ ಎಂದು, ಕೊಡಗು, ಹಾಸನ, ದೇವನಹಳ್ಳಿ, ಚಿತ್ರದುರ್ಗ ಹೀಗೆ ಹಲವು ಊರುಗಳ ಹೆಸರನ್ನು ಬದಲಾಯಿಸಿದ್ದ. ಇದು ಕನ್ನಡ ದ್ರೋಹ ಅಲ್ಲವೇ?. ಊರಿನ ಹೆಸರಿನಲ್ಲಿ ಒಂದು ಇತಿಹಾಸ ಹಾಗೂ ನಂಬಿಕೆ ಇರುತ್ತದೆ. ಉದಾಹರಣೆಗೆ ಶ್ರೀರಂಗನಾಥಸ್ವಾಮಿ

ಕಿಕ್ಕಿರಿದು ತುಂಬಿದ ಭೂಮಿಗೀತ...

ರಂಗಾಯಣ ಭೂಮಿಗೀತ ಸಭಾಂಗಣ ಭಾನುವಾರ ಕಿಕ್ಕಿರಿದು ತುಂಬಿತ್ತು. 'ಟಿಪ್ಪು ನಿಜ ಕನಸುಗಳು' ಕೃತಿ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ನೂರಾರು ಮಂದಿ ಕೂರಲು ಸ್ಥಳವಿಲ್ಲದೆ ನಿಂತುಕೊಂಡೇ ಕಾರ್ಯಕ್ರಮ ವೀಕ್ಷಣೆ ಮಾಡಿದರು. ಕೆಲವರು ನೆಲದಲ್ಲೇ ಕುಳಿತುಕೊಂಡು ವೀಕ್ಷಣೆ ಮಾಡಿದರಲ್ಲದೆ ಕಾರ್ಯಕ್ರಮದ ನಡುವೆ ಆಗಾಗ 'ಭಾರತ್ ಮಾತಾಕೀ ಜೈ' ಘೋಷಣೆಯನ್ನು ಕೂಗುತ್ತಿದ್ದರು.

ದೇವರಿರುವ ಶತಮಾನದ ಸಂಸ್ಕೃತಿ ಹೊಂದಿದೆ ಎಂದು ಶ್ರೀರಂಗಪಟ್ಟಣ ಎಂದು ಕರೆಯಲಾಗುತ್ತದೆ. ಆ ಹೆಸರನ್ನೇ ಬದಲಿಸಿದರೆ ಒಂದು ಧರ್ಮ ನಾಶ ಮಾಡಿ, ಹೊಸ ನಂಬಿಕೆ ಸ್ಥಾಪಿಸಿದಂತೆ ಅಲ್ಲವೇ? ಇದನ್ನೇ ಟಿಪ್ಪು ಮಾಡಿದ ಎಂದು ಬರೆದೆ. ಇದಕ್ಕೆ ಅನಿವಾರ್ಯವಾಗಿ ಪ್ರತ್ಯುತ್ತರ ನೀಡಿದ ಕಾರ್ನಾಡರು ಭೈರಪ್ಪನವರ 2 ಕಾದಂಬರಿಯನ್ನು ಸಿನಿಮಾ ಮಾಡಿ ತಪ್ಪು ಮಾಡಿದೆ ಎನ್ನಿಸುತ್ತಿದೆ. ನನ್ನ ನಾಟಕ ಕೃತಿಯಲ್ಲಿ ಐತಿಹಾಸಿಕ ಎಂದು ಹೇಳಿಯೇ ಇಲ್ಲ ಎಂದು ಸಿಟ್ಟಿನಿಂದ ಬರೆದರು ಎಂದು ಭೈರಪ್ಪನವರು ಸ್ಮರಿಸಿಕೊಂಡರು.

ಏಕಂ ಸತ್ : ಭೈರಪ್ಪನವರು 'ಏಕಂ ಸತ್ ವಿಪ್ರಾಃ ಬಹುದಾ ವದಂತಿ' ಶ್ಲೋಕ ಉಚ್ಛರಿಸುವ ಮೂಲಕ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಸಂದರ್ಭವನ್ನು ವಿಶ್ಲೇಷಿಸಿದರು. ತುಂಬಾ ಕಷ್ಟಪಟ್ಟು ಸಂವಿಧಾನ ರಚನೆ ಮಾಡಿದ್ದೇವೆ. ಆದರೆ, ಇದನ್ನು ಯಾವ ರೀತಿ ಪರಿಪಾಲಿಸುತ್ತೇವೆ ಎನ್ನುವುದರ ಮೇಲೆ ಪ್ರಜಾಪ್ರಭುತ್ವ ನಿಲ್ಲುತ್ತದೆ ಎಂದಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ಲೇಷಣೆ ಮಾಡಿಯೇ ಭಾರತ–ಪಾಕಿಸ್ತಾನ ವಿಭಜನೆ ಸೂಕ್ತ ಎಂದಿದ್ದರು. ಆದರೆ 'ಏಕಂ ಸತ್ ವಿಪ್ರಾಃ ಬಹುದಾ ವದಂತಿ' (ಎಲ್ಲಾ ಧರ್ಮಗಳೂ ಒಂದೇ ಸತ್ಯವನ್ನು ಹೇಳುತ್ತವೆ) ಎಂದು ಕಾಂಗ್ರೆಸ್‌ನವರು ಭಾರತದಲ್ಲಿರುವ ಮುಸ್ಲಿಮರು, ಪಾಕಿಸ್ತಾನದಲ್ಲಿರುವ ಹಿಂದೂಗಳು ಅಲ್ಲಿಯೇ ಇರಲಿ ಎಂದರು. ಎಲ್ಲಾ ಧರ್ಮಗಳೂ ಒಂದೇ ಎನ್ನುವುದನ್ನು ಅನುಸರಿಸುತ್ತಾರೆ ಎಂದು ಭಾರತೀಯರು ನಂಬಿದೆವು. ಆದರೆ ಹಾಗಿದೆಯೇ ಎನ್ನುವ ಪ್ರಶ್ನೆ ಕಾಡುತ್ತದೆ ಎಂದರು.

ಮಾನಸಿಕತೆ ಬದಲಾಗಲಿ: ರೈಲಿಗೆ ಟಿಪ್ಪು ಹೆಸರಿಟ್ಟಿದ್ದು ಯಾರು?. ಈಗ ಆ ಹೆಸರನ್ನು ಬದಲಿಸಿದ್ದಕ್ಕೆ ವಿರೋಧವೇಕೆ?. ಟಿಪ್ಪು ಹೆಸರು ಬದಲಿಗೆ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಹೆಸರಿಟ್ಟರೆ ಯಾರೂ ವಿರೋಧಿಸುವುದಿಲ್ಲ. ಆದರೆ ಟಿಪ್ಪುವನ್ನು ಹೀರೋ ಎನ್ನುವವರೇ ಇದಕ್ಕೆ ಒಪ್ಪುವುದಿಲ್ಲ. ಮಾನಸಿಕತೆ ಬದಲಾಗಿಲ್ಲ ಎನ್ನುವುದಕ್ಕೆ ಇದು ಸಾಕ್ಷಿ. ಸಣ್ಣ ರಾಜ್ಯವನ್ನು ಅತ್ಯುತ್ತಮವಾಗಿ ಮುನ್ನಡೆಸಿದ, ಕೆರೆಕಟ್ಟೆಗಳ ನಿರ್ಮಿಸಿ ಬೆಂಗಳೂರು ಮಹಾನಗರವಾಗಿ ಬೆಳೆಯಲು ಕಾರಣರಾದ ಕೆಂಪೇಗೌಡರ 108 ಅಡಿ ಪ್ರತಿಮೆ ನಿರ್ಮಿಸಲಾಗಿದೆ ಹಾಗೆಯೇ ಇಲ್ಲಿ 100 ಅಡಿ ಟಿಪ್ಪು ಪ್ರತಿಮೆ ಮಾಡುತ್ತೇವೆ ಎನ್ನುವುದು ಯಾವ ರೀತಿಯ ಮಾನಸಿಕತೆ. ಇದು ಮೊದಲು ಬದಲಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಸಾಮರಸ್ಯ ವೇದಿಕೆ ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಲೇಖಕ ರೋಹಿತ್ ಚಕ್ರತೀರ್ಥ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ಅಯೋಧ್ಯಾ ಪ್ರಕಾಶನದ ಶಶಾಂಕ್ ಭಟ್, ವಿಕ್ರಮ ಸಂಪಾದಕ ವೃಷಾಂಕ್ ಭಟ್ ಮತ್ತಿತರರ ಗಣ್ಯರು ಉಪಸ್ಥಿತರಿದ್ದರು.

ಪಲ್ಲಕ್ಕಿಯಲ್ಲಿ ಕೃತಿ...



ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ವಿಶಿಷ್ಟ ರೀತಿಯಲ್ಲಿ ಅನಾವರಣಗೊಂಡಿತು. ರಂಗಾಯಣ ಹಾಗೂ ಅಯೋಧ್ಯಾ ಪ್ರಕಾಶನದ ಸಹಯೋಗದಲ್ಲಿ ಭೂಮಿಗೀತ ವೇದಿಕೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ವೇದಿಕೆಯಲ್ಲಿ ಗಣ್ಯರು ಆಸೀನರಾಗಿದ್ದರು. ವೇದಿಕೆ ಹಿಂಭಾಗದಿಂದ ಟಿಪ್ಪು ಸೈನಿಕರ ವೇಷಧಾರಿಗಳಿಬ್ಬರು ಪಲ್ಲಕ್ಕಿ ಹೊತ್ತು ತಂದು ಅದರೊಳಗಿದ್ದ ಬುಟ್ಟಿಯನ್ನು ಟೇಬಲ್ ಮೇಲಿಟ್ಟರು. ಹೂವಿನ ದಳ ತುಂಬಿದ್ದ ಬುಟ್ಟಿಯೊಳಗೆ ಹುದುಗಿದ್ದ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿಯನ್ನು ಎಸ್.ಎಲ್.ಭೈರಪ್ಪನವರು ಹೆಕ್ಕಿ ತೆಗೆಯುವ ಮೂಲಕ ಅನಾವರಣಗೊಳಿಸಿದ್ದು ವಿಶೇಷವಾಗಿತ್ತು.

ಕಾಲ್ಪನಿಕ ಕೃತಿಯಲ್ಲ. ಸತ್ಯ ಆಧಾರಯುಕ್ತವಾಗಿದೆ: ವಾದಿರಾಜ್

'ಟಿಪ್ಪು ನಿಜ ಕನಸುಗಳು' ಕಾಲ್ಪನಿಕ ಕೃತಿಯಲ್ಲ. ಆಧಾರಯುಕ್ತವಾಗಿದ್ದು, ಮುಚ್ಚಿಟ್ಟ ಇತಿಹಾಸವನ್ನು ಜನರ ಮುಂದಿಡುವ ಕೆಲಸ ಮಾಡಿದ್ದೇವೆ ಎಂದು ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಹೇಳಿದರು.

ಐ.ಎಂ.ಮುತ್ತಣ್ಣ, ಡಾ.ಎಸ್.ಎಲ್.ಭೈರಪ್ಪ, ಪ್ರತಾಪ ಸಿಂಹ, ಚಿದಾನಂದ ಮೂರ್ತಿ, ಪ್ರಧಾನ ಗುರುದತ್ ಮೊದಲಾದವರು ಟಿಪ್ಪು ನಿಜ ಸ್ವರೂಪ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಧಾರಾವಾಹಿ ಮಾಡಿದ್ದ ಸಂಜಯ್ ಖಾನ್, ಅದನ್ನು ಕಾಲ್ಪನಿಕ ಎಂದು ಒಪ್ಪಿಕೊಂಡರೆ, ಗಿರೀಶ್ ಕಾರ್ನಾಡ್ ಲಾವಣಿ ಕೇಳಿ ಬರೆದೆ ಎಂದು ಜಾರಿಕೊಂಡಿದ್ದರು. ಇದೆಲ್ಲವನ್ನು ಆಧಾರವನ್ನಾಗಿ ಇಟ್ಟುಕೊಂಡು ಬರೆದಿರುವ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ಕಾಲ್ಪನಿಕ ಅಲ್ಲ, ಆಧಾರಯುಕ್ತವಾಗಿದೆ ಎಂದರು. ಕೇರಳ ಆಕ್ರಮಿಸಿಕೊಳ್ಳಲು ಮುಂದಾಗಿದ್ದ ಟಿಪ್ಪು, ಕೊಡಗು ದಾಟುವಾಗ ಅಲ್ಲಿ ಮಾಡಿದ ಅನಾಚಾರ, ಅತ್ಯಾಚಾರ ಸಾಕಷ್ಟು, ಕರಾವಳಿಯಲ್ಲಿ ಕ್ರಿಶ್ಚಿಯನ್ನರ ಮೇಲೆ ದಾಳಿ ನಡೆಸಿ, 25 ಚರ್ಚ್ ಮೇಲೆ ದಾಳಿ ನಡೆಸಿದ. ಬ್ರಿಟೀಷರ ಪರವಾದವರ ಮೇಲೆ ಕ್ರೌರ್ಯ ತೋರಿಸುತ್ತ ಬಂದ ಟಿಪ್ಪು, ಚಿತ್ರದುರ್ಗದ ಮದಕರಿನಾಯಕರ ಮೇಲೆ ದಂಡೆತ್ತಿ ಹೋಗಿ ಅವರ 3 ಸಾವಿರ ಸೈನಿಕರಲ್ಲಿ ಮತೀಯ ಭಾವನೆ ತುಂಬಿ ಕುತಂತ್ರದಿಂದ ಮದಕರಿನಾಯಕರನ್ನು ಸೆರೆ ಹಿಡಿದು ಶ್ರೀರಂಗಪಟ್ಟಣದಲ್ಲಿ ವಿಷಹಾಕಿ ಕೊಂದ. ಪ್ರತಿಭಟಿಸಿದ ಮದಕರಿನಾಯಕನ ಮಗನನ್ನು ರಾಮನಗರ ಸಮೀಪದ ಭೈರಪಟ್ಟಣದ ಬಳಿ ನೇಣು ಹಾಕಿ ಕೊಂದಿದ್ದಾನೆ ಎಂದು ಅವರು ಆರೋಪಿಸಿದರು.

ಕೃತಿಯನ್ನು ಓದದೆ ಇರುವವರು ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ; ರೋಹಿತ್ ಚಕ್ರತೀರ್ಥ

ಟಿಪ್ಪು ನಿಜ ಕನಸುಗಳು ಕೃತಿಯು ಚರಿತ್ರೆಯ ಒಂದು ಭಾಗವಾಗಿದೆ. ಆದರೆ ಕೃತಿ ವಿರುದ್ಧವಾಗಿ ಹೇಳಿಕೆ ನೀಡುತ್ತಿರುವವರು ಕೃತಿಯನ್ನು ಓದದೆ ಇರುವವರು. ಇದು ಎಡಪಂಥದ ನಿಲುವು ಎಂದು ಚಿಂತಕ ರೋಹಿತ್ ಚಕ್ರತೀರ್ಥ ಟೀಕಿಸಿದರು. ಇದೊಂದು ಸಶಕ್ತವಾದ ನಾಟಕ ಹಾಗೂ ಅದ್ಭುತ ರಂಗಕೃತಿ. ಟಿಪ್ಪುವಿನ ಕುರಿತು ಅನೇಕ ಕೃತಿಗಳು ಹೊರಬಂದಿವೆ. ಅವುಗಳಲ್ಲಿ ಮೊದಲ ಬಾರಿಗೆ ಎಸ್.ಎಲ್.ಭೈರಪ್ಪ ಅವರ 'ಆವರಣ' ಕೃತಿಯನ್ನು ಓದಿದ ಅನೇಕರು ಟಿಪ್ಪುವಿನ ಬಗೆಗಿನ ನಿಲುವನ್ನು ಬದಲಿಸಿಕೊಂಡರು. ನಂತರ ದಿನಗಳಲ್ಲಿ ಪತ್ರಿಕೆ ಹಾಗೂ ಪುಸ್ತಕಗಳ ಮೂಲಕ ಸುಳ್ಳುಗಳನ್ನು ಹೊಡೆದು ಸತ್ಯ ತಿಳಿಸುವ ಕೆಲಸ ಮಾಡಿದ್ದಾರೆ ಎಂದರು.

ನಾವು ಪಠ್ಯಪುಸ್ತಕ ಪರಿಷ್ಕರಣೆ ವೇಳೆ ಟಿಪ್ಪುವಿನ ಕುರಿತಾಗಿ ಯಾವುದಕ್ಕೆ ಸಾಕ್ಷ್ಯಾಧಾರವಿಲ್ಲವೋ ಅವುಗಳನ್ನು ತೆಗೆದೆವು. ಆಗ ಸಾಕಷ್ಟು ವಿರೋಧ ವ್ಯಕ್ತವಾಯಿತು. ಈಗ ಮತ್ತೆ ಈ ಕೃತಿಯ ಕುರಿತು ಎರಡು ಮೂರು ದಿನದಿಂದ ಬಹಳ ಚರ್ಚೆಯಾಗುತ್ತಿದೆ. ಈ ಕೃತಿಯಲ್ಲಿ ಮತಾಂತರದ ಜೊತೆಗೆ ರಕ್ತಮಾಂಸವೂ ಸೇರಿಕೊಂಡಿದೆ. ಜನರ ಸಂಕಷ್ಟಗಳನ್ನು ಹೇಳಿರುವುದರಿಂದ ಜನರಿಗೆ ಈ ಕೃತಿ ಹತ್ತಿರವಾಗಲಿದೆ ಎಂದರು. ಸಿದ್ದರಾಮಯ್ಯ ಅವರ ಸರ್ಕಾರ ಟಿಪ್ಪು ಜಯಂತಿ ಮಾಡುವುದಾಗಿ ಘೋಷಿಸಿದಾಗ ಮೊದಲು ಹೋರಾಟದ ಬೀಜ ಬಿತ್ತಿದ್ದು ವಾದಿರಾಜ್ ಅವರು. ಕೀರ್ಮಾನಿ ಮತ್ತು ಪೂರ್ಣಯ್ಯ ಅವರ ಪಾತ್ರಗಳನ್ನು ಇಟ್ಟುಕೊಂಡು ಕಥೆಯಲ್ಲಿ ಸಂಘರ್ಷ ಆರಂಭಿಸಿದ್ದಾರೆ, ನಾಣ್ಯ ಬದಲಾವಣೆ, ಕಂದಾಯ ಬದಲಾವಣೆ, ಹೆಸರುಗಳ ಬದಲಾವಣೆ ಮುಂತಾದವನ್ನು ಉಲ್ಲೇಖಿಸಲಾಗಿದೆ. ಈ ನಾಟಕ ನೋಡಿದರೆ ಕಾಶ್ಮೀರ್ ಫೈಲ್ಸ್ ಸಿನಿಮಾ ನೋಡಿದಂತೆಯೇ ಭಾಸವಾಗುತ್ತದೆ. ಇಲ್ಲಿ ಭಾವನೆ, ಇತಿಹಾಸ ಮತ್ತು ಮೌಲ್ಯಗಳ ಸಂಘರ್ಷ ಕಂಡುಬರುತ್ತದೆ ಎಂದರು.

ಟಿಪ್ಪುವಿನಿಂದ ದಾಳಿಗೊಳಗಾದ ಕೊಡವರಲ್ಲಿ ನೋವಿರುವುದಿಲ್ಲವೇ? ಸತ್ಯ ಸಂಗತಿ ತಿಳಿಸುವ ಕೃತಿ ರಚನೆ

ಟಿಪ್ಪು ಪುಸ್ತಕ ಬರೆದ ಕುರಿತು ಅಡ್ಡಂಡ ಕಾರ್ಯಪ್ಪ ವಿವರಣೆ

ಮೈಸೂರು, ನ.13(ಎಂಕೆ)– ಟಿಪ್ಪುವಿನಿಂದ ದಾಳಿಗೊಳಗಾದ ಕೊಡವರಲ್ಲಿ ನೋವಿರುವುದಿಲ್ಲವೇ?. ಸಾವಿರಾರು ಕೊಡವರನ್ನು ಮತಾಂತರಿಸಿದ್ದು ಸಾಕ್ಷಿ ಸಮೇತ ಕಣ್ಣ ಮುಂದಿದೆ. ನನ್ನ ಕುಟುಂಬ ಹಿರಿಯಜ್ಜನೂ ಕೂಡ ಟಿಪ್ಪುವಿನಿಂದ ಮತಾಂತರಗೊಂಡವನೇ. ಅದೆಲ್ಲದರ ನೋವಿನಿಂದ ಸತ್ಯ ಸಂಗತಿ ತಿಳಿಸುವ ನಿಟ್ಟಿನಲ್ಲಿ ಟಿಪ್ಪು ಕುರಿತು ನಾಟಕ ಕೃತಿ ಬರೆದಿದ್ದೇನೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರತಿಪಾದಿಸಿದರು.

'ಟಿಪ್ಪು ನಿಜ ಕನಸುಗಳು' ನಾಟಕ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ 'ನಾನೇಕೆ ಈ ಕೃತಿ ಬರೆದೆ' ಎಂಬುದರ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, 2012ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಅಲ್ಪಸಂಖ್ಯಾತರ ಇಲಾಖೆ ಸಚಿವರಾಗಿದ್ದ ರೆಹಮಾನ್ ಖಾನ್ ಮೈಸೂರಿಗೆ ಬಂದಿದ್ದ ವೇಳೆ ಶ್ರೀರಂಗಪಟ್ಟಣದಲ್ಲಿ ಮುಸ್ಲಿಮರಿಗಾಗಿ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದಾಗಿ ಹೇಳಿದ್ದರು. ಇದು ಪತ್ರಿಕೆಗಳಲ್ಲಿ ಪ್ರಕಟವಾದ ಮರುದಿನ ಮಡಿಕೇರಿಯಲ್ಲಿ ಒಂದು ಸಭೆ ನಡೆಯಿತು. ಆ ಸಭೆಗೆ ನಾನು ಕೂಡ ಆಹ್ವಾನಿತನಾಗಿದ್ದೆ. ಆ ವಿಶ್ವವಿದ್ಯಾನಿಲಯ ವಿದ್ಯಾಕೇಂದ್ರವಾಗದೆ ಉಗ್ರವಾದಿಗಳ, ಜಿಹಾದಿಗಳ ಕೇಂದ್ರವಾಗುತ್ತದೆ. ಆದ್ದರಿಂದ ಇದನ್ನು ತಡೆಯಬೇಕು ಎಂಬುದು



ಸಭೆಯ ಮುಖ್ಯ ಉದ್ದೇಶವಾಗಿತ್ತು. ಸಭೆ ನಂತರ ಚಳವಳಿಗಳು, ಚರ್ಚೆಗಳು, ವಿಚಾರ ಸಂಕಿರಣಗಳು ರೂಪುಗೊಂಡವು.

ನನ್ನ ಅದೃಷ್ಟಕ್ಕೆ ಕಾಂಗ್ರೆಸ್ ಸರ್ಕಾರ ನೆಲಕಚ್ಚಿತು. ರೆಹಮಾನ್ ಖಾನ್ ಅದೃಶ್ಯರಾದರೂ ಟಿಪ್ಪು ಕನಸು ಭದ್ರವಾಗಿತ್ತು. ನಂತರ ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಶಾಸಕ ಸಿ.ಟಿ.ರವಿ, ಸಂಸದ ತೇಜಸ್ವಿ ಸೂರ್ಯ ಇನ್ನಿತರರೊಂದಿಗೆ ಸೇರಿ ಪರಿವಾರದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಅದೇ ವೇಳೆ ಮತ ಬ್ಯಾಂಕ್ ರಾಜಕಾರಣಕ್ಕಾಗಿ ಸಿದ್ದರಾಮಯ್ಯ ಅವರು, ಟಿಪ್ಪು ಜಯಂತಿ ಆಚರಣೆ ಮಾಡುವುದಾಗಿ ಘೋಷಣೆ ಮಾಡಿದ್ದರು. ಕೊಡಗು ಬೆಂಕಿ ಉಂಡೆಯಾಯಿತು. ಏಕೆಂದರೆ ನನ್ನ ಕುಟುಂಬದ ಹಿರಿಯಜ್ಜ ಕೂಡ ಟಿಪ್ಪುವಿನಿಂದ ಮತಾಂತರಗೊಂಡವನಾಗಿದ್ದಾನೆ ಸಾವಿರಾರು ಕುಟುಂಬಗಳು ಟಿಪ್ಪುವಿನಿಂದಾಗಿ ಮತಾಂತರಗೊಂಡಿದ್ದವು. ಈ ಎಲ್ಲಾ ವಿಚಾರಗಳನ್ನು ಅಧ್ಯಯನ ಮಾಡಿದೆ.

ಹಾಗೆಯೇ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಗಿರೀಶ್ ಕಾರ್ನಾಡ್ ಅವರು 'ಟಿಪ್ಪು ಕಂಡ ಕನಸುಗಳು' ಎಂಬ ನಾಟಕ ಬರೆದು ರಂಗಾಯಣದಲ್ಲಿಯೇ ಪ್ರದರ್ಶಿಸಿದ್ದರು. ಟಿಪ್ಪು ದೇಶಭಕ್ತ, ಪ್ರಜಾಪ್ರಭುತ್ವವಾದಿ ಸೇರಿದಂತೆ ಏನೆಲ್ಲಾ ಬಣ್ಣ ಬಳಿಯಬೇಕೋ ಅದನ್ನೆಲ್ಲವನ್ನು ಬಳಿದು ಟಿಪ್ಪುವಿನ ಭುಜದ ಮೇಲೆ ತೂಪಾಕಿ ಇಟ್ಟು ಪ್ರಶಸ್ತಿಗಾಗಿ ಗುಂಡು ಹೊಡೆದಿದ್ದರು. ಅದನ್ನು ಕಂಡ ನಾನು, ಒಂದು ಜನಾಂಗದ ಸೃಷ್ಟಿಗೆ ಸಾವಿರಾರು ಕೊಡವರನ್ನು ಮತಾಂತರಿಸಿದ್ದ ಕನ್ನಡವನ್ನು ಕೊಂದವನನ್ನು ಕನ್ನಡ ಪ್ರೇಮಿ ಎಂಬ ಬೂಟಾಟಿಕೆ ಎಂತಹದ್ದು. ಸುಳ್ಳುಗಾರರ ಸಂತೆಯಲ್ಲಿ ವ್ಯರ್ಥ ಕಲಾಪ ಎಂದು ವಿಮರ್ಶೆ ಬರೆದೆ. ಒಬ್ಬ ನೋವುಂಡ ಕೊಡವನಾಗಿ ಎಂತಹ ಸುಳ್ಳು ಹೇಳುತ್ತೀರಿ ಜ್ಞಾನಪೀಠಿಗಳೇ ಎಂದು ಗಿರೀಶ್ ಕಾರ್ನಾಡ್ ಅವರ ಮೇಲೆ ರೊಚ್ಚಿಗೆದ್ದಿದ್ದೆ. ಇದು ನೊಂದವರ ಸಹಜ ಕ್ರಿಯೆ.

ಕಾಕತಾಳೀಯ ಎಂಬಂತೆ ನಾನು ಮೈಸೂರು ರಂಗಾಯಣ ನಿರ್ದೇಶಕನಾಗಿ ಬಂದೆ. ಅಂದು ಸುವರ್ಣ ಮಹೋತ್ಸವವಾದರೆ, ಇಂದು ಅಮೃತ ಮಹೋತ್ಸವ. ರಾಜ್ಯದಲ್ಲಿ ಟಿಪ್ಪು ವಿಚಾರ ಸ್ಫೋಟಗೊಳ್ಳುತ್ತಲೇ ಇತ್ತು. ಬಿಜೆಪಿ ಸರ್ಕಾರ ಟಿಪ್ಪು ಜಯಂತಿ ಆಚರಣೆಯನ್ನು ರದ್ದು ಮಾಡಿತು. ನಂತರ ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಅವರು ನೀಡಿದ ಸಲಹೆಯಂತೆ, ಹಲವು ನಾಟಕಕಾರರ, ಬರಹಗಾರರ ಸಲಹೆಗಳನ್ನು ಪಡೆದು ಈ ನಾಟಕ ಕೃತಿಯನ್ನು ಬರೆದಿದ್ದೇನೆ. ಇದಕ್ಕೆ ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಅವರು ಮುನ್ನುಡಿ ಬರೆದರೆ, ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಬೆನ್ನುಡಿ ಬರೆದಿದ್ದಾರೆ.

ಟಿಪ್ಪು ಮತಾಂತರಕ್ಕೆ ಕಣ್ಣಮುಂದೆಯೇ ಸಾಕ್ಷಿಗಳ ರಾಶಿ ಇದೆ. ಇಂದಿಗೂ ಮೇಲುಕೋಟೆಯ ಬ್ರಾಹ್ಮಣರು ದೀಪಾವಳಿ ಆಚರಣೆ ಮಾಡುವುದಿಲ್ಲ. ಮಂಗಳೂರಿನಲ್ಲಿ ಟಿಪ್ಪುವಿನಿಂದ ಮತಾಂತರಗೊಂಡ ಕ್ರೈಸ್ತರ ಚರ್ಚ್ ಇದೆ. ಇಷ್ಟೆಲ್ಲಾ ನೋವುಗಳನ್ನು ಅನುಭವಿಸಿ, ವಿಚಾರಗಳನ್ನು ತಿಳಿದು ಮೌನವಾಗಿದ್ದರೆ ನನ್ನಂತಹ ಹೇಳವ, ಹೇಡಿ ಈ ಜಗತ್ತಿನಲ್ಲಿ ಯಾರೂ ಇರುತ್ತಿರಲಿಲ್ಲ. ಆದ್ದರಿಂದ ಈ ನಾಟಕ ಕೃತಿ ಬರೆದಿದ್ದೇನೆ ಎಂದು ಕೃತಿ ಬರೆದ ಕಾರಣವನ್ನು ತಿಳಿಸಿದರು.

ಬರಿಗೈಯಲ್ಲಿ ಹುಲಿಯನ್ನು ಕೊಲ್ಲುವುದು ಹೇಗೆ ಸಾಧ್ಯ? ಪ್ರತಾಪ್ ಸಿಂಹ ಪ್ರಶ್ನೆ

ನಾವು ಶಾಲೆಯಲ್ಲಿ ಟಿಪ್ಪು ಸುಲ್ತಾನ್ ಮೈಸೂರು ಹುಲಿ ಎಂದು ಓದಿಕೊಂಡು ಬಂದೆವು. ಆದರೆ ಹೇಗೆ ಬರಿಗೈಯಲ್ಲಿ ಹುಲಿ ಕೊಂದ ಎಂದು ಯಾರೂ ಪ್ರಶ್ನಿಸಲಿಲ್ಲ. ಏಕಾಂಗಿಯಾಗಿ, ಬರಿಗೈಯಲ್ಲಿ ಹುಲಿ ಕೊಲ್ಲುವುದು ಹೇಗೆ ಸಾಧ್ಯ ಎಂದು ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದರು.

ಎರಡನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೈದರ್‌ಅಲಿ ನಿಧನವಾದ ಮೇಲೆ ಒಂದು ಯುದ್ಧವನ್ನೂ ಗೆಲ್ಲಲಾಗದ ಟಿಪ್ಪು, ಸುಲ್ತಾನ ಹೇಗೆ ಆಗುತ್ತಾನೆ. ಕಾಡಿನಲ್ಲಿ ಏಕಾಂಗಿಯಾಗಿ ತಿರುಗುವ ಶಕ್ತಿಶಾಲಿ ಹುಲಿಯನ್ನು ಬರಿಗೈಯಲ್ಲಿ ಹೇಗೆ ಕೊಲ್ಲುತ್ತಾನೆ? ದೇಶದಲ್ಲಿ ಮುಸ್ಲಿಮರು ಎಂದೂ ಏಕಾಂಗಿಯಾಗಿ ಶೌರ್ಯಮೆರೆದಿಲ್ಲ. ಬದಲಿಗೆ ಕ್ರೌರ್ಯ ಮೆರೆದಿದ್ದಾರೆ. 4ನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ರಣರಂಗಕ್ಕೆ ಬರದೆ, ಕೋಟೆಯೊಳಗೆ ಸತ್ತ ಟಿಪ್ಪು, ಸುಲ್ತಾನ ಆಗಲು ಸಾಧ್ಯವೇ ಇಲ್ಲ ಎಂದರು.


ಹಿಂದಿ ಹೇರಿಕೆ ಎಂದು ಹೋರಾಟ ನಡೆಸುವ ಕನ್ನಡಪರ ಹೋರಾಟಗಾರರು, ಕನ್ನಡ ಪದಗಳೊಳಗೆ ಪರ್ಷಿಯನ್ ತುಂಬಿದ ಟಿಪ್ಪುವನ್ನು ವಿರೋಧಿಸಿ ಹೋರಾಟ ಮಾಡುವುದಿಲ್ಲ. ಅನೇಕ ಸಂಶೋಧನೆ ನಡೆಸಿದ್ದೇನೆ ಎಂದಿದ್ದ ಸಾಹಿತಿ ಕಲಬುರ್ಗಿ ಅವರು ಟಿಪ್ಪುವಿನ ಕನ್ನಡ ವಿರೋಧಿತನವನ್ನು ಏಕೆ ಸಂಶೋಧನೆ ಮಾಡಲಿಲ್ಲ? ಜನಪ್ರತಿನಿಧಿಯಾಗಿ ಓಟಿಗಾಗಿ ಶಾಸಕ ತನ್ವೀರ್‌ಸೇಠ್ ಟಿಪ್ಪು ಸಮರ್ಥನೆಯಲ್ಲಿ ನ್ಯಾಯವಿದೆ, ಆದರೆ ವಿಶ್ವನಾಥ್‌ಗೆ ಏನು ಅನಿವಾರ್ಯತೆ ಇದೆ? ಎಂದು ಲೇವಡಿ ಮಾಡಿದರು.

4 ವರ್ಷಗಳ ಪರಿಶ್ರಮ: ರೈಲಿಗೆ ಟಿಪ್ಪು ಹೆಸರು ತೆಗೆದು ಒಡೆಯರ್ ಹೆಸರು ನಾಮಕರಣ ಮಾಡುವುದಕ್ಕೆ 4 ವರ್ಷಗಳ ಪರಿಶ್ರಮವಿದೆ. ಹಾಗೆಯೇ ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಮೈಸೂರು ರೈಲ್ವೆ ನಿಲ್ದಾಣಕ್ಕೆ ಚಾಮರಾಜ ಒಡೆಯರ್ ಅವರ ಹೆಸರಿಡಲಾಗುವುದು. ಅಲ್ಲದೇ ನಗರದಲ್ಲಿ ಗುಂಬಜ್ ರೀತಿ ನಿರ್ಮಿಸಿರುವ ಬಸ್ ಶೆಲ್ಟರ್‌ಗಳನ್ನು ನಿಗದಿತ ಅವಧಿಯೊಳಗೆ ತೆಗೆಯದಿದ್ದರೆ ನಾನೇ ಜೆಸಿಬಿ ತೆಗೆದುಕೊಂಡು ಹೋಗಿ ಹೊಡೆದು ಹಾಕುತ್ತೇನೆ ಎಂದು ಎಚ್ಚರಿಸಿದರಲ್ಲದೆ ಮೈಸೂರು ಸಂಸ್ಥಾನಕ್ಕೆ ಕೊಡುಗೆ ನೀಡಿದವರು ಮೈಸೂರು ಒಡೆಯರು. ಅವರನ್ನು ಸ್ಮರಿಸುವುದು ಮುಖ್ಯವೇ ಹೊರತು ಟಿಪ್ಪುವಲ್ಲ ಎಂದರು.

ಗುತ್ತಿಗೆದಾರ, ಇಂಜಿನಿಯರ್ ನಿರ್ಲಕ್ಷ್ಯದಿಂದ

ಟಿಪ್ಪರ್‌ಗೆ ವಿದ್ಯುತ್ ತಂತಿ ತಗುಲಿ ಚಾಲಕ ಸಾವು

ಕೆ.ಆರ್.ಪೇಟೆ, ನ.13– ಕೆರೆ ಅಭಿವೃದ್ಧಿ ಕಾಮಗಾರಿಯ ವೇಳೆ ಗುತ್ತಿಗೆದಾರರು ಮತ್ತು ಇಂಜಿನಿಯರ್‌ಗಳ ಬೇಜವಾಬ್ದಾರಿಯಿಂದ ಮಣ್ಣು ಸುರಿಯುತ್ತಿದ್ದ ಟಿಪ್ಪರ್‌ಗೆ ವಿದ್ಯುತ್ ತಂತಿ ತಗುಲಿ ಟಿಪ್ಪರ್ ಚಾಲಕ ಮೃತಪಟ್ಟ ಘಟನೆ ಹೊಸಹೊಳಲಿನಲ್ಲಿ ಜರುಗಿದೆ.



ಬಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಬಬಲಾದಿ ಗ್ರಾಮದ ಕಾಂತಪ್ಪ(35) ಮೃತಪಟ್ಟ ಟಿಪ್ಪರ್ ಚಾಲಕ.

ಪುರಸಭಾ ವ್ಯಾಪ್ತಿಯ ಹೊಸಹೊಳಲು ಚಿಕ್ಕಕರೆಯನ್ನು ಸುಮಾರು 10 ಕೋಟಿ ರೂ. ವೆಚ್ಚದಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಕೆರೆ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿದ್ದು, ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ಕೇಂದ್ರವನ್ನಾಗಿಸಲು ಯೋಜಿಸಲಾಗಿದೆ ಕೆರೆಯ ಎರಡೂ ಬದಿಯಲ್ಲಿ ವಾಕಿಂಗ್ ಪಾಥ್ ನಿರ್ಮಾಣ, ಕೆರೆಯೊಳಗೆ ಕೃತಕ ನಡುಗೆಡ್ಡೆಗಳನ್ನು ನಿರ್ಮಿಸಿ ಬೋಟಿಂಗ್ ಮತ್ತಿತರ ಪ್ರವಾಸಿ ಆಕರ್ಷಕ ತಾಣವನ್ನಾಗಿಸಲು ಯೋಜಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ಮುಗಿಯುವ ಮುನ್ನವೇ ಕಾಮಗಾರಿ ಆರಂಭಿಸಿದ ಕಾರಣ ವಿವಾದಕ್ಕೆ ಒಳಗಾಗಿ ಕೆಲವು ಕಾಲ ಕೆರೆ ಅಭಿವೃದ್ಧಿ ಕಾರ್ಯಕ್ಕೆ ಹಿನ್ನಡೆಯಾಗಿತ್ತು. ಆ ನಂತರ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆದು ಕಾಮಗಾರಿ ಆರಂಭಿಸಲಾಗಿದೆ. ಕೆರೆಯ ಸುತ್ತ ವಾಕಿಂಗ್ ಪಾಥ್ ನಿರ್ಮಿಸಲು ಅಗತ್ಯವಾದ ಮಣ್ಣನ್ನು ಟಿಪ್ಪರ್‌ನಿಂದ ತಂದು ಕೆಳಗೆ ಸುರಿಯುವುದಕ್ಕಾಗಿ ಚಾಲಕ ಟಿಪ್ಪರ್ ಲಿಫ್ಟ್ ಎತ್ತಿದ್ದಾನೆ. ಈ ಸಂದರ್ಭದಲ್ಲಿ ಮೇಲೆ ಹಾದುಹೋಗಿದ್ದ ವಿದ್ಯುತ್ ತಂತಿಯನ್ನು ಚಾಲಕ ಗಮನಿಸದ ಪರಿಣಾಮ ಟಿಪ್ಪರ್‌ಗೆ ವಿದ್ಯುತ್ ಪ್ರವಹಿಸಿದೆ. ವಿದ್ಯುತ್ ಆಘಾತಕ್ಕೆ ಒಳಗಾಗಿ ಪ್ರಜ್ಞಾಹೀನನಾಗಿದ್ದ ಚಾಲಕ ಕಾಂತಪ್ಪ ಅವರನ್ನು ತಕ್ಷಣವೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಕಾಂತಪ್ಪ ಮೃತಪಟ್ಟಿದ್ದಾನೆ. ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಕಾಂತರಾಜು ಶವವನ್ನು ಮರಣೋತ್ತರ ಪರೀಕ್ಷೆಗಾಗಿ ತರಲಾಗಿದೆ.

ಸ್ಥಳಕ್ಕೆ ಬಾರದ ಎಂಜಿನಿಯರ್: ವಿದ್ಯುತ್ ಅವಘಡದಿಂದ ಕರ್ತವ್ಯ ನಿರತ ಚಾಲಕನೊಬ್ಬ ಮೃತಪಟ್ಟಿದ್ದರೂ ಸಣ್ಣ ನೀರಾವರಿ ಇಲಾಖೆಯ ಕಿರಿಯ ಎಂಜಿನಿಯರ್ ಅಜರುದ್ದೀನ್ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಲಿಲ್ಲ. ಆಸ್ಪತ್ರೆಗೆ ಬಂದು ವಿಚಾರಿಸುವ ಕನಿಷ್ಠ ಸೌಜನ್ಯವನ್ನೂ ಎಂಜಿನಿಯರ್ ಅಜರುದ್ದೀನ್ ತೋರಿಸಿಲ್ಲ. ನಿಯಮಾನುಸಾರ ಎಂಜಿನಿಯರ್ ಸ್ಥಳದಲ್ಲಿದ್ದು, ಕಾಮಗಾರಿಯ ನಿರ್ವಹಣೆ ಲೋಪ–ದೋಷಗಳನ್ನು ಪರಿಶೀಲಿಸಬೇಕು. ಆದರೆ ಎಂಜಿನಿಯರ್ ಅಜರುದ್ದೀನ್ ಕೆರೆ ಕಾಮಗಾರಿಯ ವೇಳೆ ಸ್ಥಳದಲ್ಲಿದ್ದು ಸರಿಯಾಗಿ ಪರಿಶೀಲನೆ ಮಾಡುತ್ತಿಲ್ಲ. ಸ್ಥಳದಲ್ಲಿದ್ದ ಗುತ್ತಿಗೆದಾರರ ಪರವಾಗಿ ಉಸ್ತುವಾರಿ ನೋಡುವವರು ಮೇಲೆ ವಿದ್ಯುತ್ ತಂತಿ ಇರುವುದನ್ನು ಗಮನಿಸಿ ಚಾಲಕನಿಗೆ ಸೂಕ್ತ ಸಲಹೆಗಳನ್ನು ನೀಡಿಲ್ಲ. ಇದರ ಪರಿಣಾಮ ಟಿಪ್ಪರ್ ಚಾಲಕ ವಿದ್ಯುತ್ ತಂತಿ ಗಮನಿಸದೆ ಲಿಫ್ಟ್ ಮೇಲೆ ಎತ್ತಿದ್ದಾನೆ. ಎಂಜಿನಿಯರ್ ಮತ್ತು ಗುತ್ತಿಗೆದಾರರ ಕರ್ತವ್ಯ ಲೋಪದ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರೈತರ ಸಮಸ್ಯೆ ಬಗೆಹರಿಸಲು ಬಿಜೆಪಿ ಸರ್ಕಾರ ವಿಫಲ

ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ



ಮಂಡ್ಯ ಜಿಲ್ಲೆ ಸ್ಥಾಪನೆಯಾಗಿ 50 ವರ್ಷ ಸಂದ ನೆನಪಿನಾರ್ಥ ಬಾಲಗಂಗಾಧರನಾಥ ಶ್ರೀಗಳ ಒತ್ತಾಸೆಯಿಂದ ಮಂಡ್ಯ ನಗರದಲ್ಲಿ ಕ್ಯಾನ್ಸರ್ ಪೆರಿಪೆರಲ್ ಆಸ್ಪತ್ರೆ ಮಂಜೂರಾಗಿ ಕಾರ್ಯನಿರ್ವಹಿಸುತ್ತಿತ್ತು. ಆದರೆ, ಪ್ರಸ್ತುತ ಆಸ್ಪತ್ರೆ ಸೇವೆ ರೋಗಿಗಳಿಗೆ ದೊರೆಯದಿರುವುದು ವಿಪರ್ಯಾಸ. ಕೂಡಲೇ ಜಿಲ್ಲಾ ಮಂತ್ರಿಗಳು, ಜಿಲ್ಲೆಯ ಜನಪ್ರತಿನಿಧಿಗಳು ಕ್ಯಾನ್ಸರ್ ಆಸ್ಪತ್ರೆ ಕಾರ್ಯನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು. ಮುಂದಿನ ಒಂದು ವಾರದೊಳಗೆ ಆಸ್ಪತ್ರೆ ಸಮುಚ್ಛಯಕ್ಕೆ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಹಾಗೂ ಮಧು ಮಾದೇಗೌಡ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿ, ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಿದ್ದಾರೆ

– ಎನ್.ಚಲುವರಾಯಸ್ವಾಮಿ, ಕೆಪಿಸಿಸಿ ಉಪಾಧ್ಯಕ್ಷ.

ಮಂಡ್ಯ, ನ.13– ಕಬ್ಬಿಗೆ ಬೆಂಬಲ ಬೆಲೆ ನಿಗದಿ, ಭತ್ತ ಖರೀದಿ ಕೇಂದ್ರ ತೆರೆಯುವುದು ಸೇರಿದಂತೆ ರೈತರ ಸಮಸ್ಯೆ ಬಗೆಹರಿಸಲು ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯದಲ್ಲಿ ಸರ್ಕಾರ ಇದೆಯೋ, ಇಲ್ಲವೋ ಅನ್ನುವ ಅನುಮಾನ ಜನರಲ್ಲಿ ಕಾಡುತ್ತಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ಎನ್.ಚಲುವರಾಯಸ್ವಾಮಿ ವ್ಯಂಗ್ಯವಾಡಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ರೈತರು ಹಾಗೂ ಜನಪ್ರತಿನಿಧಿಗಳನ್ನು ಸರ್ಕಾರ ವಿಶ್ವಾಸಕ್ಕೆ ಪಡೆಯದೇ ಉದ್ಧಟತನದಿಂದ ವರ್ತಿಸುತ್ತಿದೆ. ಇದಕ್ಕೆ ಜಿಲ್ಲೆಯ ಜನರೇ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ. ಕಳೆದ ನಾಲ್ಕೈದು ದಿನಗಳಿಂದ ರೈತರು ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವಂತೆ ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಸಚಿವ ಕೆ.ಸಿ.ನಾರಾಯಣಗೌಡರು ಸೌಜನ್ಯಕ್ಕಾದರೂ ಭೇಟಿ ಮಾಡಿ ಸಮಸ್ಯೆ ಕೇಳಲು ಮುಂದಾಗದಿರುವುದು ವಿಪರ್ಯಾಸ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಬ್ಬಿನ ದರ ಹಾಗೂ ಕಬ್ಬಿನ ಹಣ ಪಾವತಿ ಸಂಬಂಧ ಸರ್ಕಾರ ಸ್ಪಷ್ಟ ನಿರ್ದೇಶನ ನೀಡದೆ, ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಜಾರಿಗೊಳಿಸಿದ ಬೈಸಿಕಲ್ ವಿತರಣೆ ಕಳೆದ 3 ವರ್ಷಗಳಿಂದ ಅನುಷ್ಠಾನಗೊಂಡಿಲ್ಲ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳು ನಾಲ್ಕೈದು ಕಿಮೀ ವ್ಯಾಪ್ತಿಯ ಶಾಲೆಗಳಿಗೆ ಬಿಸಿಲು ಮಳೆ ಎನ್ನದೇ ನಡೆದುಕೊಂಡು ತೆರಳಬೇಕಾದ ಸ್ಥಿತಿ ಬಂದಿದೆ ಎಂದು ಆಪಾದಿಸಿದರು.

ವಿದ್ಯಾರ್ಥಿ ವೇತನ ಸ್ಥಗಿತವಾಗಿದ್ದು ವಿದ್ಯಾರ್ಥಿಗಳ ಪರಿಪಾಟಲು ಹೇಳತೀರದಾಗಿದೆ. ಅದೇ ರೀತಿ ರಾಜ್ಯ ಬಿಸಿಯೂಟ ನೌಕರರ ಗೌರವ ಧನವನ್ನು ಕಳೆದ 1 ವರ್ಷದಿಂದ ಬಿಡುಗಡೆ ಮಾಡಿಲ್ಲ. ಗೌರವಧನದಲ್ಲಿ ಬದುಕು ಕಟ್ಟಿಕೊಂಡಿರುವ ಬಿಸಿಯೂಟ ನೌಕರರು 1,18,586 ಸಿಬ್ಬಂದಿಗಳಿದ್ದು, ತಕ್ಷಣ ಅನುದಾನ ಬಿಡುಗಡೆಗೆ ಸರ್ಕಾರ ಮುಂದಾಗಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಭತ್ತದ ಕಟಾವು ಆರಂಭಗೊಳ್ಳಲಿದ್ದು, ಕೇಂದ್ರ ಸರ್ಕಾರ ಘೋಷಿಸಿರುವ ಬೆಂಬಲ ಬೆಲೆ ಯೋಜನೆಯಡಿ ಕ್ವಿಂಟಾಲ್‌ಗೆ 2040 ರೂ. ನಂತೆ ಭತ್ತ ಖರೀದಿಗೆ ಕೂಡಲೇ ಖರೀದಿ ಕೇಂದ್ರ ತೆರೆಯಬೇಕೆಂದು ಒತ್ತಾಯಿಸಿದ ಅವರು, ಮುಕ್ತ ಮಾರುಕಟ್ಟೆ ಮೌಲ್ಯ 1500ರ ಆಸುಪಾಸಿನಲ್ಲಿದ್ದು, ಸರ್ಕಾರ ನಿಗಾ ವಹಿಸಬೇಕು. ಜಿಲ್ಲೆಯ ಜನಪ್ರತಿನಿಧಿಗಳು ಮೌನ ಮುರಿಯಬೇಕೆಂದು ಒತ್ತಾಯಿಸಿದರು.

ಮೈಷುಗರ್ ಕಾರ್ಖಾನೆ ಕಬ್ಬು ನುರಿಸಲು ಅಗತ್ಯವಿರುವ 20 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು. ಈ ಬಗ್ಗೆ ಜಿಲ್ಲೆಯ ಇಬ್ಬರು ಸಚಿವರು ಕಾಳಜಿ ವಹಿಸಬೇಕು ಎಂದು ಆಗ್ರಹಿಸಿದರು.

ಮಳವಳ್ಳಿ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಹಾಗೂ ಭಿನ್ನಮತವಿಲ್ಲ. ಪ್ರತ್ಯೇಕ ಸಭೆ ನಡೆಸಿರುವ ಕೆಲವರು ಕಾಂಗ್ರೆಸ್‌ನಲ್ಲಿದ್ದಾರೋ ಅಥವಾ ಜೆಡಿಎಸ್‌ನಲ್ಲಿದ್ದಾರೋ ಎಂಬುದು ನನಗೆ ತಿಳಿದಿಲ್ಲ. ಅವರ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕ ಎ.ಬಿ.ರಮೇಶ್ ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮಹಿಳಾ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ಯುವಘಟಕ ಅಧ್ಯಕ್ಷ ವಿಜಯ್‌ಕುಮಾರ್, ನಗರ ಘಟಕ ಅಧ್ಯಕ್ಷ ಹೆಚ್.ಕೆ.ರುದ್ರಪ್ಪ ಹಾಗೂ ಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಲಹಳ್ಳಿ ಅಶೋಕ್ ಹಾಜರಿದ್ದರು.

ರಾಜ್ಯದಲ್ಲಿ ಜೆಡಿಎಸ್‌ಗೆ 123 ಸ್ಥಾನಗಳಲ್ಲಿ ಗೆಲುವು ಖಚಿತ

ಕೊಡಗು ಜೆಡಿಎಸ್ ಉಸ್ತುವಾರಿ ನರಸಿಂಹ ಮೂರ್ತಿ ವಿಶ್ವಾಸ

- ಬಿಜೆಪಿ, ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡಿದೆ
- ಕುಮಾರಸ್ವಾಮಿ ನೀಡಿದ್ದ ಭರವಸೆಗಳನ್ನು ಈಡೇರಿಸಿದ್ದಾರೆ



ಮಡಿಕೇರಿ,ನ.13– ಎರಡು ರಾಜಕೀಯ ಪಕ್ಷಗಳ ಮೇಲೆ ಜಿಲ್ಲೆಯ ಜನ ವಿಶ್ವಾಸ ಕಳೆದುಕೊಂಡಿದ್ದು, ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ 123 ಸ್ಥಾನಗಳಲ್ಲಿ ಗೆಲುವು ಸಾಧಿಸುವುದು ಖಚಿತ ಎಂದು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹಾಗೂ ಕೊಡಗು ಉಸ್ತುವಾರಿ ನರಸಿಂಹಮೂರ್ತಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ರಾಷ್ಟ್ರೀಯ ಪಕ್ಷಗಳು ತಮ್ಮ ಆಡಳಿತ ಅವಧಿಯಲ್ಲಿ ಕೊಡಗು ಜಿಲ್ಲೆಗೆ ಏನು ಕೊಡುಗೆ ನೀಡಿವೆ. ಇಬ್ಬರು ಶಾಸಕರ ಸಾಧನೆ ಏನು ಎಂದು ಪ್ರಶ್ನಿಸಿದರು.

ಕಡಿಮೆ ಅವಧಿಯಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು, ಕೊಡಗಿಗೆ ಅಪಾರ ಕೊಡುಗೆ ನೀಡಿದ್ದಾರೆ. ಪ್ರಾಕೃತಿಕ ವಿಕೋಪದ ಸಮಯದಲ್ಲಿ ಕೊಡಗಿಗೆ ಕೊಡುಗೆ ನೀಡಿರುವುದನ್ನು ಜಿಲ್ಲೆಯ ಜನತೆ ಮರೆಯಲ್ಲ. ಎರಡು ರಾಷ್ಟ್ರೀಯ ಪಕ್ಷಗಳ ಮೇಲೆ ರಾಜ್ಯ ಹಾಗೂ ಜಿಲ್ಲೆಯ ಜನತೆ ನಂಬಿಕೆ ಕಳೆದುಕೊಂಡಿದ್ದು, ಮುಂದಿನ ಚುನಾವಣೆಯಲ್ಲಿ ಕೊಡಗಿನ ಎರಡು ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ನರಸಿಂಹ ಮೂರ್ತಿ ಪಂಚರತ್ನ ಯಾತ್ರೆ ಮೂಲಕ ಕೊಡಗಿನ ಎರಡು ವಿಧಾನಸಭಾ ಕ್ಷೇತ್ರದ ಜನತೆಗೆ ಕುಮಾರಸ್ವಾಮಿ ಅವರ ಕೊಡುಗೆ ತಿಳಿಸುತ್ತೇವೆ ಎಂದರು.

ಜೆಡಿಎಸ್ ವಕ್ತಾರ ಸಂಕೇತ್ ಪೂವಯ್ಯ ಮಾತನಾಡಿ, ಬಡವರ ಕಣ್ಣೀರನ್ನು ಒರೆಸಬೇಕಿದ್ದ ಎರಡು ರಾಷ್ಟ್ರೀಯ ಪಕ್ಷಗಳ ಮೇಲೆ ಮತದಾರರು ನಂಬಿಕೆ ಕಳೆದುಕೊಂಡು ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಬೇಕೆಂದು ಬಯಸಿದ್ದಾರೆ ಎಂದರು.

ಕುಮಾರಸ್ವಾಮಿ ಅವರು, ತಮ್ಮ ಪ್ರಣಾಳಿ ಕೆಯಲ್ಲಿ ಏನು ಹೇಳಿದ್ದಾರೆ, ಅದನ್ನು ಆಡಳಿತ ಅವಧಿಯಲ್ಲಿ ನೆರವೇರಿಸಿದ್ದಾರೆ. ರಾಜ್ಯದ ರೈತ ಸಂಪೂರ್ಣ ಸಾಲ ಮನ್ನ ಮಾಡಿದ್ದಾರೆ. ಪೊನ್ನಂಪೇಟೆ ಹಾಗೂ ಕುಶಾಲನಗರ ತಾಲೂಕು ಘೋಷಣೆ, ಕೊಡವರ ಅಭಿವೃದ್ಧಿಗೆ 10 ಕೋಟಿ ರೂ. ಹಾಗೂ ಹಾಕಿ ಪಂದ್ಯಾವಳಿಗೆ 5 ಕೋಟಿ ರೂ. ನೀಡಿದ್ದರು. ವೈಜ್ಞಾನಿಕವಾಗಿ ರೈತರ ಸಾಲ ಮನ್ನ ಮಾಡಿದ ಕೀರ್ತಿ ಕುಮಾರಸ್ವಾಮಿ ಅವರಿಗೆ ಸಲ್ಲುತ್ತದೆ ಎಂದರು.

ಪ್ರಾಕೃತಿ ವಿಕೋಪ ಸಂದರ್ಭ ಸಂತ್ರಸ್ತರಿಗೆ ಕಣ್ಣೀರನ್ನು ಒರೆಸುವ ಕೆಲಸ ಮಾಡಿದ್ದಾರೆ. ರಾಜ್ಯದಲ್ಲಿ ಜಲಧಾರೆ ಯಾತ್ರೆಗೆ ಉತ್ತಮ ಸ್ಪಂದನೆ ದೊರೆತಿದ್ದು, ಕುಮಾರಸ್ವಾಮಿ ಅವರಿಗೆ ಸಂಪೂರ್ಣ ಬಹುಮತ ನೀಡುವ ತೀರ್ಮಾನಕ್ಕೆ ಮತದಾರರು ಬಂದಿದ್ದಾರೆ ಎಂದರು. ಕೊಡಗಿನ ಕಾಫಿ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಏನು ಮಾಡುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ. ಈ ಬಾರಿ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಕೊಡಗಿನಲ್ಲಿ ಗೆಲ್ಲುವ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗುವುದು. ಯಾರಿಗೂ ಕೂಡ ಟಿಕೆಟ್ ಘೋಷಣೆಯಾಗಿಲ್ಲ. ಜೆಡಿಎಸ್ ಪಕ್ಷದ ಮೊದಲ ಸಂಭಾವನೀಯ ಪಟ್ಟಿಯಲ್ಲಿ ಕೊಡಗಿನ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರಿಲ್ಲ. ಎರಡನೇ ಹಂತದಲ್ಲಿ ಕೊಡಗು ಜಿಲ್ಲೆಯ ಜೆಡಿಎಸ್ ಅಭ್ಯರ್ಥಿಗಳ ಹೆಸರು ಪ್ರಕಟ ಮಾಡಲಾಗುತ್ತದೆ ಎಂದರು.

ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ನ.14ರಿಂದ ಪಂಚರತ್ನ ಯಾತ್ರೆ ಪ್ರಾರಂಭಗೊಳ್ಳಲಿದ್ದು, ಮೊದಲ ಹಂತದಲ್ಲಿ ಆರು ಜಿಲ್ಲೆಗಳಲ್ಲಿ ಯಾತ್ರೆ ನಡೆಯಲಿದೆ. ಎರಡನೇ ಹಂತದಲ್ಲಿ ಕೊಡಗು ಜಿಲ್ಲೆಯ ಯಾತ್ರೆ ನಡೆಯಲಿದ್ದು, ಜಿಲ್ಲೆಯ ಪ್ರತಿ ಮನೆ ಮನೆಗೆ ತೆರಳಿ ಉಚಿತ ಆರೋಗ್ಯ ಶಿಕ್ಷಣ ವ್ಯವಸ್ಥೆ ಕೊಡಗಿನ ಮಾದರಿಯಲ್ಲಿ ಮನೆ ನಿರ್ಮಿಸಿ ಕೊಡುವುದು, ಉದ್ಯೋಗ, ರೈತರಿಗೆ ಉಚಿತ ವಿದ್ಯುತ್ ಸೇರಿದಂತೆ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸಲಾಗುವುದೆಂದರು.

ರಾಜ್ಯ ವಿದ್ಯಾರ್ಥಿ ದಳದ ಅಧ್ಯಕ್ಷ ಉಮೇಶ್ ಗೌಡ, ಮಾತನಾಡಿ, ಕುಮಾರಸ್ವಾಮಿ ಆಡಳಿತ ಅವಧಿಯಲ್ಲಿ ಸಂತ್ರಸ್ತರಿಗೆ 900 ಮನೆಗಳನ್ನು ನಿರ್ಮಿಸಿಕೊಡಲಾಗಿದೆ. 830 ಮನೆಗಳನ್ನು ಸಂತ್ರಸ್ತರಿಗೆ ನೀಡಲಾಗಿದೆ. ಇನ್ನೂ 70 ಮನೆಗಳನ್ನು ಫಲಾನುಭವಿಗಳಿಗೆ ನೀಡದೆ ಸತಾಯಿಸಲಾಗುತ್ತಿದೆ. ತಕ್ಷಣವೇ ಸಂತ್ರಸ್ತರಿಗೆ ಮನೆ ಹಸ್ತಾಂತರ ಮಾಡದಿದ್ದಲ್ಲಿ ಜೆಡಿಎಸ್‌ನಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಪುಷ್ಪಾವತಿ ರಮೇಶ್, ಜಿಲ್ಲಾ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಜಾಸೀರ್ ಉಪಸ್ಥಿತರಿದ್ದರು.

ಗಂಧದ ಮರದ ತುಂಡುಗಳ ಕಳುವಿಗೆ ಯತ್ನ: ಓರ್ವ ಬಂಧನ

ಮಡಿಕೇರಿ,ನ.13– ಶ್ರೀಗಂಧದ ಮರದ ತುಂಡುಗಳನ್ನು ಕಳವು ಮಾಡಲು ಯತ್ನಿಸಿದ ಆರೋಪಿಯನ್ನು ಮಾಲು ಸಮೇತ ಬಂಧಿಸುವಲ್ಲಿ ಅರಣ್ಯಾಧಿಕಾರಿಗಳು ಯಶಸ್ವಿಯಾಗಿದ್ದಾರೆ. ಕುಶಾಲನಗರದ ರಂಗಸಮುದ್ರ ಗ್ರಾಮದ ನಿವಾಸಿ ಪ್ರಸಾದ್ ಪಿ.ಆರ್. ಎಂಬಾತನೇ ಬಂಧಿತ ಆರೋಪಿ.



ಮಡಿಕೇರಿ ಬಳಿಯ ಮಕ್ಕಂದೂರು ಗ್ರಾಮದ ಖಾಸಗಿ ಜಾಗದಲ್ಲಿ ಶನಿವಾರ ರಾತ್ರಿ ಅಕ್ರಮವಾಗಿ ಶ್ರೀಗಂಧದ ಮರವನ್ನು ಬುಡದಿಂದ ಕಡಿದು ಕಳವು ಮಾಡಲು ಯತ್ನಿಸಲಾಗಿತ್ತು. ಈ ಬಗ್ಗೆ ಖಚಿತ ಮಾಹಿತಿ ಆಧರಿಸಿ ಕುಶಾಲನಗರ ಬಳಿಯ ರಂಗಸಮುದ್ರ ನಿವಾಸಿ ಪ್ರಸಾದ್ ಪಿ.ಆರ್. ಎಂಬಾತನನ್ನು ಬಂಧಿಸಲಾಗಿದೆ. ಆರೋಪಿ ಬಳಿ ಇದ್ದ ಶ್ರೀಗಂಧದ 3 ಕೊರಡುಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ ಹಾಗೂ ಮಡಿಕೇರಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೊಹಿಸಿನ್ ಬಾಷ ಅವರುಗಳ ಮಾರ್ಗದರ್ಶನದಲ್ಲಿ ಮಡಿಕೇರಿ ವಲಯ ಅರಣ್ಯಾಧಿಕಾರಿ ಮಧುಸೂದನ್ ಎಂ.ಕೆ. ನೇತೃತ್ವದಲ್ಲಿ ಉಪವಲಯ ಅರಣ್ಯಾಧಿಕಾರಿ ಬಾಬು ರಾಥೋಡ್, ಸಚಿನ್ ಹಾಗೂ ಅರಣ್ಯ ರಕ್ಷಕರಾದ ಸಂದೇಶ್ ಯು.ಆರ್, ಯತೀಶ್ ಸಿ.ಸಿ, ವಾಸುದೇವ ಯು.ಸಿ. ಹಾಗೂ ಸಿಬ್ಬಂದಿಗಳಾದ ಅಜಿತ್, ಮೋಹನ್, ಮಹೇಶ್, ಅನಿಲ್, ನವೀನ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಡಿ.6, ಬೆಂಗಳೂರಲ್ಲಿ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ

ಕೊಡಗು ಜಿಲ್ಲೆಯಿಂದ 10 ಸಾವಿರಕ್ಕೂ ಅಧಿಕ ಸದಸ್ಯರು ಭಾಗಿ



ವಿರಾಜಪೇಟೆ, ನ.13– ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಡಿ.6 ರಂದು ಬೆಂಗಳೂರು ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯುವ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶಕ್ಕೆ ಕೊಡಗು ಜಿಲ್ಲೆಯಿಂದ ದಲಿತ ಸಮಿತಿಯ ಎಲ್ಲಾ ಸಂಘಟನೆಗಳಿಂದ 10 ಸಾವಿರಕ್ಕೂ ಹೆಚ್ಚು ಸದಸ್ಯರು ಭಾಗವಹಿಸಲಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಜಿಲ್ಲಾ ಸಮಿತಿ ಸಂಚಾಲಕ ಹೆಚ್.ಆರ್.ಶಿವಣ್ಣ ತಿಳಿಸಿದರು.

ವಿರಾಜಪೇಟೆ ನಗರದ ತಾಲೂಕು ಮೈದಾನದಲ್ಲಿ ಕರಪತ್ರ ಬಿಡುಗಡೆಗೊಳಿಸಿದ ಬಳಿಕ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ ದಿನದ ಅಂಗವಾಗಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಯ ಆಶಯಗಳನ್ನು ನಾಶ ಮಾಡುತ್ತಿರುವ ದುರಾಡಳಿತದ ವಿರುದ್ಧ ದಲಿತರ ಸಾಂಸ್ಕೃತಿಕ ಪ್ರತಿರೋಧ ನಡೆಯಲಿದೆ ಹಾಗೂ ಸಂವಿಧಾನದ ಆಶಯಗಳು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳು ಕುಸಿಯುತ್ತಿದೆ. ದಲಿತರಿಗೆ ಸಿಗುವಂತ ಹಕ್ಕು ಪಡೆದುಕೊಳ್ಳಲು ಹೋರಾಟದ ಅವಶ್ಯವಿರುವುದರಿಂದ ಡಿ.6 ರಂದು ದಲಿತ ಸರ್ಕಾರಿ ನೌಕರರು ಸಮಾವೇಶದಲ್ಲಿ ಭಾಗವಹಿಸುವಂತೆ ಶಿವಣ್ಣ ಹೇಳಿದರು.

ಈ ಸಂದರ್ಭ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಜಿಲ್ಲಾ ಉಪಾಧ್ಯಕ್ಷ ಹೆಚ್.ಜಿ.ಗೋಪಾಲ ಮಾತನಾಡಿದರು. ಮಹಿಳಾ ಘಟಕದ ಜಿಲ್ಲಾ ಸಂಚಾಲಕಿ ಸುಗಂದಿ, ಜಿಲ್ಲಾ ಕಾರ್ಯದರ್ಶಿ ಹೆಚ್.ಕೆ.ವಿದ್ಯಾಧರ್, ತಾಲೂಕು ಸಮಿತಿ ಸಂಚಾಲಕ ಹೆಚ್.ಪಿ.ಲವಾ, ಹೋಬಳಿ ಅಧ್ಯಕ್ಷ ಸುರೇಶ್, ಮೋಹನ್, ರಮೇಶ್ ಹಾಗೂ ಸಮಿತಿ ಸದಸ್ಯರುಗಳು ಹಾಜರಿದ್ದರು.

ಗೋಣಿಕೊಪ್ಪಲಿನಲ್ಲಿ ಭಿಕ್ಷಾಟನೆ ನಿರ್ಮೂಲನೆಗೆ ಅಭಿಯಾನ

ಸುಮಾರು 25ಕ್ಕೂ ಅಧಿಕ ನಿರಾಶ್ರಿತರ ಸ್ಥಳಾಂತರ



ಗೋಣಿಕೊಪ್ಪಲು,ನ.13– ಗೋಣಿಕೊಪ್ಪಲು ನಗರ ಒಳಗೊಂಡಂತೆ ಕೊಡಗು ಜಿಲ್ಲೆಯ ಪೊನ್ನಂಪೇಟೆ, ಹುದಿಕೇರಿ ಹಾಗೂ ಮಡಿಕೇರಿ ನಗರದಿಂದ ಈವರೆಗೆ ಸುಮಾರು 25ಕ್ಕೂ ಅಧಿಕ ಭಿಕ್ಷುಕರು ಹಾಗೂ ನಿರಾಶ್ರಿತರನ್ನು ಸುಂಟಿಕೊಪ್ಪ ವಿಕಾಸ ಸೇವಾ ಟ್ರಸ್ಟ್, ಮೈಸೂರಿನ ಶಾರದಾ ಟ್ರಸ್ಟ್, ಮೈಸೂರು ಜ್ಯೋತಿ ನಗರ ಸರ್ಕಾರಿ ನಿರಾಶ್ರಿತರ ಕೇಂದ್ರ, ಶರಣ್ಯ ಟ್ರಸ್ಟ್ ಸಾನಿಧ್ಯ ವೃದ್ಧಾಶ್ರಮ ಮೈಸೂರು ಹಾಗೂ ಬೆಂಗಳೂರಿನ ದೊಡ್ಡ ಗುಬ್ಬಿ ಆಟೋರಾಜ ನಿರಾಶ್ರಿತರ ಕೇಂದ್ರಗಳಿಗೆ ದಾಖಲು ಮಾಡಲಾಗಿದೆ ಎಂದು ಸಮಾಜ ಸೇವಕರು, ಕರ್ನಾಟಕ ಪ್ರಾಂತ್ಯ ರೈತ ಮತ್ತು ಕಾರ್ಮಿಕ ರಕ್ಷಣಾ ವೇದಿಕೆಯ ಕೊಡಗು ಘಟಕದ ಅಧ್ಯಕ್ಷೆ ಪಡಿಕಲ್ ಕುಸುಮಾವತಿ ತಿಳಿಸಿದ್ದಾರೆ.

ವಿವಿಧ ಸಂಘ ಸಂಸ್ಥೆಗಳು, ಪೌರ ಕಾರ್ಮಿಕರು, ಸ್ವಯಂ ಸೇವಕರು, ವೈದ್ಯರು, ಹಿತೈಷಿಗಳ ಸಹಕಾರದೊಂದಿಗೆ ಕೊಡಗಿನಲ್ಲಿ ಭಿಕ್ಷಾಟನೆ ನಿರ್ಮೂಲನೆಗೆ ಪಣ ತೊಟ್ಟಿರುವುದಾಗಿಯೂ ಹೇಳಿದ ಅವರು ಭಿಕ್ಷುಕರನ್ನು ನಿರಾಶ್ರಿತರ ಕೇಂದ್ರಕ್ಕೆ ಸಾಗಾಟಗೊಳಿಸಿದರೂ ಮತ್ತಷ್ಟು ಹೊಸ ಭಿಕ್ಷುಕರು ಪ್ರತ್ಯಕ್ಷವಾಗುತ್ತಿರುವುದು ಸಮಸ್ಯೆಯಾಗಿದೆ. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಹಕಾರವೂ ಅಗತ್ಯವಿದೆ. ವರ್ತಕರು ಹಾಗೂ ಸಾರ್ವಜನಿಕರು ಹಣದ ರೂಪದಲ್ಲಿ ಭಿಕ್ಷೆ ನೀಡುವುದು ನಗರ ಪ್ರದೇಶದಲ್ಲಿ ಹೊಸಾ ಭಿಕ್ಷುಕರು ಕಾಣಿಸಿಕೊಳ್ಳಲು ಕಾರಣವಾಗಿದೆ ಎಂದರು.

ಭಿಕ್ಷುಕರಿಗೆ ಹಣ ನೀಡದೆ ಹಸಿದ ಹೊಟ್ಟೆಗೆ ಆಹಾರ ಕೊಡುವ ಅಭಿಯಾನ ಎಲ್ಲೆಡೆ ಆರಂಭವಾಗಬೇಕು. ಹೊರ ಜಿಲ್ಲೆಯಿಂದಲೂ ಕೊಡಗಿಗೆ ಭಿಕ್ಷೆಗೆ ಬಂದು ಸಂಜೆ ವಾಪಾಸ್ಸಾಗುವ 'ಹೈಟೆಕ್' ಭಿಕ್ಷುಕರೂ ಇಲ್ಲಿ ಸಿಗುತ್ತಾರೆ. ಇಂತಹವರ ವಿರುದ್ಧ ಪೊಲೀಸರು ಕ್ರಮ ಜರುಗಿಸುವ ಅಗತ್ಯವಿದೆ ಎಂದರು.

ಇದೀಗ ಭಿಕ್ಷುಕರನ್ನು ಕರೆದೊಯ್ಯುತ್ತಿರುವ ಹಿನ್ನೆಲೆ ದಿನವೂ ಭಿಕ್ಷುಕರ ಇರುವಿಕೆ ಬಗ್ಗೆ ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡುತ್ತಿರುವುದಾಗಿಯೂ, ಗೋಣಿಕೊಪ್ಪಲು ಗ್ರಾಪಂ ನೌಕರ ನೌಶಾದ್, ವರ್ತಕರಾದ ಬಿ.ರಾಜ, ಪ್ರವೀಣ್ ಪೂಜಾರಿ ಒಳಗೊಂಡಂತೆ ಹಲವು ಹಿತೈಷಿಗಳು ಕೈಜೋಡಿಸಿ ಸಹಕಾರ ನೀಡುತ್ತಿರುವುದಾಗಿ ಹೇಳಿದರು.

ವಿವಿಧ ಗ್ರಾಪಂ ಅನುಮತಿ ಪತ್ರ ಹೊದಿಕೊಂಡು ಕಾನೂನು ಬದ್ಧವಾಗಿ ಭಿಕ್ಷುಕರನ್ನು ಸ್ಥಳಾಂತರಗೊಳಿಸಲಾಗುತ್ತಿದೆ. ಹೆಚ್ಚಿನ ವಿವರಗಳಿಗೆ 7349062791 ಮೊಬೈಲ್ ಸಂಖ್ಯೆಗೆ ಕರೆಮಾಡಬಹುದು ಎಂದು ಕುಸುಮಾವತಿ ತಿಳಿಸಿದ್ದಾರೆ.

ಅಪಾಯದ ಸ್ಥಿತಿಯಲ್ಲಿ ಕತ್ತಲೆ ಕಾಡು ರಸ್ತೆ

ಮಡಿಕೇರಿ,ನ.13– ಕಡಿದಾದ ಕತ್ತಲೆಕಾಡು ರಸ್ತೆ ಅಪಾಯವನ್ನು ಆಹ್ವಾನಿಸುತ್ತಿದ್ದು, ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಜನರ ಅಸಮಾಧಾನ ವ್ಯಕ್ತವಾಗಿದೆ. ಮಡಿಕೇರಿ ಕಡೆಯಿಂದ ಕಡಗದಾಳು, ಕತ್ತಲೆಕಾಡು, ಅಬ್ಯಾಲ ಮಾರ್ಗವಾಗಿ ಸಿದ್ದಾಪುರಕ್ಕೆ ತೆರಳುವ ಮುಖ್ಯ ರಸ್ತೆ ಕಳೆದ ಹಲವು ವರ್ಷಗಳಿಂದ ನಿರ್ಲಕ್ಷಿಸಲ್ಪಟ್ಟಿದೆ. ಪ್ರಕೃತಿ ಸೌಂದರ್ಯದಿಂದ ಕೂಡಿರುವ ಈ ರಸ್ತೆಯಲ್ಲಿ ಸಾಗುವಾಗ ಪ್ರವಾಸಿಗರನ್ನು ಕೈಬೀಸಿ ಕರೆಯುವ ಹಲವು ಚಿಕ್ಕಪುಟ್ಟ ಜಲಪಾತಗಳಿದ್ದು, ಕತ್ತಲೆಕಾಡು ರಸ್ತೆ ಚೆಟ್ಟಳ್ಳಿ ಮಾರ್ಗವಾಗಿ ಸಿದ್ದಾಪುರವನ್ನು ಬೆಸೆಯುವ ಮುಖ್ಯ ರಸ್ತೆಯಾಗಿದೆ. ಪ್ರತಿದಿನ ಪ್ರಯಾಣಿಕರು ಜೀವವನ್ನು ಕೈಯಲ್ಲಿ ಹಿಡಿದು ಸಂಚರಿಸಬೇಕಾದ ಪರಿಸ್ಥಿತಿ ಇಲ್ಲಿದ್ದು, ಹೊಂಡ, ಗುಂಡಿಗಳಲ್ಲಿ ಡಾಮರು ಹುಡುಕಬೇಕಾದ ಶೋಚನೀಯ ಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯಲ್ಲಿ ವಾಹನ ಚಾಲನೆ ಸರ್ಕಸ್‌ನಂತಾಗಿದ್ದು, ಬೈಕ್ ಚಾಲಕರು ಅಪಾಯಕ್ಕೆ ಸಿಲುಕುತ್ತಿದ್ದಾರೆ.



ಕತ್ತಲೆಕಾಡಿನಿಂದ ಅಬ್ಯಾಲ ಮಾರ್ಗವಾಗಿ ಸಾಗುವ ರಸ್ತೆ ಬಹಳ ಕಿರಿದಾಗಿದ್ದು, ಎದುರಿನಿಂದ ವಾಹನ ಬರುವ ವಾಹನಗಳಿಗೆ ಸ್ಥಳ ನೀಡಲು ಸಾಧ್ಯವಾಗದ ಪರಿಸ್ಥಿತಿ ಇದೆ. ಚಾಲಕನ ನಿಯಂತ್ರಣ ತಪ್ಪಿದರೆ ವಾಹನ ಪ್ರಪಾತಕ್ಕೆ ಉರುಳುವ ಅಪಾಯಕಾರಿ ಸ್ಥಿತಿಯಿದ್ದು, ಹಗಲಿನಲ್ಲಿ ಗುಂಡಿಗಳನ್ನು ತಪ್ಪಿಸಿ ವಾಹನ ಚಾಲನೆ ಮಾಡುವುದೇ ದೊಡ್ಡ ಸಾಹಸ ಎಂದು ಚಾಲಕರು ಬೇಸರ ವ್ಯಕ್ತಪಡಿಸುತ್ತಾರೆ.

ರಾತ್ರಿ ವೇಳೆ ಸದಾ ಮಂಜಿನ ವಾತಾವರಣವಿರುವುದರಿಂದ ಗುಂಡಿಬಿದ್ದ ರಸ್ತೆಯಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎನ್ನುವಂತಿದೆ. ಹಲವು ವರ್ಷಗಳಿಂದ ಪಾಳುಬಿದ್ದಿರುವ ಈ ರಸ್ತೆಗೆ ಯಾವಾಗ ಮುಕ್ತಿ ಸಿಗುತ್ತದೆ ಎಂದು ಪ್ರಶ್ನಿಸಿರುವ ಸಾರ್ವಜನಿಕರು, ಜನಪ್ರತಿನಿಧಿಗಳ ನಿರ್ಲಕ್ಷ್ಯದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತೇಪೆ ಹಾಕಿ ಕಣ್ಣೊರೆಸುವ ತಂತ್ರ ಅನುಸರಿಸುವ ಬದಲು ಸರ್ವಋತು ರಸ್ತೆ ನಿರ್ಮಾಣದ ವೈಜ್ಞಾನಿಕ ಯೋಜನೆಯನ್ನು ಸಾಕಾರಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬಿಎಸ್‌ಪಿಯಿಂದ ಮಾತ್ರ ದಲಿತ ಸಿಎಂ ಸಾಧ್ಯ

ಜೈಭೀಮ್ ಜನಜಾಗೃತಿ ಜಾಥಾ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾರಸಂದ್ರ ಮುನಿಯಪ್ಪ ಪ್ರತಿಪಾದನೆ



ಚಾಮರಾಜನಗರ, ನ.13– ದಲಿತರ ಮುಖ್ಯಮಂತ್ರಿ ಬಹುಜನ ಸಮಾಜ ಪಕ್ಷದಿಂದ ಮಾತ್ರ ಸಾಧ್ಯ ಎಂದು ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ನಗರದ ಆರ್.ಆರ್. ಹೋಟೆಲ್ ಸಭಾಂಗಣದಲ್ಲಿ ಸಂವಿಧಾನ ಸಂರಕ್ಷಣೆಗಾಗಿ ರಾಜ್ಯವ್ಯಾಪಿ ಹಮ್ಮಿಕೊಂಡಿದ್ದ ಜೈಭೀಮ್ ಜನಜಾಗೃತಿ ಜಾಥಾ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಲಿತ ಮತ ಬ್ಯಾಂಕ್ ಮಾಡಿಕೊಂಡಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ದಲಿತ ಮುಖ್ಯಮಂತ್ರಿ ಮಾಡಲು ಸಿದ್ದರಿಲ್ಲ. ಇದೀಗ ರಾಜ್ಯದಲ್ಲಿ ಎಸ್ಸಿ, ಎಸ್ಟಿಗಳು ಒಂದಾಗುತ್ತಿದ್ದು, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿಗಳ ಹೋರಾಟದ ಫಲವಾಗಿ ಪರಿಶಿಷ್ಟರ ಮೀಸಲಾತಿ ಹೆಚ್ಚಳವಾಗಿದೆ. ಎಸ್ಸಿ, ಎಸ್ಟಿ ಸಮುದಾಯಗಳ ಶ್ರೀಗಳು ಒಂದಾಗಿದ್ದಾರೆ. ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಬಿಟ್ಟು ಯಾವ ಪಕ್ಷದಿಂದಲ್ಲೂ ಸರ್ಕಾರ ರಚನೆ ಮಾಡಲು ಸಾಧ್ಯವಿಲ್ಲ ಎಂದರು.

ಕಾಂಗ್ರೆಸ್ ಮುಳುಗುವ ಹಡಗು ಆಗಿರುವ ಸಂದರ್ಭದಲ್ಲಿ ಈಗ ಮಲ್ಲಿಕಾರ್ಜುನ ಖರ್ಗೆ ಅವರನ್ನು ಎಐಸಿಸಿ ಅಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ನನಗೆ ಮೀಸೆ ಬಂದಿರಲಿಲ್ಲ. ಅಂದಿನಿಂದಲೂ ಸಿಎಂ ಮಾಡುವುದಾಗಿ ಕಾಂಗ್ರೆಸ್ ಹೇಳಿಕೊಂಡು ಬಂದಿದೆ ಹೊರತು ಮಾಡಲಿಲ್ಲ. ದೇಶ, ರಾಜ್ಯದಲ್ಲಿ 50ಕ್ಕೂ ಹೆಚ್ಚು ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸಂವಿಧಾನದ ಆಶಯದಂತೆ ಅಧಿಕಾರ ನಡೆಸಿಲ್ಲ. ದೇಶದಲ್ಲಿ 8 ವರ್ಷಗಳಿಂದ ಪ್ರಧಾನಿ ನರೇಂದ್ರಮೋದಿಯವರು ಉತ್ತಮ ಆಡಳಿತ ನೀಡುವಲ್ಲಿ ವಿಫಲರಾಗಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಹೊರದೇಶದಲ್ಲಿರುವ ಕಪ್ಪು ಹಣವನ್ನು ತಂದು ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ರೂ. ಹಾಕುವುದಾಗಿ ಹೇಳಿತ್ತು. ಪ್ರತಿವರ್ಷ 2 ಕೋಟಿ ಉದ್ಯೋಗ ಕೊಡುವುದಾಗಿ ಹೇಳಿ ಯಾರ ಖಾತೆಗೂ ನಯಾಪೈಸೆ ಹಾಕಿಲ್ಲ, ಒಬ್ಬರಿಗೂ ಉದ್ಯೋಗ ಕೊಡಿಸಿಲ್ಲ ಇರುವ ಉದ್ಯೋಗ ಕಿತ್ತುಕೊಂಡು ಎಲ್ಲ ಕ್ಷೇತ್ರವನ್ನು ಖಾಸಗೀಕರಣ ಮಾಡುವ ಮೂಲಕ ದೇಶ ಮತ್ತು ಜನತೆ ಸಂಕಷ್ಟಕ್ಕೆ ಸಿಲುಕಿಸುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಕಾಂಗ್ರೆಸ್, ಬಿಜೆಪಿಯಿಂದ ಸಂವಿಧಾನಕ್ಕೆ ಅಪತ್ತು: ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಮಾತನಾಡಿ, ಕಾಂಗ್ರೆಸ್, ಬಿಜೆಪಿಯಿಂದ ಸಂವಿಧಾನಕ್ಕೆ ಅಪತ್ತು ಬಂದಿದೆ. 55 ವರ್ಷಗಳ ಕಾಲ ದೇಶದಲ್ಲಿ ಆಡಳಿತ ನಡೆಸಿ ಕಾಂಗ್ರೆಸ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನವನ್ನು ಸಂಪೂರ್ಣವಾಗಿ ಜಾರಿಗೊಳಿಸುವ ಬದಲು 110 ತಿದ್ದಪಡಿಗಳನ್ನು ತಂದು ದುರ್ಬಲಗೊಳಿಸುವ ಕೆಲಸ ಮಾಡಿದೆ. ಇದೇ ಆಧಾರವಾಗಿಟ್ಟುಕೊಂಡು ಬಿಜೆಪಿ ಸಂವಿಧಾನವನ್ನು ನಾಶ ಮಾಡಲು, ಸಮಾಧಿ ಮಾಡಲು ಹೊರಟಿದೆ ಎಂದು ದೂರಿದರು.

ಭಾರತವನ್ನು ಹಿಂದೂ ರಾಷ್ಟ್ರ ಮಾಡಲು ಬಿಜೆಪಿ ಹೊರಟಿದೆ. ದೇಶದಲ್ಲಿ ಹಿಂದೂ ಧರ್ಮಕ್ಕೆ ಅಪಾಯವಿಲ್ಲ. ಅಲ್ಪಸಂಖ್ಯಾತರಿಗೂ ಅಪಾಯವಿಲ್ಲ. ಯಾರಿಗೂ ಅಪಾಯವಿಲ್ಲ. ಅಪಾಯ ಇರುವುದು ನಿಮ್ಮ ಮಕ್ಕಳ ಶಿಕ್ಷಣಕ್ಕೆ ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕಿದೆ. ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿ ಜಾರಿ ಮಾಡುವ ಮೂಲಕ ಸಂವಿಧಾನವನ್ನು ನಾಶ ಮಾಡಲು ಹೊರಟಿದೆ ಎಂದು ಆರೋಪಿಸಿದರು.

ರಾಜ್ಯ ಬೌದ್ಧ ಸಮಾಜದ ಅಧ್ಯಕ್ಷ ಪ್ರೊ. ಹ.ರಾ.ಮಹೇಶ್ ಪ್ರಾಸ್ತಾವಿಕವಾಗಿ ಭಾಷಣ ಮಾಡಿದರು. ಸಮಾರೋಪ ಸಮಾರಂಭದಲ್ಲಿ ಪಕ್ಷದ ರಾಜ್ಯ ಸಂಯೋಜಕ ಎನ್. ಗೋಪಿನಾಥ್, ರಾಜ್ಯ ಉಪಾಧ್ಯಕ್ಷ ಕೆ.ಪಿ. ವಾಸು, ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಆರ್.ಮುನಿಯಪ್ಪ, ಅರಕಲವಾಡಿ ನಾಗೇಂದ್ರ, ಎಚ್.ಮೋಹನ್ ಕುಮಾರ್, ಕಾರ್ಯದರ್ಶಿ ಚಿನ್ನಪ್ಪ, ಕಮಲ್ ನಾಗರಾಜು, ಹಲ ಮೈಸೂರು ಜಿಲ್ಲಾಧ್ಯಕ್ಷ ಡಿ.ಆರ್. ಪುಟ್ಟಸ್ವಾಮಿ, ಉಪಾಧ್ಯಕ್ಷ ಶ್ರೀಕಂಠ, ಕೊಡಗು ಜಿಲ್ಲಾಧ್ಯಕ್ಷ ಸಿದ್ದಪ್ಪ, ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬ.ಮ. ಕೃಷ್ಣಮೂರ್ತಿ, ತಾಲೂಕು ಸಂಯೋಜಕ ಎಸ್.ಪಿ.ಮಹೇಶ್, ಗ್ರಾ.ಪ ಸದಸ್ಯರಾದ ಶಿವಣ್ಣ, ಬಾಲರಾಜ್, ಮುಖಂಡ ಕುಮಾರಸ್ವಾಮಿ, ಇತರರು ಹಾಜರಿದ್ದರು.

ಕನ್ನಡ ರಾಜ್ಯೋತ್ಸವ ನಿತ್ಯೋತ್ಸವ ಆಗಬೇಕು

ಚಾಮರಾಜನಗರ, ನ.13– ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಿಗೆ ಸೀಮಿತವಾಗದೆ ನಿತ್ಯೋತ್ಸವ ಆಗಬೇಕು ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು

ನಗರದ ರೋಟರಿ ಭವನದಲ್ಲಿ ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನಗಂದರ್ವ ಸಾಂಸ್ಕೃತಿಕ ಕಲಾವೇದಿಕೆ, ರೋಟರಿ ಸಂಸ್ಥೆ ಇವರ ವತಿಯಿಂದ ನಡೆದ 67ನೇ ಕನ್ನಡ ರಾಜ್ಯೋತ್ಸವ ಹಾಗೂ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.



ರಾಜರ್ಷಿ ಶ್ರೀನಾಲ್ವಡಿ ಕೃಷ್ಣ ರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಸಿ.ಎಂ. ನರಸಿಂಹ ಮೂರ್ತಿ ಅವರು ರಾಜ್ಯ, ದೇಶ, ವಿಶ್ವ ಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಉತ್ತಮ ಕಲಾವಿದರಾಗಿದ್ದಾರೆ. ಅವರಿಗೆ ಅನೇಕ ಪ್ರಶಸ್ತಿಗಳು ಲಭಿಸಿವೆ. ಅವರಿಗೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಶಸ್ತಿಗಳು ದೊರೆತು ಚಾಮರಾಜನಗರ ಕೀರ್ತಿಪತಾಕೆಯನ್ನು ವಿಶ್ವಮಟ್ಟದಲ್ಲಿ ಬೆಳಗಿಸಲಿ. ಅದೇ ರೀತಿಯಲ್ಲಿ ಜಿಲ್ಲೆಯಲ್ಲಿ ಜಾನಪದ ತತ್ವಗಳನ್ನು ಜಿಲ್ಲೆ ಜನತೆ ತಿಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ವಿಶ್ವ ಕನ್ನಡದ ಹಬ್ಬಕ್ಕೆ ದುಬೈಗೆ ತೆರಳುತ್ತಿರುವ ಹಿರಿಯ ಕಲಾವಿದ ರಾಮದಾಸ್ ಅವರು ಜಿಲ್ಲೆಯ ಕಲೆಯನ್ನು ವಿಶ್ವಮಟ್ಟದಲ್ಲಿ ಪಸರಿಸುವ ಮೂಲಕ ಜಿಲ್ಲೆ ಕೀರ್ತಿ ತರುವಂತಾಗಲಿ ಎಂದು ಶುಭಕೋರಿದರು.


ನಮ್ಮ ಜಿಲ್ಲೆ ಬಹುಮುಖ ಪ್ರತಿಭೆ ಹೊಂದಿದೆ ಅಧ್ಯಕ್ಷತೆ ವಹಿಸಿದ್ದ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮಾತನಾಡಿ, ನಮ್ಮ ಜಿಲ್ಲೆಯು ಈ ಕಡೆ ಜಾನಪದಕ್ಕೂ ಸೈ, ನಾಟಕಕ್ಕೂ ಸೈ ಆಗಿದ್ದು ಬಹುಮುಖ ಪ್ರತಿಭೆ ಹೊಂದಿರುವ ಜಿಲ್ಲೆ ಇದಾಗಿದೆ. ರಾಜರ್ಷಿ ಶ್ರೀನಾಲ್ವಡಿ ಕೃಷ್ಣ ರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಸಿ.ಎಂ.ನರಸಿಂಹಮೂರ್ತಿ ಅವರು ಸಾಂಸ್ಕೃತಿ ರೂವಾರಿಯಾಗಿದ್ದು, ತಮ್ಮ ಜತೆಯಲ್ಲಿ ಜಿಲ್ಲೆಯಲ್ಲಿ ಅನೇಕ ಕಲಾವಿದರುಗಳನ್ನು ಬೆಳೆಸಿದ್ದು ಅವರಿಗೆ ವೇದಿಕೆಗಳನ್ನು ಕಲ್ಪಿಸಿಕೊಡುವ ಮೂಲಕ ಅವರಿಗೆ ಪ್ರಶಸ್ತಿ ಬರುವಂತೆ ಮಾಡಿದ್ದಾರೆ ಅವರಿಗೆ ಮಾಸಾಶನ ಕೊಡಿಸುವ ನಿಟ್ಟಿನಲ್ಲಿ ಬಹಳ ಪೂರಕ ಕೆಲಸ ಮಾಡಿದ್ದಾರೆ. ಅದೇ ರೀತಿಯಲ್ಲಿ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುವುದರ ಜತೆಯಲ್ಲಿ ಉತ್ತಮ ಗಾಯಕರಾಗಿದ್ದು, ವಿಶ್ವ ಕನ್ನಡದ ಹಬ್ಬಕ್ಕೆ ದುಬೈಗೆ ತೆರಳುತ್ತಿರುವ ಹಿರಿಯ ಕಲಾವಿದ ರಾಮದಾಸ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಕಲಾವಿದರಿಗೆ ರಾಜ್ಯದಲ್ಲಿ ವಿಶೇಷ ಗೌರವ ಸಿಗುತ್ತಿದೆ : ಸನ್ಮಾನ ಸ್ವೀಕರಿಸಿದ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣ ರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಸಿ.ಎಂ.ನರಸಿಂಹಮೂರ್ತಿ ಮಾತನಾಡಿ, ನಮ್ಮೂರು, ನಮ್ಮ ಜಿಲ್ಲೆ ಹೆಮ್ಮೆ. ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂದರ್ವ ಸಾಂಸ್ಕೃತಿಕ ಕಲಾವೇದಿಕೆ ತಮ್ಮನ್ನು ಸನ್ಮಾಸಿರುವುದು ತಮ್ಮ ಗೌರವ ಹೆಚ್ಚು ಮಾಡಿದೆ. ವೇದಿಕೆಯ ಪದಾಧಿಕಾರಿಗಳಿಗೆ ಚಿರಋಣಿಯಾಗಿರುತ್ತದೆ. ಪರಿಶ್ರಮ, ಸಾಧನೆಗೆ ಸತ್ಕಾರ ಸಿಕ್ಕೆ ಸಿಗುತ್ತದೆ. ಪರಿಶ್ರಮ ಇದ್ದರೆ ಪ್ರತಿಫಲ ಸಿಗುತ್ತದೆ. ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಯಶಸ್ಸು ಸಿಗುತ್ತದೆ. ಕಲಾವಿದರಿಗೆ ರಾಜ್ಯದಲ್ಲಿ ವಿಶೇಷ ಗೌರವ ಸಿಗುತ್ತದೆ. ಡಾ. ರಾಜ್‌ಕುಮಾರ್ ಹಾಗೂ ಜಾನಪದ ಕಲಾವಿದ ಪುಟ್ಟಮಲ್ಲೇಗೌಡ ಅವರನ್ನು ಸ್ಮರಿಸಿಕೊಳ್ಳುತ್ತೇನೆ ಎಂದರು. ಜಿ.ಪಂ.ಲೆಕ್ಕಾಧಿಕಾರಿ ಎಚ್.ಎಸ್.ಗಂಗಾಧರ್ ಮಾತನಾಡಿದರು.

ಸನ್ಮಾನ: ರಾಜರ್ಷಿ ಶ್ರೀನಾಲ್ವಡಿ ಕೃಷ್ಣ ರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಸಿ.ಎಂ. ನರಸಿಂಹ ಮೂರ್ತಿ ಹಾಗೂ ವಿಶ್ವ ಕನ್ನಡದ ಹಬ್ಬಕ್ಕೆ ದುಬೈಗೆ ತೆರಳುತ್ತಿರುವ ಹಿರಿಯ ಕಲಾವಿದ ರಾಮದಾಸ್ ಅವರನ್ನು ಸನ್ಮಾನಿಲಾಯಿತು. ಕಾರ್ಯಕ್ರಮದಲ್ಲಿ ಮೈಸೂರಿನ ರಾಮಕೃಷ್ಣ, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾನಗಂದರ್ವ ಸಾಂಸ್ಕೃತಿಕ ಕಲಾ ವೇದಿಕೆ ಗೌರವ ಅಧ್ಯಕ್ಷ ಸುರೇಶ್, ಅಧ್ಯಕ್ಷ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಮುತ್ತುರಾಜ್, ಕಾರ್ಯಾಧ್ಯಕ್ಷ ಮೂರ್ತಿ, ಸಂಘಟನಾ ಕಾರ್ಯದರ್ಶಿ ಜಯರಾಜ್, ಕಲೆ ನಟರಾಜು, ರಾಜಣ್ಣ ಹಾಜರಿದ್ದರು.

ಶ್ರೀ ಎಣ್ಣೆಹೊಳೆ ಮಹದೇಶ್ವರಸ್ವಾಮಿ ಜಾತ್ರೆ

ಚಾಮರಾಜನಗರ, ನ.13– ಚಾಮರಾಜನಗರ ತಾಲೂಕಿನ ಶ್ರೀ ಎಣ್ಣೆಹೊಳೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನ.14 ಮತ್ತು 15ರಂದು ಜಾತ್ರಾ ಮಹೋತ್ಸವ ನಡೆಯಲಿದೆ. 14ರಂದು ರಾತ್ರಿ 12 ಗಂಟೆಗೆ ಹಾಲರವೆ ಉತ್ಸವದಲ್ಲಿ ವಿವಿಧ ಗ್ರಾಮಗಳ ವತಿಯಿಂದ ತಮಟೆ, ಓಲಗ, ವೀರಮಕ್ಕಳ ಕುಣಿತ, ಬೇಡರ ವೇಸ ಕುಣಿತ, ಹುಲಿ ವೇಷ, ಬಿದುಬು, ಗೊಂಬೆ ಪಲ್ಲಕ್ಕಿ ಉತ್ಸವ, ನಂದಿ ವಾಹನ, ದೀವಟಿಗೆ ಸೇವೆ ಇತ್ಯಾದಿ ನಡೆಯಲಿದೆ. 15ರಂದು ಬೆಳಗ್ಗೆ 6 ಗಂಟೆಗೆ ನಂದಿ ವಾಹನ ಉತ್ಸವದಲ್ಲಿ ಕಾಮಧೇನು, ಬಸವ ವಾಹನ, ಕುದುರೆ, ಹುಲಿ, ಆನೆ ವಾಹನ ಉತ್ಸವಗಳು ನಡೆಯಲಿವೆ. ಜಾತ್ರೆಗೆ ಸುತ್ತಮುತ್ತಲಿನ ವಿವಿಧ ಗ್ರಾಮಸ್ಥರು ಪಾಲ್ಗೊಳ್ಳಲಿದ್ದಾರೆ.



ಎಸ್ಸಿ, ಎಸ್ಟಿ ತುಂಡು ಗುತ್ತಿಗೆಯಲ್ಲಿ ಹಸ್ತಕ್ಷೇಪ

ಶಾಸಕ ಸಿ.ಪುಟ್ಟರಂಗಶೆಟ್ಟಿ ವಿರುದ್ಧ ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘ ಆರೋಪ

ಚಾಮರಾಜನಗರ, ನ.13– ಶಾಸಕ ಸಿ. ಪುಟ್ಟರಂಗಶೆಟ್ಟಿರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳಿಗೆ ಮೀಸಲಾಗಿರುವ ತುಂಡು ಗುತ್ತಿಗೆ ಕಾಮಗಾರಿಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದು, ಸ್ಥಳೀಯ ಜನಪ್ರತಿನಿಧಿಗಳು ಯಾವುದೇ ಕಾಮಗಾರಿಗಳಲ್ಲಿ ಭಾಗವಹಿಸಬಾರದೆಂಬ ನಿಯಮವನ್ನು ಗಾಳಿಗೆ ತೂರಿ, ಸಮುದಾಯದ ಅರ್ಹ ಗುತ್ತಿಗೆದಾರರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ತಾಲೂಕು ಎಸ್ಸಿಎಸ್ಟಿ ಗುತ್ತಿಗೆದಾರರ ಸಂಘದ ಗೌರವಾಧ್ಯಕ್ಷ ಸಿ.ಕೆ. ಮಂಜುನಾಥ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಗಗಳ ಗುತ್ತಿಗೆ ಕಾಮಗಾರಿಯನ್ನು ನೀಡುವಲ್ಲಿ ಜಿಲ್ಲೆಯ ಶಾಸಕರು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಹಸ್ತಕ್ಷೇಪ ಮಾಡುತ್ತಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಇದು ನಡೆಯುತ್ತಿದ್ದು, ಇದು ನಿಲ್ಲಬೇಕು. ಇದರಿಂದ ಅರ್ಹ ಜೇಷ್ಠತೆ ಹೊಂದಿರುವ ಎಸ್ಸಿ, ಎಸ್ಟಿ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ ಎಂದರು.

ಹಿಂದಿನಿಂದಲ್ಲೂ ನಮ್ಮ ಹೋರಾಟ ನಡೆಯುತ್ತಿದೆ. ಸಂಘದ ತೀರ್ಮಾನದಂತೆ ಜಿಲ್ಲೆಯ ಶಾಸಕರ ವಿರುದ್ಧ ಸಂಘದ ಕಾರ್ಯಕಾರಿಣಿ ಸಭೆಯಲ್ಲಿಯೂ ಒಪ್ಪಿಗೆ ಪಡೆದುಕೊಂಡೆ ಹೇಳಿಕೆ ನೀಡಿದ್ದೇವೆ ಹೊರತು ಯಾವುದೇ ಕಾರಣಕ್ಕೂ ಸಂಘವನ್ನು ವೈಯಕ್ತಿಕ ಹಿತಾಸಕ್ತಿಗಾಗಿ ದುರುಪಯೋಗ ಪಡಿಸಿಕೊಂಡಿಲ್ಲ. ಇದನ್ನು ಸಾಬೀತು ಪಡಿಸಿ ದರೆ, ತಮ್ಮ ಗುತ್ತಿಗೆ ಪರವಾನಗಿಯನ್ನು ರದ್ದುಪಡಿಕೊಳ್ಳುತ್ತೇನೆ ಎಂದು ಸವಾಲು ಹಾಕಿದರು.

ಶಾಸಕರ ಕೆಲವು ಹಿಂಬಾಲಕ ಗುತ್ತಿಗೆದಾರರು ಸಂಘದ ಹೇಳಿಕೆಯನ್ನು ಸಹಿಸದೇ ಶಾಸಕ ಪುಟ್ಟರಂಗಶೆಟ್ಟಿ ಅವರನ್ನು ಓಲೈಸಿಕೊಳ್ಳಲು ನನ್ನ ವಿರುದ್ಧ ವೈಯಕ್ತಿಕವಾಗಿ ಟೀಕೆ ಮಾಡಿದ್ದಾರೆ. ನಾನು ಹೋರಾಟದ ಹಿನ್ನೆಲೆಯಿಂದ ಬಂದವನು.ಸಂಘದ ಗೌರವ ಅಧ್ಯಕ್ಷನಾಗಿ ಎಲ್ಲ ಗುತ್ತಿಗೆದಾರರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ನಾನು ಶಾಸಕರಿಂದ ತುಂಡು ಗುತ್ತಿಗೆ ಪಡೆದು ಕೊಂಡಿರುವ ದಾಖಲೆ ಇದ್ದರೆ ಈ ಮುಖಂಡರು ಬಿಡುಗಡೆ ಮಾಡಲಿ. ಸಂಘದ ಹಿತಾಸಕ್ತಿಯನ್ನು ಬಯಸಿ ಹೋರಾಟ ಮಾಡುತ್ತಿರುವ ನನ್ನ ವೈಯಕ್ತಿಕ ಟೀಕೆ ಮಾಡಿರುವ ನಲ್ಲೂರು ಮಹದೇವ ಸ್ವಾಮಿ ಮತ್ತು ಸಿದ್ದಯ್ಯನಪುರ ಗೋವಿಂದ ರಾಜು ಅವರು ಒಮ್ಮೆ ಹಿಂದೆ ತಿರುಗಿ ನೋಡಲಿ. ಶಾಸಕ ಪುಟ್ಟರಂಗಶೆಟ್ಟಿ ಒಬ್ಬರನ್ನೇ ಟಾರ್ಗೆಟ್ ಮಾಡಿಲ್ಲ. ಜಿಲ್ಲೆಯಲ್ಲಿರುವ ಗುತ್ತಿಗೆದಾರರ ಸಮಸ್ಯೆ ಹಾಗು ತುಂಡು ಗುತ್ತಿಗೆ ನೀಡುವಲ್ಲಿ ನಡೆಯುತ್ತಿರುವ ಅವ್ಯವಹಾರವನ್ನು ಖಂಡಿದ್ದೇನೆ ಎಂಬುವುದು ಅರ್ಥ ಮಾಡಿಕೊಳ್ಳಬೇಕಾಗಿತ್ತು ಎಂದರು.

ಪುಟ್ಟರಂಗಶೆಟ್ಟರಿಗೆ ಟಿಕೆಟ್ ನೀಡಬೇಡಿ: ದಲಿತ ಮುಖಂಡ ಸಿ.ಕೆ. ರವಿಕುಮಾರ್ ಮಾತನಾಡಿ, ಶಾಸಕ ಸಿ. ಪುಟ್ಟರಂಗಶೆಟ್ಟಿ, ದಲಿತರ ಮತಗಳನ್ನು ಪಡೆದು ಮೂರು ಬಾರಿ ಶಾಸಕರಾಗಿ ಈಗ ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಅಲ್ಲದೇ ಎಲ್ಲ ವರ್ಗದವರ ಪ್ರೀತಿ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಹೀಗಾಗಿ ಕೆಪಿಸಿಸಿ ಅಧ್ಯಕ್ಷರು ಈ ಬಾರಿ ಶಾಸಕ ಪುಟ್ಟರಂಗಶೆಟ್ಟರಿಗೆ ಟಿಕೆಟ್ ನೀಡಿದ್ರೇ ಅದರೆ ಅವರ ಸೋಲು ಖಚಿತ. ಹೀಗಾಗಿ ಅವರ ಬದಲು ಉಪ್ಪಾರ ಸಮುದಾಯದ ಸ್ಥಳೀಯ ಮುಖಂಡರೊಬ್ಬರಿಗೆ ಅವಕಾಶ ನೀಡಿದರೆ, ಖಂಡಿತ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಗುತ್ತಿಗೆದಾರರಾದ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ಕೂಡ್ಲೂರು ಶ್ರೀಧರಮೂರ್ತಿ, ದೀನಾ, ಬಿ.ಎಲ್.ಮಹದೇವಸ್ವಾಮಿ, ಕುಮಾರ್ ಹಾಜರಿದ್ದರು.

ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ನ.13– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯ 2022–23ನೇ ಶೈಕ್ಷಣಿಕ ಸಾಲಿಗೆ ಸಂಬಂಧಪಟ್ಟಂತೆ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು / ಸಂಪನ್ಮೂಲ ವ್ಯಕ್ತಿಗಳಾಗಿ ಬೋಧನೆ ಮಾಡಲು ಇಚ್ಛಿಸುವ ಅಭ್ಯರ್ಥಿಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಗದಿಪಡಿಸಿದ ಸಂಚಿತ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನ.17 ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿದ್ದು, ನ.18ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನವನ್ನು ಸಂಸ್ಥೆಯಲ್ಲಿ ನಡೆಸಲಾಗುವುದು. ಆಸಕ್ತರು www.mysore.nic.in, www.cavamysore.karnataka.gov.in ಅಥವಾ ಮಾಹಿತಿಗೆ ಕಾರ್ಯಾಲಯದ ದೂ: 0821–2438931 ಸಂಪರ್ಕಿಸಬಹುದು.

ಮೈಸೂರು ಮಿತ್ರ

ಉರುಳಿಗೆ ಬಲಿಯಾದ ಹೆಣ್ಣುಲಿ ಮರಿಗಳ ರಕ್ಷಣೆಗಾಗಿ ಕೂಂಬಿಂಗ್

ಹೆಚ್.ಡಿ.ಕೋಟೆ,ನ.13(ಎಂಟಿವೈ)–ಬೇಟೆಗಾರರು ಹಾಕಿದ್ದ ಉರುಳಿಗೆ ಸಿಲುಕಿ ಬಲಿಯಾದ ಹುಲಿಯ 8 ತಿಂಗಳ ಮೂರು ಮರಿಗಳನ್ನು ರಕ್ಷಿಸುವ ಕೂಂಬಿಂಗ್ ಕಾರ್ಯಾಚರಣೆ ಆರಂಭವಾಗಿದ್ದು, ಅಂಬಾರಿ ಆನೆ ಅಭಿಮನ್ಯು ಹಾಗೂ ಭೀಮ ಆನೆಯೊಂದಿಗೆ 75 ಸಿಬ್ಬಂದಿಗಳು ಹುಲಿ ಮರಿಗಳ ಹುಡುಕುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ.



ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯದ 'ನಾಯಂಜಿ ಕಟ್ಟೆ ಫೀಮೇಲ್' ಎಂದೇ ಕರೆಯಲ್ಪಡುತ್ತಿದ್ದ ತಾಯಿ ಹುಲಿ ಉರುಳಿಗೆ ಸಿಲುಕಿ ವಾರದ ಹಿಂದೆಯೇ ಉಸಿರು ಚೆಲ್ಲಿತ್ತು. ಹೆಚ್.ಡಿ.ಕೋಟೆ ತಾಲೂಕಿನ ತಾರಕ ಹಳ್ಳದ ಬಳಿ ಪವಿತ್ರಾ ಹಾಗೂ ಅಸ್ಲಂ ಎಂಬುವರ ಜಮೀನಿಗೆ ಹೊಂದಿಕೊಂಡಂತೆ ಇರುವ ಹಳ್ಳದಲ್ಲಿ 12 ವರ್ಷದ ಹೆಣ್ಣು ಹುಲಿ ಬಲಿಯಾಗಿರುವುದನ್ನು ಗಮನಿಸಿದ ಸ್ಥಳೀಯರು ನೀಡಿದ ಮಾಹಿತಿಯ ಮೇರೆಗೆ ಸ್ಥಳ ಪರಿಶೀಲಿಸಿದಾಗ ಹುಲಿಯ ಕೊಳೆತ ಮೃತದೇಹ ಪತ್ತೆಯಾಗಿತ್ತು.

ತಾಯಿಯನ್ನು ಅಗಲಿದ ಮರಿಗಳು ಹಸಿವಿನಿಂದ ಕಂಗೆಟ್ಟಿರುವ ಅನುಮಾನ ವ್ಯಕ್ತವಾಗಿದ್ದಲ್ಲದೇ, ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಹುಲಿಮರಿಗಳ ರಕ್ಷಣೆಗಾಗಿ ಕೂಂಬಿಂಗ್ ಕಾರ್ಯಾಚರಣೆಯನ್ನು ಭಾನುವಾರ ಬೆಳಗ್ಗೆಯೇ ಆರಂಭಿಸಲಾಗಿದೆ.

ಅರಣ್ಯ ಪ್ರದೇಶದಿಂದ 500 ಮೀ. ದೂರ ಖಾಸಗಿ ಭೂಮಿಯಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಅದರ ಮೂರು ಮರಿಗಳೂ ಸಹ ಆಸುಪಾಸಿನಲ್ಲೇ ಓಡಾಡಿಕೊಂಡಿವೆ. ಮರಿಗಳನ್ನು ಸುರಕ್ಷಿತವಾಗಿ ಸೆರೆ ಹಿಡಿದು ಆರೈಕೆ ಮಾಡುವ ನಿಟ್ಟಿನಲ್ಲಿ ಮೂರು ಪ್ರತ್ಯೇಕ ಸ್ಥಳದಲ್ಲಿ ಬೋನ್ ಇಟ್ಟು, ಅದರಲ್ಲಿ ಮಾಂಸವನ್ನು ಇಡಲಾಗಿದೆ. ಮರಿ ಓಡಾಡುತ್ತಿರುವ ಜಮೀನುಗಳಲ್ಲಿ ದಟ್ಟವಾದ ಪೊದೆ ಬೆಳೆದಿರುವುದರಿಂದ ಮರಿಗಳು ನಿತ್ರಾಣಗೊಂಡು ಪೊದೆಯೊಳಗೆ ಅವಿತಿರುಬಹುದು ಎಂಬ ಶಂಕೆ ವ್ಯಕ್ತವಾಗಿರುವುದರಿಂದ ಕಾರ್ಯಾಚರಣೆಗೆ ಅಂಬಾರಿ ಆನೆ ಅಭಿಮನ್ಯು ಹಾಗೂ ಭೀಮ ಆನೆಯನ್ನು ಕರೆಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಗಿದೆ.

3 ಬೋನ್ ಅಲ್ಲದೇ 30 ಕ್ಯಾಮರಾ ಟ್ರ್ಯಾಪ್ ಬಳಸಲಾಗಿದೆ. ಸ್ಥಳದಲ್ಲೇ ಹಿರಿಯ ಅಧಿಕಾರಿಗಳು ಹಾಗೂ ಪಶುವೈದ್ಯರ ತಂಡ ಬೀಡು ಬಿಟ್ಟಿದೆ. ಸೋಮವಾರ ಬೆಳಗ್ಗೆ 7ರಿಂದಲೇ ಕೂಂಬಿಂಗ್ ಕಾರ್ಯಾಚರಣೆ ಪುನರಾರಂಭಿಸಲಾಗುತ್ತದೆ. ಕಾರ್ಯಾಚರಣೆಯಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಹರ್ಷಕುಮಾರ್ ನರಗುಂದ, ಅಂತರಸಂತೆ ವಲಯದ ಎಸಿಎಫ್ ರಂಗಸ್ವಾಮಿ, ವಾರ್ಡನ್ ಕೃತ್ತಿಕಾ ಆಲನಹಳ್ಳಿ, ಅಂತರಸಂತೆ ಆರ್‌ಎಫ್‌ಓ ಸಿದ್ದರಾಜು, ಡಿ.ಬಿ.ಕುಪ್ಪೆ ಆರ್‌ಎಫ್‌ಓ ಮಧು, ಮೇಟಿಕುಪ್ಪೆ ಆರ್‌ಎಫ್‌ಓ ಹರ್ಷಿತ್ ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ತಾಯಿ ಹುಲಿ ಉರುಳಿಗೆ ಸಿಲುಕಿ ಸಾವನ್ನಪ್ಪುವ ಮುನ್ನ ಸಮೀಪದಲ್ಲೇ ಮೇಯುತ್ತಿದ್ದ ಹಸುವೊಂದನ್ನು ಕೊಂದಿದೆ. ಅದನ್ನು ಪೂರ್ಣ ಪ್ರಮಾಣದಲ್ಲಿ ಸೇವಿಸುವ ಮುನ್ನವೇ ಹೆಣ್ಣು ಹುಲಿ ಧಾರುಣ ಅಂತ್ಯ ಕಂಡಿದೆ. ತಾಯಿ ಹುಲಿ ಸಾವನ್ನಪ್ಪಿ 8ರಿಂದ 10 ದಿನ ಕಳೆದರೂ, 8 ತಿಂಗಳ ಮರಿಗಳು ಜೀವಂತವಿರಲು ಮೃತಪಟ್ಟಿರುವ ಹಸುವಿನ ದೇಹ ಕಾರಣವಾಗಿದೆ. ತಾಯಿ ಹುಲಿ ಮರಣ ಹೊಂದಿದ ಸ್ಥಳದಿಂದ ಕೆಲವೇ ಮೀಟರ್‌ಗಳ ಅಂತರದಲ್ಲಿ ಹಸುವಿನ ಕಳೇಬರದ ಕೆಲವು ಅಂಗಾಂಗಗಳು ಇನ್ನೂ ಇರುವುದರಿಂದ ಆ 3 ಮರಿಗಳು ಸ್ವಲ್ಪ ಪ್ರಮಾಣದ ಮಾಂಸ ಸೇವಿಸಿ ಬದುಕಿವೆ ಎಂದು ಅಂದಾಜಿಸಲಾಗಿದೆ.

ಮೂರನೇ ಪುಟದಿಂದ

ಸಿದ್ದರಾಮಯ್ಯ ಸ್ಪರ್ಧೆ ಖಚಿತ

ಸೀತಿ ಬೆಟ್ಟದ ಭೈರವೇಶ್ವರ ದೇವಾಲಯ, ಕೋಲಾರದ ಕೋಲಾರಮ್ಮ ದೇವಸ್ಥಾನ, ಮೆಥೋಡಿಸ್ಟ್ ಚರ್ಚ್, ಮಸೀದಿ, ಕನಕ ಮಂದಿರ ಮುಂತಾದೆಡೆ ಭೇಟಿ ನೀಡಿದ ಸಿದ್ದರಾಮಯ್ಯ, ಮಹರ್ಷಿ ವಾಲ್ಮೀಕಿ, ಸರ್ವಜ್ಞ, ಸಂಗೊಳ್ಳಿ ರಾಯಣ್ಣ, ಮಹಾತ್ಮಗಾಂಧಿ, ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದರು. ಅಲ್ಲದೇ ಗರುಡನ ಪಾಳ್ಯ ಗ್ರಾಮದಲ್ಲಿರುವ ದಿವಂಗತ ಭೈರೇಗೌಡರ ಸಮಾಧಿಗೆ ತೆರಳಿ ಗೌರವ ಸೂಚಿಸಿದರು. ಈ ವೇಳೆ ಮಾಜಿ ಸ್ಪೀಕರ್ ರಮೇಶ್ ಕುಮಾರ್, ಶಾಸಕರಾದ ನಂಜೇಗೌಡ, ಶ್ರೀನಿವಾಸಗೌಡ, ಅನಿಲ್ ಕುಮಾರ್, ನಜೀರ್ ಅಹಮದ್, ಮಾಜಿ ಶಾಸಕ ಸುಧಾಕರ್, ಕೋಲಾರ ಜಿಲ್ಲೆಯ ಕಾಂಗ್ರೆಸ್ ಹಿರಿಯ ಮುಖಂಡರು ಹಾಜರಿದ್ದರು.

ಹೈಟೆಕ್ ಬಸ್ ಸಿದ್ಧ

ಹಾಗೂ ಕೆಳಕ್ಕೆ ಬಾಗಿಸಬಹುದಾಗಿದೆ. ಅಲ್ಲದೆ ಆಸನದಲ್ಲಿ ಆರಾಮದಾಯಕವಾಗಿ ಕುಳಿತು ಪ್ರಯಾಣಿಸಬಹುದಾಗಿದೆ. ಆಯಾಸವಾದರೆ ಮಲಗಿ ವಿಶ್ರಾಂತಿ ಪಡೆಯಲು ಹಾಸಿಯೊಂದರ ವ್ಯವಸ್ಥೆ ಮಾಡಲಾಗಿದೆ. ದೂರದ ಪ್ರಯಾಣದ ವೇಳೆ ವಿದ್ಯಾಮಾನ ತಿಳಿಯಲು ಬಸ್‌ನಲ್ಲಿ ಮೂರು ಎಲ್‌ಇಡಿ(ಟಿವಿ) ಅಳವಡಿಸಲಾಗಿದೆ. ಉತ್ತಮ ಆಡಿಯೋ – ದೃಶ್ಯ ಮಾಧ್ಯಮದ ವ್ಯವಸ್ಥೆ ಹೊಂದಿದೆ. ವೈ–ಫೈ ಸಂಪರ್ಕ ಇರುವ ಈ ಬಸ್ ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆಯಿಂದ ಕೂಡಿದೆ.

ಬೂದು ಬಣ್ಣದ ಈ ಬಸ್(ಕೆಎ–51– ಎಹೆಚ್–0565)ನಲ್ಲಿ ಕಚೇರಿ ಕೆಲಸಗಳಿಗೆ ಸ್ಥಳಾವಕಾಶ, ಸಭೆಗಳನ್ನು ನಡೆಸಲು ಸೌಲಭ್ಯಗಳು, ವಿಶ್ರಾಂತಿ ಕೊಠಡಿ, ಶೌಚಾಲಯವನ್ನು ಒಳಗೊಂಡಿದೆ. ಅಲ್ಲದೇ ಚುನಾವಣಾ ಭಾಷಣ ಮಾಡಲು ಲಿಫ್ಟ್ ಸೌಲಭ್ಯವುಳ್ಳ ಪೋಡಿಯಂ ನಿರ್ಮಿಸಲಾಗಿದೆ. ಬಸ್‌ನ ಮುಂಭಾಗ ಪೋಡಿಯಂ ಇದ್ದು. ಅಗತ್ಯವಿದ್ದಾಗ ಲಿಫ್ಟ್ ಮೂಲಕ ಪೋಡಿಯಂ ಅನ್ನು ಬಸ್‌ನ ಮೇಲ್ಛಾವಣಿಯಿಂದ 3–4 ಅಡಿ ಮೇಲ್ಮಟ್ಟಕ್ಕೇರಲಿದೆ. ಮುಂಬರುವ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಪ್ರಚಾರ ಮಾಡಲು ಅಗತ್ಯ ವ್ಯವಸ್ಥೆಯೂ ಬಸ್‌ನಲ್ಲಿರುವುದರಿಂದ ಚುನಾವಣಾ ಪ್ರಚಾರ ನಡೆಸಿ, ಮತದಾರರನ್ನು ಆಕರ್ಷಿಸಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಬಸ್ ಚುನಾವಣಾ ಯಾತ್ರೆ ನಡೆಸಲಿದ್ದು, 1999ರಲ್ಲಿ ಅಂದಿನ ಕೆಪಿಸಿಸಿ ಅಧ್ಯಕ್ಷರಾಗಿದ್ದ ಎಸ್.ಎಂ.ಕೃಷ್ಣ ಅವರು ನಡೆಸಿದ 'ಪಾಂಚಜನ್ಯ ಯಾತ್ರೆ' ಮಾಧರಿಯಲ್ಲಿ ಬಸ್‌ಯಾತ್ರೆ ಕೈಗೊಂಡಿದ್ದಾರೆ. ಅಂದು ಎಸ್.ಎಂ.ಕೃಷ್ಣ ಅವರು, ಯಾತ್ರೆ ಬಹುಮತದೊಂದಿಗೆ ಪಕ್ಷ ಅಧಿಕಾರಕ್ಕೆ ತಂದಿದ್ದರು. ಅದೇ ಮಾದರಿಯಲ್ಲಿ ಸಿದ್ದರಾಮಯ್ಯ – ಡಿ.ಕೆ.ಶಿವಕುಮಾರ್ ಜೋಡಿ 2023ರ ಚುನಾವಣೆಗೆ ಬಸ್ ಯಾತ್ರೆ ಕೈಗೊಂಡಿರುವುದು ಗಮನ ಸೆಳೆದಿದೆ.

ಪರಮೇಶ್ವರ್–ಹೆಚ್.ಸಿ.ಮಹದೇವಪ್ಪ ಭೇಟಿ

ಕಾಂಗ್ರೆಸ್‌ನ ಎಸ್ಸಿ, ಎಸ್ಟಿ ಶಾಸಕರು, ಮಾಜಿ ಶಾಸಕರು ಹಾಗೂ ಮುಖಂಡರ ಪೂರ್ವಭಾವಿ ಸಭೆ ಕರೆದಿದ್ದಾರೆ. ದಲಿತ ಸಮುದಾಯದ ಎಲ್ಲಾ ಜಾತಿ ಹಾಗೂ ಉಪ ಜಾತಿಗಳನ್ನು ಒಗ್ಗೂಡಿಸುವ ಪ್ರಯತ್ನದಲ್ಲಿ ಡಾ.ಜಿ.ಪರಮೇಶ್ವರ್ ತೊಡಗಿಸಿ ಕೊಂಡಿದ್ದು, ಅವರು ಮತ್ತೋರ್ವ ದಲಿತ ನಾಯಕ ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿರುವುದು ಮಹತ್ವ ಎನಿಸಿದೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಹೆಚ್.ಸಿ.ಮಹದೇವಪ್ಪ, ಇಂದು ನಮ್ಮ ಮನೆಗೆ ಡಾ.ಜಿ.ಪರಮೇಶ್ವರ್ ಅವರು ಬಂದಿದ್ದರು. ಪ್ರಸ್ತುತ ರಾಜಕೀಯ ವಿದ್ಯಮಾನಗಳು ಹಾಗೂ ಸಂಘಟನೆ ಬಗ್ಗೆ ಚರ್ಚಿಸಿದ್ದೇವೆ ಎಂದರು. ದಲಿತ ಮುಖ್ಯಮಂತ್ರಿ ವಿಚಾರ ಪ್ರಸ್ತಾಪವಾಯಿತೇ ಎಂಬ ಪ್ರಶ್ನೆಗೆ ಇಲ್ಲಾ ಎಂದು ಉತ್ತರಿಸಿದ ಅವರು, ಎಸ್ಸಿ, ಎಸ್ಟಿ ಸಮುದಾಯದ ಎಲ್ಲಾ ಜಾತಿ ಹಾಗೂ ಉಪ ಜಾತಿಗಳನ್ನು ಒಗ್ಗೂಡಿಸಿ ಸಂಘಟನೆ ಮಾಡಬೇಕು ಎಂಬ ನಿಟ್ಟಿನಲ್ಲಿ ಚರ್ಚೆ ನಡೆಸಿದ್ದೇವೆ. ನ.20ರಂದು ಬೆಂಗಳೂರಿನಲ್ಲಿ ಈ ಸಂಬಂಧ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ. ಎಸ್ಸಿ, ಎಸ್ಟಿ ಸಮಾವೇಶದ ರೂಪು–ರೇಷೆಗಳನ್ನು ಆ ಸಭೆಯಲ್ಲಿ ರಚಿಸಲಾಗುವುದು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಅವರ ಸಲಹೆ–ಸೂಚನೆಗಳನ್ನು ಪಡೆದು ಎಸ್ಸಿ, ಎಸ್ಟಿ ಸಮಾವೇಶ ನಡೆಸಲಾಗುವುದು. ಒಟ್ಟಾರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ಅಧಿಕಾರದ ಚುಕ್ಕಾಣಿ ಹಿಡಿಯಲು ಎಸ್ಸಿ, ಎಸ್ಟಿ ಸಮುದಾಯಗಳನ್ನು ಸಂಘಟನೆ ಮಾಡಬೇಕು ಎಂಬ ಬಗ್ಗೆ ಚರ್ಚಿಸಿದ್ದೇವೆಯೇ ಹೊರತು, ದಲಿತ ಮುಖ್ಯಮಂತ್ರಿ ಬಗ್ಗೆ ಚರ್ಚೆ ನಡೆಸಿಲ್ಲ ಎಂದರು.

ಮತ್ತೆ ಮೊಸಳೆ ಪ್ರತ್ಯಕ್ಷ

ಮೊಸಳೆಯ ಉಪಟಳ ಹೆಚ್ಚಾಗಿದ್ದು, ಜನರ ಮೇಲೆ ದಾಳಿ ಮಾಡುವ ಆತಂಕ ಎದುರಾಗಿರುವುದನ್ನು ಅರಣ್ಯ ಇಲಾಖೆ ಗಮನಕ್ಕೆ ತಂದಿದ್ದಾರೆ. ಅರಣ್ಯ ಸಿಬ್ಬಂದಿಗಳ ತಂಡ ಸ್ಥಳಕ್ಕೆ ಆಗಮಿಸಿ 3 ಮೋಟಾರ್ ಬಳಸಿ ಹೊಂಡದಲ್ಲಿದ್ದ ನೀರನ್ನು ಹೊರ ಹಾಕುವ ಕೆಲಸಕ್ಕೆ ಮುಂದಾದರು. ಮಧ್ಯಾಹ್ನ ಆರಂಭವಾದ ಕಾರ್ಯಾಚರಣೆ ಸಂಜೆಯವರೆಗೂ ನಿರಂತರವಾಗಿ ಮುಂದುವರೆಸಲಾಯಿತು. ಆದರೆ ಹೊಂಡದಲ್ಲಿದ್ದ ನೀರು ಪೂರ್ಣ ಪ್ರಮಾಣದಲ್ಲಿ ಖಾಲಿಯಾಗದ ಕಾರಣ ಮೊಸಳೆ ಸೆರೆ ಕಾರ್ಯಾಚರಣೆಗೆ ಅಡಚಣೆ ಉಂಟಾಯಿತು. ಅಲ್ಲದೇ ಚರಂಡಿಯಿಂದ ನೀರು ಹೊಂಡಕ್ಕೆ ಸಂಗ್ರಹವಾಗುತ್ತಿರುವುದರಿಂದ ಮೊಸಳೆ ಪತ್ತೆಯಾಗಲಿಲ್ಲ. ಹಾಗಾಗಿ ಕತ್ತಲಾದ ಹಿನ್ನೆಲೆಯಲ್ಲಿ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಸ್ಥಳೀಯರು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಲಾಗಿದೆ. ಅಲ್ಲದೇ ಕರುವಿನ ಕಳೇಬರವನ್ನು ಮೊಸಳೆ ತಿನ್ನುತ್ತದೆಯೇ ಎಂದು ಪರಿಶೀಲಿಸಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಕಾರ್ಯಾಚರಣೆಯಲ್ಲಿ ಆರ್‌ಎಫ್‌ಓ ಕೆ.ಸುರೇಂದ್ರ ಡಿಆರ್‌ಎಫ್‌ಓಗಳಾದ ವೆಂಕಟಾಚಲ ಮತ್ತು ಸಂಜೀವ್ ಪಾಟೀಲ್, ಇಬ್ಬರು ಗಾರ್ಡ್, ಆರು ಮಂದಿ ವಾಚರ್, ಮೃಗಾಲಯದಿಂದ ನಾಲ್ವರು ಮೊಸಳೆ ನಿಲಯ ಪಾಲಕರು, ಪಾಲಿಕೆಯ ಅಭಯ ತಂಡದ ಎಂಟಕ್ಕೂ ಹೆಚ್ಚು ಮಂದಿ ಸಿಬ್ಬಂದಿಗಳು ಭಾಗವಹಿಸಿದ್ದರು. ಮೊಸಳೆ ಇದ್ದಂತಹ ಭಾಗದಲ್ಲಿ ಚರಂಡಿ ನೀರು ಸಂಗ್ರಹವಾಗುತ್ತಿರುವುದನ್ನು ಪೂರ್ಣ ಪ್ರಮಾಣದಲ್ಲಿ ಮೈಸೂರು ಪಾಲಿಕೆ ಖಾಲಿ ಮಾಡಿಕೊಟ್ಟರೆ ಮೊಸಳೆ ಹಿಡಿಯುವ ಕಾರ್ಯಾಚರಣೆಯನ್ನು ನಡೆಸಲು ಸಹಕಾರಿಯಾಗುತ್ತದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಭಿಪ್ರಾಯಪಟ್ಟು, ರಾತ್ರಿ ವೇಳೆಗೆ ವಾಪಸ್ಸಾದರು. ಸೋಮವಾರ ಬೆಳಗ್ಗೆ ಮತ್ತೆ ಸ್ಥಳಕ್ಕೆ ಆಗಮಿಸುವುದಾಗಿ ತಿಳಿಸಿ ಕಾರ್ಯಾಚರಣೆಯನ್ನು ಮೊಟಕುಗೊಳಿಸಿದರು.

ಡಾ.ವಿ.ರಂಗನಾಥ್ ಅವರ ಐದು ಪುಸ್ತಕಗಳ ಬಿಡುಗಡೆ

ಪ್ರಸ್ತುತ ಸೃಜನಶೀಲ ಸಾಹಿತ್ಯ ಪ್ರಕಟ ಕಡಿಮೆ

ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಮತ


ಮೈಸೂರು,ನ.13(ಪಿಎಂ)– ಪ್ರಸ್ತುತ ಸೃಜನಶೀಲ ಸಾಹಿತ್ಯ ಪ್ರಕಟಿಸುವ ಪ್ರಕಾಶಕರು ಕಡಿಮೆಯಾಗಿದ್ದು, ಸಾಹಿತ್ಯಾಭಿಮಾನಕ್ಕಿಂತ ಬಂಡವಾಳ ಹಾಕಿ ತೆಗೆಯುವ ಮಾರುಕಟ್ಟೆ ಮನೋಭಾವ ಹೆಚ್ಚಾಗಿದೆ ಎಂದು ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಭಿಪ್ರಾಯಪಟ್ಟರು.

ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಕಾಲೇಜಿನ ಸಭಾಂಗಣದಲ್ಲಿ ಸಂಸ್ಕೃತಿ ಪ್ರಕಾಶನ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನಿವೃತ್ತ ತಹಸೀಲ್ದಾರರೂ ಆದ 'ಮೈಸೂರು ಮಿತ್ರ' ಅಂಕಣಕಾರ ಡಾ.ವಿ.ರಂಗನಾಥ್ ಅವರ ಐದು ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಸಾಮಾಜಿಕ ಜಾಲತಾಣದ ಪ್ರಭಾವ, ಇಂದಿನ ವೇಗದ ಬದುಕಿನ ಜಂಜಾಟದಲ್ಲಿ ಪುಸ್ತಕಗಳನ್ನು ಖರೀದಿಸುವ ಓದುಗರು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ಸಂಸ್ಕೃತಿ ಪ್ರಕಾಶನ ಯಾವುದೇ ಲಾಭದ ಲೆಕ್ಕಾಚಾರವಿಲ್ಲದೆ, ಡಾ.ವಿ.ರಂಗನಾಥ್ ಅವರ ಸೃಜನಶೀಲ ಸಾಹಿತ್ಯ ಹೊಂದಿರುವ ಐದು ಪುಸ್ತಕಗಳನ್ನು ಹೊರತಂದಿರುವುದು ನಿಜಕ್ಕೂ ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾನು ಸಂಗೀತ ವಿವಿಗೆ ಕುಲಸಚಿವನಾಗಿ ಬಂದಾಗ, ಡಾ.ರಂಗನಾಥ್ ಅವರು ನಮ್ಮ ವಿವಿಯಲ್ಲಿ ಡಿ.ಲಿಟ್ ಪದವಿಗಾಗಿ ಮಹಾಪ್ರಬಂಧ ಸಲ್ಲಿಸಿದ್ದರು. ಆದರೆ 2 ವರ್ಷಗಳಾದರೂ ತಾಂತ್ರಿಕ ಕಾರಣಗಳಿಂದ ಅದರ ಮೌಲ್ಯಮಾಪನ ಸಾಧ್ಯವಾಗಿರಲಿಲ್ಲ. ನಾನು ಇದನ್ನು ಸರಿಪಡಿಸುತ್ತಾ ಹೋದಂತೆ ಅವರ ಪರಿಚಯವಾಯಿತು. ಅಧಿಕಾರಿಯಾಗಿಯೂ ಎಷ್ಟೇ ಸಾಹಿತ್ಯಾಭಿಮಾನ ಇದ್ದರೂ ನಿವೃತ್ತಿ ಜೀವನದ ಸಂದರ್ಭಕ್ಕೆ ಸಾಹಿತ್ಯ ಮರೆಯುವವರೇ ಹೆಚ್ಚು. ಆದರೆ ರಂಗನಾಥ್ ಅವರು ನಿವೃತ್ತಿ ನಂತರವೂ ತಮ್ಮ ಸಾಹಿತ್ಯ ಮತ್ತು ಸಂಶೋಧನಾ ಪ್ರವೃತ್ತಿ ಮುಂದುವರೆಸಿದ್ದಾರೆ ಎಂದು ಹೇಳಿದರು.

ವಿವಿಯಿಂದ ರಂಗನಾಥ್ ಪ್ರಬಂಧ ಪ್ರಕಟ: ನಮ್ಮ ವಿವಿ ವತಿಯಿಂದ ರಂಗನಾಥ್ ಅವರ ಡಿ.ಲಿಟ್ ಮಹಾಪ್ರಬಂಧವನ್ನು ಪ್ರಕಟಣೆ ಮಾಡುತ್ತಿದ್ದೇವೆ. 'ಮೈಸೂರು ಮಿತ್ರ'ನಲ್ಲಿ ಅವರ ಅಂಕಣಗಳನ್ನು ಗಮನಿಸಿದ್ದು, ಎಲ್ಲಾ ಸ್ತರದ, ಎಲ್ಲಾ ವಯೋಮಿತಿಯವರಿಗೂ ಅಗತ್ಯವಾದ ಅತ್ಯಮೂಲ್ಯ ವಿಚಾರಗಳನ್ನು ಅವರು ಬರೆದಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಅವರ ಅಂಕಣಗಳನ್ನು ಎಷ್ಟೋ ಜನ ಮನೆಯಲ್ಲಿ ಕೂತು ಓದಿ ಉತ್ಸಾಹ ಪಡೆದಿದ್ದಾರೆ. ನಾನು ಆ ಸಂದರ್ಭದಲ್ಲಿ ಅವರ ಲೇಖನಗಳನ್ನು ಓದುತ್ತಿದ್ದೆ. ಇಂತಹ ವ್ಯಕ್ತಿಗಳು ಇರುವುದು ನಮ್ಮ ಸಮಾಜ, ವಿವಿಗಳು ಹಾಗೂ ಯುವ ಜನತೆಯ ಭಾಗ್ಯವೇ ಸರಿ. ರಾಜಕೀಯ ಅಥವಾ ಆಡಳಿತಾತ್ಮಕ ಸಮಸ್ಯೆಗಳು ಎದುರಾದಾಗ ಡಾ.ರಂಗನಾಥ್ ಮತ್ತು ಮ.ವೆಂಕಟರಾಮು ಅವರ ಸಹಾಯ ಪಡೆದುಕೊಂಡು ನಮ್ಮ ವಿವಿಯನ್ನು ಎಲ್ಲಾ ಜಂಜಾಟಗಳಿಂದ ಹೊರತರಲಾಗಿದೆ ಎಂದರು.



ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಕಾಲೇಜಿನ ಸಭಾಂಗಣದಲ್ಲಿ ಡಾ.ವಿ.ರಂಗನಾಥ್ ಅವರ ಐದು ಪುಸ್ತಕಗಳನ್ನು ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ (ಎಡದಿಂದ 3ನೇಯವರು) ಬಿಡುಗಡೆ ಮಾಡಿದರು. ಎಡದಿಂದ ಕೃತಿಗಳ ಕರ್ತೃ ಡಾ.ವಿ.ರಂಗನಾಥ್, ವೈದ್ಯ ಡಾ.ಎ.ಎಸ್.ಚಂದ್ರಶೇಖರ್, ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿ ಸದಸ್ಯ ಮ.ವೆಂಕಟರಾಮು, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಚಿತ್ರದಲ್ಲಿದ್ದಾರೆ.

ಬಿಡುಗಡೆಗೊಂಡ ಐದು ಪುಸ್ತಕಗಳು

'ವೈಶಾಲ್ಯವೇ ಜೀವನ, ಸಂಕುಚಿತತೆಯೇ ಮರಣ', 'ಜೀವನ ಪ್ರೀತಿ' ('ಮೈಸೂರು ಮಿತ್ರ' ಅಂಕಣದಲ್ಲಿ ಪ್ರಕಟಗೊಂಡ ಲೇಖನಗಳ ಸಂಗ್ರಹದ 2 ಕೃತಿಗಳು), ದಸರಾ (ಒಂದು ಕಿರು ಕೈಪಿಡಿ), ದಿ.ರಸಿಕಪುತ್ತಿಗೆ ಅವರ 'ಬೇಡಾದ ಬಾಳು' ಮತ್ತು 'ಪಿತ್ರಾರ್ಜಿತ' (ಡಾ.ವಿ.ರಂಗನಾಥ್ ಅವರ ಸಂಪಾದನೆಯ 2 ಕೃತಿಗಳು).

ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಮಾತನಾಡಿ, ಡಾ.ರಂಗನಾಥ್ ನನಗೆ ಮಾರ್ಗದರ್ಶಕರು. ಅವರು ನಿವೃತ್ತ ತಹಸೀಲ್ದಾರ್ ಆಗಿದ್ದರೂ ಜನರು ಅವರನ್ನು ಲೇಖಕ ಎಂದೇ ಗುರುತಿಸುತ್ತಾರೆ. ಅವರ ವೈಚಾರಿಕ ಚಿಂತನೆಗಳು ಜನಪ್ರಿಯವಾಗಿವೆ. ಅವರು ನಿವೃತ್ತಿ ಹೊಂದಿದ 5 ವರ್ಷಗಳಲ್ಲಿ 30 ಪುಸ್ತಕಗಳನ್ನು ಬರೆದಿದ್ದಾರೆ. ದಸರಾ ಆಗಲೀ, ಚುನಾವಣೆ ಆಗಲೀ ವಿಶ್ವಾಸಾರ್ಹ ಮಾಹಿತಿ ನೀಡುತ್ತಾರೆ. ಈ ನಿಟ್ಟಿನಲ್ಲಿ ದಸರಾ ಕಾರ್ಯಕ್ರಮಗಳ ಬಗ್ಗೆ ಹಲವು ಜಿಲ್ಲಾಧಿಕಾರಿಗಳಿಗೆ ಇವರು ಮಾಹಿತಿ ಒದಗಿಸಿದ್ದಾರೆ. ಇವರು ಹೇಳುವುದೇ ವಿಶ್ವಾಸಾರ್ಹ ಮಾಹಿತಿ ಎನ್ನುವಷ್ಟರ ಮಟ್ಟಿಗೆ ಬದ್ಧತೆ ಉಳಿಸಿಕೊಂಡಿದ್ದಾರೆ ಎಂದು ತಿಳಿಸಿದರು.

'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು ಮತ್ತು ನಾನು ಒಂದೇ ಬಡಾವಣೆಯವರಾಗಿದ್ದೇವೆ. ಅವರು ನನಗೆ ಸಿಕ್ಕಿದಾಗಲೆಲ್ಲಾ ರಂಗನಾಥ್ ಅವರ ಬರವಣಿಗೆ ಬಗ್ಗೆ ನನ್ನೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆಡಳಿತ ತರಬೇತಿ ಸಂಸ್ಥೆಯಲ್ಲಿ ಅಧಿಕಾರಿಗಳಿಗೆ ತರಗತಿ ತೆಗೆದುಕೊಂಡು ಆಡಳಿತ ಬಗ್ಗೆ ಮಾಹಿತಿ ನೀಡುವುದರಲ್ಲೂ ರಂಗನಾಥ್ ತಮ್ಮದೇ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಅವರು ಇನ್ನೂ 30 ಪುಸ್ತಕಗಳನ್ನು ಬರೆಯಲಿ ಎಂದು ಆಶಿಸಿದರು.

ಸಂಗ್ರಹ ಯೋಗ್ಯ ಪುಸ್ತಕಗಳು: ಪುಸ್ತಕಗಳ ಕುರಿತು ಮಾತನಾಡಿದ ವೈದ್ಯ ಡಾ.ಎ.ಎಸ್.ಚಂದ್ರಶೇಖರ್, ರಂಗನಾಥ್ ಅವರ ಅಂಕಣಗಳನ್ನು 'ಮೈಸೂರು ಮಿತ್ರ'ನಲ್ಲಿ ಓದಿದ್ದೆ. ಹಾಗಾಗಿ ಪುಸ್ತಕ ಕುರಿತು ಮಾತನಾಡುವ ಜವಾಬ್ದಾರಿ ನೀಡಿದ್ದಾರೆ. 'ಮೈಸೂರು ಮಿತ್ರ'ನಲ್ಲಿ ಇವರ ಪ್ರತಿ ಅಂಕಣ ಓದಿದಾಗಲೆಲ್ಲಾ ಅವರು ಹೊಸ ವಿಷಯಗಳ ಮೇಲೆ ಬೆಳಕು ಚೆಲ್ಲಿರುವುದು ಗೋಚರಿಸುತ್ತಿತ್ತು. ರಂಗನಾಥ್ ಅವರು ಎಲ್ಲಾ ಕ್ಷೇತ್ರಗಳ ಬಗ್ಗೆಯೂ ಬರೆಯುವ ಶೈಲಿ ರೂಢಿಸಿಕೊಂಡಿದ್ದಾರೆ. ಅವರ ಈ ಪುಸ್ತಕಗಳ ಬಗ್ಗೆ ನಾವು ಅವಲೋಕನ ಮಾಡಬೇಕು. ಇವುಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳಬೇಕು. ಉತ್ತಮ ವಿಚಾರಗಳು ಈ ಪುಸ್ತಕಗಳಲ್ಲಿದ್ದು, ಮುಂದಿನ ಪೀಳಿಗೆಗೆ ಅಗತ್ಯವಾಗಲಿವೆ ಎಂದರು.

'ವೈಶಾಲ್ಯವೇ ಜೀವನ ಸಂಕುಚಿತತೆಯ ಮರಣ' ಪುಸ್ತಕದಲ್ಲಿ ಸಾಮರಸ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಮ.ವೆಂಕಟರಾಮು ಅವರೊಂದಿಗಿನ ತಮ್ಮ ಒಡನಾಡವನ್ನೂ ಉಲ್ಲೇಖಿಸಿದ್ದಾರೆ ಸಂಘದಲ್ಲಿ (ಆರ್‌ಎಸ್‌ಎಸ್) ಕಾರ್ಯಕರ್ತರು ಪ್ರವಾಸಕ್ಕೆ ಹೋಗುವುದು ರೂಢಿಯಲ್ಲಿದೆ. ಇಂತಹ ಪ್ರವಾಸದಲ್ಲಿ ಯಾವುದೇ ಜಾತಿ–ಮತದ ಭೇದವಿಲ್ಲದೆ, ಎಲ್ಲರೂ ಸಹಪಂಕ್ತಿ ಭೋಜನ ಸ್ವೀಕರಿಸುವ ಪ್ರಸಂಗವೊಂದನ್ನು ಕಥೆ ರೂಪದಲ್ಲಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. ಸಂಗ್ರಹ ಯೋಗ್ಯ ಪುಸ್ತಕಗಳನ್ನು ಲೇಖಕರು ಹೊರತಂದಿದ್ದಾರೆ. ಈ ಪುಸ್ತಕಗಳು ನಮ್ಮಲ್ಲಿ ಸ್ವಾವಲಂಬಿತನ ತರಲಿವೆ ಎಂದು ತಿಳಿಸಿದರು.

ವರ್ಷಕ್ಕೆ ಒಮ್ಮೆ ಸಿಂಧೂ ನದಿ ದರ್ಶನ ಹೋಗಬೇಕೆಂಬ ಅಡ್ವಾಣಿಯವರ ಕರೆ ಮೇರೆಗೆ ಸಿಂಧೂ ದರ್ಶನ ಕಾರ್ಯಕ್ರಮ ರೂಪಿಸಲಾಗಿತ್ತು. ರಂಗನಾಥ್ 'ಸಿಂಧೂ ನದಿ' ಬಗ್ಗೆಯೂ ಬರೆದಿದ್ದಾರೆ. ಸಿಂಧೂ ನದಿ ದರ್ಶನಕ್ಕೆ ಪ್ರವಾಸಕ್ಕೆ ಹೋಗಲು ಅನೇಕರು ರಂಗನಾಥರ ಬಳಿ ಮಾಹಿತಿ ಕೇಳುತ್ತಾರೆ. 'ಮರಣ ನಂತರದ ಬದುಕು' ಅಂಕಣವನ್ನು ಅವರು ಇತ್ತೀಚೆಗೆ 'ಮೈಸೂರು ಮಿತ್ರ'ನಲ್ಲಿ ಬರೆದಿದ್ದರು. ಉಕ್ರೇನ್ ಯೋಧನೊಬ್ಬ ಸೇತುವೆ ಮೇಲೆ ಆತ್ಮಾಹುತಿ ಬಾಂಬ್‌ಗೆ ಬಲಿದಾನ ಮಾಡಿದ್ದನ್ನು ಕುರಿತು ಅದರಲ್ಲಿ ಅವರು ಉಲ್ಲೇಖಿಸಿದ್ದರು. ದೇಶಕ್ಕಾಗಿ ಈ ಯೋಧ ತನ್ನ ಪ್ರಾಣತ್ಯಾಗ ಮಾಡುತ್ತಾನೆ. ಇದು ದೇಶಾಭಿಮಾನದ ಪ್ರತೀಕ. ನಮ್ಮ ಮಕ್ಕಳಿಗೆ ನಾವು ದೇಶಾಭಿಮಾನ ಮೂಡಿಸಲು ಹೆಚ್ಚಿನ ಆದ್ಯತೆ ನೀಡಬೇಕಿದೆ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪ್ರಾಂತ ಕಾರ್ಯಕಾರಿ ಸದಸ್ಯ ಮ.ವೆಂಕಟರಾಮು ಅಧ್ಯಕ್ಷತೆ ವಹಿಸಿದ್ದರು. ಕೃತಿಗಳ ಕರ್ತೃ ಡಾ.ವಿ.ರಂಗನಾಥ್ ವೇದಿಕೆಯಲ್ಲಿದ್ದರು. ವಿಧಾನಪರಿಷತ್ ಮಾಜಿ ಸದಸ್ಯರಾದ ತೋಂಟದಾರ್ಯ, ಗೋ.ಮಧುಸೂದನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಟಿಪ್ಪು ಏಕೆ ನಮ್ಮ ರಾಜ್ಯ ಆಳ್ವಿಕೆ ಮಾಡಬೇಕಿತ್ತು?

ಮೈಸೂರು, ನ.13(ಪಿಎಂ)– ಟಿಪ್ಪು ಸುಲ್ತಾನ್ ನಮ್ಮ ದೇಶದವನಾ? ನಮ್ಮ ರಾಜನಾ? ಅವನು ಏಕೆ ಮೈಸೂರು ಸಂಸ್ಥಾನದ ಆಳ್ವಿಕೆ ಮಾಡಬೇಕಿತ್ತು? ಎಂದು ಒಮ್ಮೆಯಾದರೂ ಅವಲೋಕನ ಮಾಡಿಕೊಂಡಿದ್ದೇವೆಯೇ? ಎಂದು ವೈದ್ಯ ಡಾ.ಎ.ಎಸ್.ಚಂದ್ರಶೇಖರ್ ಪ್ರಶ್ನಿಸಿದರು.

ಡಾ.ರಂಗನಾಥ್ ಅವರ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಪುಸ್ತಕಗಳ ಕುರಿತು ಮಾತನಾಡಿದ ಅವರು, ವಿಜಯನಗರ ಸಾಮ್ರಾಜ್ಯದ ಬಗ್ಗೆ 'ದಸರಾ' ಎಂಬ ಪುಸ್ತಕದಲ್ಲಿ ರಂಗನಾಥ್ ಬರೆದಿದ್ದಾರೆ. ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿದ್ದ ದಸರಾ, ಹೇಗೆ ಮೈಸೂರಿಗೆ ಬಂತು. ಅದಕ್ಕೂ ಮುನ್ನ ನಾಲ್ಕಾರು ವರ್ಷಗಳು ಟಿಪ್ಪು ಸುಲ್ತಾನ್ ಕಾಲದಲ್ಲಿ ದಸರಾನೇ ನಡೆಯದಿರುವ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ ಎಂದರು.

ರಂಗನಾಥ ಅವರು 'ದಸರಾ' ಪುಸ್ತಕದಲ್ಲಿ ಟಿಪ್ಪು ಹೇಗೆ ಲಕ್ಷಾಂತರ ಜನರನ್ನು ಹತ್ಯೆ ಮಾಡಿದ. ಹತ್ಯೆ ಮಾಡಿದ್ದಕ್ಕೆ ಕಾರಣಗಳೇನು? ಎಲ್ಲವನ್ನೂ ಬರೆದಿದ್ದಾರೆ. ಜೊತೆಗೆ ಮೈಸೂರು ರಾಜಮನೆತನದ ಕೊಡುಗೆ ಮೇಲೆ ಬೆಳಕು ಚೆಲ್ಲಿದ್ದಾರೆ. ಅಲ್ಲದೆ, ಹಿಂದೂ ಸಂಸ್ಕೃತಿ ಯಾವ ರೀತಿ ಉಳಿದು ಬೆಳೆಯಿತು ಎಂಬ ಬಗ್ಗೆಯೂ ಮಾಹಿತಿ ಒದಗಿಸಿದ್ದಾರೆ ಎಂದು ವಿವರಿಸಿದರು.

ಸಂಸತ್ ಭವನದ ಎದುರು ಬೃಹತ್ ಟಿಪ್ಪು ಪ್ರತಿಮೆ ಸ್ಥಾಪನೆಗೆ ವಾಟಾಳ್ ಆಗ್ರಹ

ಮೈಸೂರು, ನ.13(ಆರ್‌ಕೆಬಿ)– ದೇಶದ ಮಹಾನ್ ಹೋರಾಟಗಾರ ಟಿಪ್ಪು ಸುಲ್ತಾನ್ ಅವರ ಬೃಹತ್ ಪ್ರತಿಮೆಯನ್ನು ಸಂಸತ್ ಭವನದ ಮುಂದೆ ಸ್ಥಾಪಿಸುವ ಮೂಲಕ ಅವರಿಗೆ ರಾಷ್ಟ್ರೀಯ ಮಟ್ಟದ ಗೌರವ ನೀಡಬೇಕು ಎಂದು ಕನ್ನಡ ಚಳವಳಿ ನಾಯಕ, ಮಾಜಿ ಶಾಸಕ ವಾಟಾಳ್ ನಾಗರಾಜ್ ಇಂದಿಲ್ಲಿ ಆಗ್ರಹಿಸಿದರು.



ಮೈಸೂರಿನ ಹಾರ್ಡಿಂಜ್ ವೃತ್ತ (ಆರು ಗೇಟ್)ದಲ್ಲಿ ಏಕಾಂಗಿ ಪ್ರತಿಭಟನೆ ನಡೆಸಿ, ಟಿಪ್ಪು ಪರ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಮಾಧ್ಯಮ ಗಳೊಂದಿಗೆ ಮಾತನಾಡಿ, ಟಿಪ್ಪು ಅಪ್ರತಿಮ ಹೋರಾಟಗಾರ, ಬ್ರಿಟೀಷರ ವಿರುದ್ಧ ಹೋರಾಡಿ, ಅವರಿಂದಲೇ ಹುಲಿ ಎನಿಸಿಕೊಂಡವನು. ದೇಶಕ್ಕೆ ಅಪಾರ ಕೊಡುಗೆ ನೀಡಿರುವ ಟಿಪ್ಪುವಿನ ಹೆಸರಿಗೆ ಇತ್ತೀಚೆಗೆ ಅಪಚಾರ, ಅಗೌರವ ಮಾಡಲಾಗುತ್ತಿದೆ. ಇದು ಸರಿಯಲ್ಲ. ಟಿಪ್ಪುವಿನ ಪ್ರತಿಮೆ ಸಂಸತ್ ಭವನದ ಮುಂದೆ ಸ್ಥಾಪಿಸುವ ಮೂಲಕ ಆತನಿಗೆ ರಾಷ್ಟ್ರೀಯ ಮಟ್ಟದ ಗೌರವ ನೀಡಬೇಕು ಎಂದು ಆಗ್ರಹಿಸಿದರು.

ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಮೊದಲ ಹೋರಾಟ ನನ್ನದೇ: ಬೆಂಗಳೂರಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಪ್ರಪ್ರಥಮ ಹೋರಾಟ ಮಾಡಿದ್ದು ನಾನೇ. ಅಂದು ನಿಜಲಿಂಗಪ್ಪ, ಬೆಂಗಳೂರಿನ ಮೇಯರ್ ಆಗಿದ್ದ ಜಿ.ನಾರಾಯಣ ಅವರು ಕೆಂಪೇಗೌಡ ಪ್ರತಿಮೆ ನಿರ್ಮಿಸಿದರು. ಬ್ರಿಟೀಷರು ರಣಸ್ತಂಭವನ್ನು ಒಡೆದು, ಅಲ್ಲಿ ಕೆಂಪೇಗೌಡ ಪ್ರತಿಮೆ ಬರುವಂತೆ ಮಾಡಿದ್ದ ಬಗ್ಗೆ ತಮ್ಮ ಹಳೆಯ ನೆನಪುಗಳನ್ನು ವಾಟಾಳ್ ಮೆಲುಕು ಹಾಕಿದರು.

ಕೆಂಪೇಗೌಡ ಪ್ರತಿಮೆ ಸ್ಥಾಪನೆಗೆ ಕಾರಣನಾದ ನನ್ನನ್ನು ಮೊನ್ನೆ ಕೆಂಪೇಗೌಡರ ಬೃಹತ್ ಪ್ರತಿಮೆ ಉದ್ಘಾಟನಾ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕಿತ್ತು. ನನ್ನನ್ನು ಕರೆದಿಲ್ಲ ಎಂಬುದಕ್ಕೆ ನನ್ನ ತಕರಾರಿಲ್ಲ. ಆದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಆಹ್ವಾನಿಸದೇ ಕಡೆಗಣಿಸಿದ್ದು ಸರಿಯಲ್ಲ ಎಂದು ಖಂಡಿಸಿದರು.

ಬಸವಣ್ಣ ಸಂಗೊಳ್ಳಿ ರಾಯಣ್ಣಗೆ ಗೌರವಿಸದ ಪ್ರಧಾನಿ: ಬೆಂಗಳೂರಿಗೆ ಆಗಮಿಸಿ, ಕನಕದಾಸರು, ವಾಲ್ಮೀಕಿ ಅವರನ್ನು ಗೌರವಿಸಿದ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿದ ವಾಟಾಳ್ ನಾಗರಾಜ್, ಆದರೆ ಜಗಜ್ಯೋತಿ ಬಸವಣ್ಣ ಮತ್ತು ಕಿತ್ತೂರು ರಾಣಿ ಚೆನ್ನಮ್ಮರೊಂದಿಗೆ ಸೇರಿ ಬ್ರಿಟೀಷರ ವಿರುದ್ಧ ಹೋರಾಡಿದ ಸಂಗೊಳ್ಳಿ ರಾಯಣ್ಣರನ್ನು ಗೌರವಿಸದೇ ಹೋದ ಬಗ್ಗೆ ಕಟುವಾಗಿ ಪ್ರಶ್ನಿಸಿದರು.

ಐದು ವರ್ಷದ ಹಿಂದೆ ನಾನು ಬಸವಣ್ಣನವರ ಬೃಹತ್ ಪ್ರತಿಮೆ ಸ್ಥಾಪಿಸುವಂತೆ ಸರ್ಕಾರದ ಗಮನ ಸೆಳೆದಿದ್ದೆ. ಅಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರ ಗಮನವನ್ನೂ ಸೆಳೆದಿದ್ದೆ. ಒಂದು ಎಕರೆ ನಿವೇಶನದಲ್ಲಿ ಬಸವಣ್ಣನವರ ಅತ್ಯಂತ ಎತ್ತರದ ಪ್ರತಿಮೆ ಸ್ಥಾಪಿಸಬೇಕಿತ್ತು. ಮೂರು–ನಾಲ್ಕು ಬಾರಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವಕಾಶ ಸಿಕ್ಕಿದ್ದರೂ ಮಾಡದೇ ಹೋದರು. ಈಗಿನ ಬಿಜೆಪಿ ಸರ್ಕಾರ ಕೇವಲ ಢೋಂಗಿ ಸರ್ಕಾರ ಎಂದು ಜರಿದರು.

ಟಿಪ್ಪುಗೆ ಅಗೌರವ; ರಂಗಾಯಣ ವಿರುದ್ಧ ವಾಟಾಳ್ ಆಕ್ರೋಶ: ಮೈಸೂರು ರಂಗಾಯಣದಲ್ಲಿ 'ಟಿಪ್ಪು ನಿಜ ಕನಸುಗಳು' ನಾಟಕ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿದ ಅವರು, ಅದು ಟಿಪ್ಪುವಿನ ನಿಜ ಕನಸುಗಳಲ್ಲ. ಕೆಟ್ಟ ಕನಸುಗಳು. ಟಿಪ್ಪುವಿನ ಚರಿತ್ರೆಗೆ ಅಪಚಾರ ಮಾಡುತ್ತಿದ್ದಾರೆ. ಚರಿತ್ರೆಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ. ಆರ್‌ಎಸ್‌ಎಸ್, ಬಿಜೆಪಿ, ಮುತಾಲಿಕ್ ಇವರೆಲ್ಲರೂ ಸ್ವಾತಂತ್ರ್ಯ ಹೋರಾಟಗಾರ ಟಿಪ್ಪುವನ್ನು ಅಪಮಾನಿಸುತ್ತಿರುವುದು ಸರಿಯಲ್ಲ ಎಂದರು. ಮುತಾಲಿಕ್ ಅಂಥವರು ನೀಡುತ್ತಿರುವ ಹುಚ್ಚು ಹೇಳಿಕೆಗಳಿಗೆ ನಾವು ಪ್ರತಿಕ್ರಿಯಿಸಿದರೆ ನಾವೂ ಹುಚ್ಚರಂತಾಗುತ್ತೇವೆ ಎಂದ ಅವರು, ಎಲ್ಲದಕ್ಕೂ ಬರೀ ವಿರೋಧ ಮಾಡುವುದೇ ಮುತಾಲಿಕ್ ಅವರ ಜೀವನವಾಗಿದೆ ಎಂದು ಆರೋಪಿಸಿದರು.

ಹೆಚ್‌ಐವಿ–ಏಡ್ಸ್, ಟಿಬಿ, ಕೋವಿಡ್ ಕುರಿತು ವೈದ್ಯರ ರಾಷ್ಟ್ರೀಯ ಸಮ್ಮೇಳನ



ಮೈಸೂರು, ನ.13(ಆರ್‌ಕೆಬಿ)– ಏಡ್ಸ್ ಸೊಸೈಟಿ ಆಫ್ ಇಂಡಿಯಾ ಸಹಯೋಗದಲ್ಲಿ ಮೈಸೂರಿನ ಆಶಾಕಿರಣ ಆಸ್ಪತ್ರೆಯು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಏರ್ಪಡಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಎಚ್‌ಐವಿ–ಏಡ್ಸ್, ಟಿಬಿ, ಕೋವಿಡ್ ಮತ್ತು ಹೊಸ ಹೊಸ ಸೋಂಕುಗಳ ಕುರಿತು ವೈದ್ಯರಿಗಾಗಿ ತಿಳುವಳಿಕೆ ಕಾರ್ಯಕ್ರಮ ನಡೆಸಲಾಯಿತು.

ಏಡ್ಸ್ ಸೊಸೈಟಿ ಆಫ್ ಇಂಡಿಯಾ (ಎಎಸ್‌ಐ) ಅಧ್ಯಕ್ಷ ಡಾ.ಐ.ಎಸ್.ಗಿಲಾಡಾ, ಚೆನ್ನೈನ ಡಾ.ಕುಮಾರಸ್ವಾಮಿ, ಡಾ.ಬಾಲಸುಬ್ರಹ್ಮಣ್ಯ, ಡಾ.ನರೇಂದ್ರ, ಡಾ.ವಿಜಯ ಕುಲಕರ್ಣಿ ಇನ್ನಿತರ ನುರಿತ ವೈದ್ಯರು ಸಮ್ಮೇಳನಕ್ಕೆ ಆಗಮಿಸಿದ್ದು, 100ಕ್ಕೂ ಅಧಿಕ ವೈದ್ಯರಿಗೆ ಸೋಂಕುಗಳ ಮಾಹಿತಿ ಹಾಗೂ ಅವುಗಳ ನಿಯಂತ್ರಣ ಕುರಿತಂತೆ ತಿಳುವಳಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಡಾ.ರೇಣು ಅಗರ್‌ವಾಲ್ ಬರೆದ 'ಬಯೋಫಿಲ್ಮ್' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಆಶಾಕಿರಣ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಡಾ.ಕೆ.ಎಸ್.ಗುರುರಾಜ್, ಡಾ.ಎಸ್.ಎನ್.ಮೋತಿ ಇನ್ನಿತರರು ಉಪಸ್ಥಿತರಿದ್ದರು.

ರೈಲ್ವೇ ನಿವೃತ್ತದಾರರಿಗೆ ವಾರ್ಷಿಕ ಜೀವನಪತ್ರ

ಮೈಸೂರು, ನ. 13– ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ರೈಲ್ವೇ ನಿವೃತ್ತಿ ವೇತನದಾರರ ಸಂಘದಲ್ಲಿ ನವೆಂಬರ್ 16ರಂದು ಬೆಳಗ್ಗೆ 10.30ಕ್ಕೆ ಕೆನರಾ ಬ್ಯಾಂಕ್ ವತಿಯಿಂದ ರೈಲ್ವೇ ನಿವೃತ್ತಿ ವೇತನದಾರರಿಗೆ ವಾರ್ಷಿಕ ಜೀವನ ಪ್ರಮಾಣಪತ್ರ ನೀಡಲಾಗುತ್ತದೆ. ಕೆನರಾ ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ರೈಲ್ವೆ ನಿವೃತ್ತ ವೇತನದಾರರು ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಸಂಘದ ಪ್ರಕಟಣೆ ತಿಳಿಸಿದೆ.

ಡಾ.ಎಚ್.ಜೆ.ಲಕ್ಕಪ್ಪಗೌಡರ 'ಬೇರಿಗಿಳಿದ ನೀರು' ಕೃತಿ ಬಿಡುಗಡೆ

ಮೈಸೂರು, ನ.13(ಆರ್‌ಕೆಬಿ)– ಪ್ರೊ.ಲಕ್ಕಪ್ಪಗೌಡರನ್ನು ಅಧ್ಯಯನ ಮಾಡುವುದು ಅಷ್ಟು ಸುಲಭವಲ್ಲ. ಡಾ.ಎಚ್.ಜೆ.ಲಕ್ಕಪ್ಪಗೌಡರ ಬದುಕು ಮತ್ತು ಬರಹ ಕುರಿತು ಡಾ.ಬಿ.ಆರ್.ಜಯಕುಮಾರಿ ಅವರು 'ಬೇರಿಗಿಳಿದ ನೀರು' ಕೃತಿಯ ಮೂಲಕ ಅವರ ಬದುಕು ಮತ್ತು ಬರಹವನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ ಎಂದು ಶ್ರೇಷ್ಠ ವಿಮರ್ಶಕ, ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿವಿ ಅಧ್ಯಾಪಕರ ಸಂಘ ಜಂಟಿಯಾಗಿ ಭಾನುವಾರ ಏರ್ಪಡಿಸಿದ್ದ ಡಾ.ಬಿ.ಆರ್.ಜಯಕುಮಾರಿ ಅವರ 'ಬೇರಿಗಿಳಿದ ನೀರು' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದರು.



ವಿಶ್ರಾಂತ ಕುಲಪತಿ, ಸಾಹಿತಿ, ಬರಹಗಾರ ಡಾ.ಎಚ್.ಜೆ.ಲಕ್ಕಪ್ಪಗೌಡರ ಬದುಕು–ಬರಹ ಕುರಿತು ಡಾ.ಬಿ.ಆರ್.ಜಯಕುಮಾರಿ ಬರೆದ 'ಬೇರಿಗಿಳಿದ ನೀರು' ಕೃತಿಯನ್ನು ಶ್ರೇಷ್ಠ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಬಿಡುಗಡೆ ಮಾಡಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಮೈಸೂರು ಕೃಷ್ಣಮೂರ್ತಿ, ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಬಿ.ಆರ್.ವಿಜಯಕುಮಾರಿ, ಡಾ.ಬಿ.ವಿ.ವಸಂತಕುಮಾರ್, ಮುರಳೀಧರ್ ಭಾಗವತ್, ಶಾಸಕ ಸಿ.ಎಸ್.ಪುಟ್ಟರಾಜು, ಡಾ.ಎ.ರಂಗಸ್ವಾಮಿ, ಪ್ರಕಾಶ್ ಚಿಕ್ಕಪಾಳ್ಯ ಅವರನ್ನು ಕಾಣಬಹುದು.

ವಿಶ್ರಾಂತ ಕುಲಪತಿ, ಸಾಹಿತಿ, ಬರಹಗಾರ ಡಾ.ಎಚ್.ಜೆ.ಲಕ್ಕಪ್ಪಗೌಡರು ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಅವರನ್ನು ಕುರಿತು ಬರೆಯುವಾಗ ಜಯಕುಮಾರಿ ಅವರು ಲಕ್ಕಪ್ಪಗೌಡರನ್ನು ಸುಲಭವಾಗಿ, ಪ್ರೀತಿಯಿಂದ ಅಧ್ಯಯನ ಮಾಡಿದ್ದಾರೆ. ಶ್ರಮ ಹಾಗೂ ಶ್ರದ್ಧೆ, ವಿನಯ, ಅಧ್ಯಯನ ಹಾಗೂ ಮೌಲ್ಯ ಈ ಕೃತಿಯಲ್ಲಿ ಕಾಣಬಹುದು. ಲಕ್ಕಪ್ಪಗೌಡರ ಇಡೀಯಾದ ಸಾಹಿತ್ಯವನ್ನು ಈ ಕೃತಿ ನೀಡಿದೆ ಎಂದರು.

ನಾವಿಂದು ಸಾಹಿತ್ಯವನ್ನು ಇಡೀಯಾಗಿ ಓದುವ ಬದಲು ಕೇವಲ ಒಂದು ಭಾಗವನ್ನಷ್ಟೇ ಓದಿ ಅದರ ಬಗ್ಗೆ ಮಾತನಾಡುತ್ತೇವೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಸಮಾಜದಲ್ಲಿಂದು ಬರಿ ದ್ವೇಷ, ಅಸೂಯೆಗಳೇ ತುಂಬಿವೆ ವಿನಯ ಎಂಬುದು ದೌರ್ಬಲ್ಯವಲ್ಲ. ಗ್ರಾಮೀಣ ಸಂವೇದನೆಯನ್ನು ಪರಿಚಯಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಆಧುನಿಕತೆಯ ಅನುಕೂಲಗಳು ಇದ್ದಷ್ಟೂ ತೊಂದರೆಗಳು ಇರುತ್ತವೆ ಎಂದು ಹೇಳಿದರು.

ಒತ್ತಡದ ಕಾರಣದಿಂದ ಸಾಹಿತ್ಯ ರಚನೆಗೆ ಸಮಯ ಸಾಕಾಗುತ್ತಿಲ್ಲ ಎಂಬ ಮಾತುಗಳನ್ನು ಹೇಳಲಾಗುತ್ತಿದೆ. ಬರವಣಿಗೆಗೆ ಸಮಯ ಇಲ್ಲ ಎನ್ನಬಾರದು, ಸಮಯ ಮಾಡಿಕೊಳ್ಳಬೇಕು. ಸಾಹಿತ್ಯದ ಕಡೆಗೆ ಸಮಯದ ಒದಗಿಸಿಕೊಳ್ಳಬೇಕು. ಆಗಲೇ ಉತ್ತಮ ಸಾಹಿತ್ಯಗಳು ಹೊರಹೊಮ್ಮಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

> ಇಂದಿನ ರಾಜಕಾರಣಿಗಳು ಪುಸ್ತಕ ದ್ವೇಷಿಗಳು. ರಾಜಕೀಯ ಮತ್ತು ಧರ್ಮ ಭ್ರಷ್ಟವಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಮಾತ್ರ ನಮ್ಮ ಸಮಾಜವನ್ನು ರಕ್ಷಿಸಬಲ್ಲದು.
> -ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ವಿಮರ್ಶಕ

ಮೇಲುಕೋಟೆ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಡಾ.ಬಿ.ವಿ.ವಸಂತಕುಮಾರ್, ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಮುರಳೀಧರ ಭಾಗವತ್, ಸಾಹಿತಿ ಡಾ.ಎ.ರಂಗಸ್ವಾಮಿ, ಪ್ರಕಾಶ್ ಚಿಕ್ಕಪಾಳ್ಯ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಮಿಕರು ಖರ್ಚು-ವೆಚ್ಚಕ್ಕೆ ಕಡಿವಾಣ ಹಾಕಿ, ಪ್ರಗತಿ ಸಾಧಿಸಿ

ಪಾರಮಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ ಅಧ್ಯಕ್ಷ ಡಾ.ನಿಂಗರಾಜು ಸಲಹೆ

ತಿ.ನರಸೀಪುರ, ನ.13– ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ದುಡಿಯುವ ದಲಿತರು ಹಾಗೂ ಹಿಂದುಳಿದ ವರ್ಗಗಳು ಹಬ್ಬ, ಹರಿದಿನಗಳ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಿ, ಆರ್ಥಿಕ ಪ್ರಗತಿ ಸಾಧಿಸುವ ಮೂಲಕ ಮಕ್ಕಳ ಮುಂದಿನ ಭವಿಷ್ಯಕ್ಕೆ ಹಣ ಉಳಿತಾಯ ಮಾಡಬೇಕು ಎಂದು ಪಾರಮಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ ಅಧ್ಯಕ್ಷ ಡಾ.ನಿಂಗರಾಜು ಸಲಹೆ ನೀಡಿದರು.

ಪಟ್ಟಣದ ಜಾಫರ್ ವಾಣಿಜ್ಯ ಮಳಿಗೆಗಳ ಸಭಾಂಗಣದಲ್ಲಿ ಭಾನುವಾರ ನಡೆದ ಪ್ರೊ.ಬಿ.ಕೃಷ್ಣಪ್ಪ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಉದ್ಘಾಟಿಸಿ, ಕಟ್ಟಡ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ವಿತರಿಸಿ ಮಾತನಾಡಿದ ಅವರು, ಶತಮಾನಗಳಿಂದಲೂ ದುಡಿಯುತ್ತ ಶೋಷಣೆ ಅನುಭವಿಸುತ್ತಾ, ಆಧುನಿಕ ಭಾರತದಲ್ಲೂ ಜೀವನ ಮಟ್ಟ ಸುಧಾರಿಸಿಕೊಳ್ಳದ ದಲಿತರು ಮತ್ತು ಹಿಂದುಳಿದ ವರ್ಗಗಳ ಜನರು ಇನ್ನಾದರೂ ವೈಜ್ಞಾನಿಕವಾಗಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದರು.

ಅಂಬೇಡ್ಕರ್ ಹೇಳಿದಂತೆ ಬಡವನಾಗಿ ಹುಟ್ಟಿದ ನಾವು ಬಡವರಾಗಿ ಸಾಯಬಾರದು. ಸಾಮಾಜಿಕ ವ್ಯವಸ್ಥೆಯನ್ನು ಗಂಭೀರವಾಗಿ ಅರಿತು ಜೀವನ ನಡೆಸಬೇಕು.



ಕನ್ನಡ ನಾಡಿನ ಅಭಿನವ ಅಂಬೇಡ್ಕರ್ ಆಗಿದ್ದ ಪ್ರೊ.ಬಿ.ಕೃಷ್ಣಪ್ಪ ಅವರಂತೆ ಸಮುದಾಯದ ಅಭಿವೃದ್ಧಿ ಬಗ್ಗೆ ಕಾಳಜಿ ವಹಿಸಬೇಕು. ಅಲ್ಲದೇ ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ, ದುಡಿಯುವ ಹಣವನ್ನು ಭವಿಷ್ಯದ ಒಳಿತಿಗೆ ಕೂಡಿಡಬೇಕು ಎಂದು ಕರೆ ನೀಡಿದರು.

ಹನೂರು ತಾಪಂ ಉದ್ಯೋಗ ಖಾತರಿ ಸಹಾಯಕ ನಿರ್ದೇಶಕ ಕೆ.ಎಂ.ರವೀಂದ್ರ ಮಾತನಾಡಿ, ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ ಹಗಲಿರುಳು ದುಡಿಯುವ ಕಾರ್ಮಿಕರು ಗುತ್ತಿಗೆದಾರರಾಗಿ ಪರಿವರ್ತನೆಗೊಳ್ಳಬೇಕು. ಸರ್ಕಾರದ ಕಾಮಗಾರಿಗಳು ಸೇರಿದಂತೆ ಖಾಸಗಿ ಕಟ್ಟಡ ನಿರ್ಮಾಣಗಳನ್ನು ಗುತ್ತಿಗೆ ಪಡೆಯುವ ಮೂಲಕ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯ ರೂಪಿಸಬೇಕು ಎಂದು ಕಿವಿಮಾತು ಹೇಳಿದರು. ನಂಜನಗೂಡು ಬಿಆರ್‌ಸಿ ಪ್ರಭಾವತಿ, ಸಮಾಜ ಸೇವಕ ಬಿ.ಎಸ್.ಸುನೀಲ್ ಕುಮಾರ್, ಅರುಂಧತಿ ಸಹಕಾರ ಸಂಘದ ಅಧ್ಯಕ್ಷ ಕೆಂಚಪ್ಪ, ಕಟ್ಟಡ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಮಂಜುನಾಥ್, ಉಪಾಧ್ಯಕ್ಷ ನವೀನ್ ರಾಜ್, ಖಜಾಂಚಿ ಮಹದೇವಸ್ವಾಮಿ, ಕಚೇರಿ ಕಾರ್ಯ ನಿರ್ವಾಹಕ ಸ್ವಾಮಿ, ಗುತ್ತಿಗೆದಾರ ಕೇತಹಳ್ಳಿ ಮಂಜು, ಫಾರ್ಮಿ ಟ್ರಸ್ಟ್ ನಿರ್ದೇಶಕ ಪ್ರದೀಪ್, ಕಾರ್ಮಿಕ ಮುಖಂಡರಾದ ವಿನಯ್ ಕುಮಾರ್, ನಾಗಣ್ಣ, ರಾಜೇಶ್, ಹುಣಸೂರು ರಾಚಪ್ಪ ಇನ್ನಿತರರಿದ್ದರು.

> ಸಾವಿರಾರು ಕಟ್ಟಡ ಕಾರ್ಮಿಕರ ಹಿತ ಕಾಪಾಡಬೇಕಾದ ಕಾರ್ಮಿಕರ ಕಚೇರಿ ಕಿರಿದಾದ ಕೊಠಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ತಹಸೀಲ್ದಾರ್ ಗಮನಕ್ಕೆ ತಂದು ತಾಲೂಕು ಕಚೇರಿಗೆ ಸ್ಥಳಾಂತರಿಸುವಂತೆ ಮನವಿ ಸಲ್ಲಿಸಲಾಗುವುದು. ಕೋವಿಡ್ ಮೊದಲ ಅಲೆ ಸಂದರ್ಭ ಕ್ರಿಯಾಶೀಲವಾಗಿದ್ದ ಪ್ರೊ.ಬಿ.ಕೃಷ್ಣಪ್ಪ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಸಂಕಷ್ಟಕ್ಕೆ ಸಿಲುಕಿದ ಕಾರ್ಮಿಕರಿಗೆ ಹಲವು ವಿಧದಲ್ಲಿ ನೆರವಾಗಿತ್ತು. ಅಂದಿನಿಂದ ಇಂದಿನ ವರೆಗೂ ಒಂದಲ್ಲೊಂದು ಸರ್ಕಾರದ ಸೌಲಭ್ಯವನ್ನು ಕಾರ್ಮಿಕರಿಗೆ ನೀಡುತ್ತಲೇ ಬಂದಿದ್ದೇವೆ. ಇಂದಿನಿಂದ ಅಧಿಕೃತವಾಗಿ ಸಂಘ ಉದ್ಘಾಟಿಸಿ, ಉಚಿತ ಬಸ್ ಪಾಸ್‌ಗಳನ್ನು ನೀಡಲಾಗುತ್ತಿದೆ.
>
> - ಎಲ್.ಮಂಜುನಾಥ್, ಪುರಸಭಾ ಸದಸ್ಯ

ಬಿಜೆಪಿ ಸರ್ಕಾರಗಳ ಸಾಧನೆ ತಿಳಿಸಿ: ಶಾಸಕ ಹರ್ಷವರ್ಧನ್

ಮಲ್ಕುಂಡಿ, ನ.13– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಧನೆಗಳನ್ನು ಕ್ಷೇತ್ರದ ಜನರಿಗೆ ತಿಳಿಸುವಂತೆ ಕಾರ್ಯಕರ್ತರಿಗೆ ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.



ಇಲ್ಲಿಗೆ ಸಮೀಪದ ಹುರ, ಹಾಡ್ಯ, ಹೆಡಿಯಾಲ ಗ್ರಾಪಂ ವ್ಯಾಪ್ತಿಯ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ರೈತರ ಹಾಗೂ ಹಿಂದುಳಿದ ವರ್ಗದ ಪರ ಹಲವು ಜನಪರ ಯೋಜನೆ ಜಾರಿಗೊಳಿಸಿದೆ. ಸರ್ಕಾರದಿಂದ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಶಾಸಕನಾಗಿ ಕ್ಷೇತ್ರದಲ್ಲಿ 600 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಹೆಚ್ಚಿನ ರೀತಿ ಕ್ಷೇತ್ರ ಅಭಿವೃದ್ಧಿ ಪಡಿಸಲು ಪಣ ತೊಟ್ಟಿದ್ದೇನೆ. ಕ್ಷೇತ್ರದ ಜನತೆ ಆಸೆಯಂತೆ ನುಗು ಏತ ನೀರಾವರಿ ಯೋಜನೆಗೆ 80 ಕೋಟಿ ಅನುದಾನ ತಂದಿದ್ದೇನೆ. ಶ್ರೀಕಂಠೇಶ್ವರ ದೇವಾಲಯದ ಬೆಳ್ಳಿರಥ ಹಾಗೂ 124 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಲು ನ.28 ರಂದು ಸಿಎಂ ಬಸವರಾಜ ಬೊಮ್ಮಾಯಿ ಅವರು ನಂಜನಗೂಡಿಗೆ ಆಗಮಿಸಲಿದ್ದಾರೆ. ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಗ್ರಾಪಂ ಅಧ್ಯಕ್ಷ ಚಂದ್ರು, ಹಲ್ಲರೆ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಶಕ್ತಿ ಕೇಂದ್ರದ ಅಧ್ಯಕ್ಷ ಮಹೇಶ್, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಭೂ ನ್ಯಾಯ ಮಂಡಳಿ ಸದಸ್ಯ ಶಿವರುದ್ರ ಮುಖಂಡರಾದ ಶಿವಕುಮಾರ್, ಶಿವನಾಗಪ್ಪ ಪುಟ್ಟಸ್ವಾಮಿ, ಮಹದೇವಯ್ಯ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ದುರ್ಬಲರಿಗೆ ನೆರವಾಗುವ ಮನೋಧರ್ಮ ಬೆಳೆಸಿಕೊಳ್ಳಿ

ಒಕ್ಕಲಿಗ ಗೌಡರ ಸಂಘ ಉದ್ಘಾಟಿಸಿ ಪದಾಧಿಕಾರಿಗಳಿಗೆ ಶ್ರೀಸೋಮೇಶ್ವರನಾಥ ಸ್ವಾಮೀಜಿ ಕರೆ

ಬೈಲಕುಪ್ಪೆ, ನ.13– ಒಕ್ಕಲಿಗ ಗೌಡರ ಸಂಘದ ಪದಾಧಿಕಾರಿಗಳು ದುರ್ಬಲರಿಗೆ ನೆರವಾಗುವ ಮನೋಧರ್ಮ ಬೆಳೆಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಶಾಖಾ ಮಠದ ಶ್ರೀಸೋಮೇಶ್ವರನಾಥ ಸ್ವಾಮೀಜಿ ಕರೆ ನೀಡಿದರು.

ತಾಲೂಕಿನ ತಿರುಮಲಾಪುರದಲ್ಲಿ ಭಾನುವಾರ ನೂತನ ಒಕ್ಕಲಿಗ ಗೌಡರ ಸಂಘ ಉದ್ಘಾಟಿಸಿ, ಆಶೀರ್ವಚನ ನೀಡಿ ಮಾತನಾಡಿದ ಅವರು, ಒಕ್ಕಲಿಗ ಗೌಡ ಜನಾಂಗಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು ನಾಡಿಗೆ ಹಲವು ಕೊಡುಗೆ ನೀಡಿದೆ ಎಂದರು.

ಆದಿಚುಂಚನಗಿರಿ ಸಂಸ್ಥಾನ ಮಠದ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಒಕ್ಕಲಿಗ ಗೌಡ ಸಂಘಟನೆಗಳನ್ನು ಕಟ್ಟುವ ಮೂಲಕ ಸಮುದಾಯದ ಬೆಳವಣಿಗೆಗೆ ಸಹಕರಿಸಿದ್ದಾರೆ. ಅವರ ಸನ್ಮಾರ್ಗದಲ್ಲಿ ಸಂಘಟನೆಗೆ ಯಾವುದೇ ಚ್ಯುತಿಬಾರದ ರೀತಿ ನಡೆದುಕೊಂಡು ಹೋಗುವಂತೆ ಸಲಹೆ ನೀಡಿದರು.



ಶಾಸಕ ಕೆ.ಮಹದೇವ್ ಮಾತನಾಡಿ, ರಾಜಕೀಯವಾಗಿ ಬೆಂಕಿ ಹಚ್ಚುವ ಕೆಲಸ ನನ್ನ ಮೇಲೆ ನಡೆಯುತ್ತಿದ್ದು, ಜನಾಂಗದ ಬಂಧುಗಳು ಮನವರಿಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ನಾನು ಶಾಸಕನಾಗಿ ನಾಲ್ಕೂವರೆ ವರ್ಷ ಕಳೆದಿದ್ದು, ಮುಂದಿನ 6 ತಿಂಗಳಲ್ಲಿ ಚುನಾವಣೆ ನಡೆಯಲಿದೆ. ನನ್ನ ಅಧಿಕಾರವಧಿಯಲ್ಲಿ ಯಾವುದೇ ಶಾಂತಿ ಕದಡುವ ಕೆಲಸ ನಡೆದಿಲ್ಲ. ಇದರ ಬಗ್ಗೆ ಹೆಮ್ಮೆ ಇದೆ ಎಂದರು.

ಸಂಘದ ನೂತನ ಅಧ್ಯಕ್ಷರಾಗಿ ಟಿ.ಕೆ.ಚೇತನ್, ಗೌರವಾಧ್ಯಕ್ಷ ರಮೇಶ್, ಉಪಾಧ್ಯಕ್ಷ ರವೀಶ್, ಕಾರ್ಯದರ್ಶಿ ತಿಲಕ್, ಸಹ ಕಾರ್ಯದರ್ಶಿ ಸಂತೋಷ್, ಖಜಾಂಚಿ ಸುರೇಶ್ ಪದಾಧಿಕಾರಿಗಳಾಗಿ ನೇಮಕವಾಗಿದ್ದಾರೆ.

ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ವಕೀಲ ಬಿ.ವಿ.ಜವರೇಗೌಡ ಮಾತನಾಡಿದರು. ಈ ವೇಳೆ ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಬಿ.ಸುರೇಶ್, ಬಿಜೆಪಿ ಮುಖಂಡ ಕೆಎನ್.ಸೋಮಶೇಖರ್, ನಿವೃತ್ತ ಪ್ರಾಂಶುಪಾಲ ಕೆ.ಕೆ.ಅನಿತ್, ಮಂಚದೇವನಹಳ್ಳಿ ಡೈರಿ ಅಧ್ಯಕ್ಷ ಮಂಜುನಾಥ್, ಕೇಬಲ್ ದಿನೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷ ಶೋಭಾ, ಮುಖಂಡರಾದ ಕರಿಗೌಡ, ಎಂ.ಕೆ.ಪ್ರಕಾಶ್, ಅಪೂರ್ವ ಮೋಹನ್, ದಿನೇಶ್, ಬಿ.ಎ.ಪ್ರಕಾಶ್, ಕೃಷ್ಣೇಗೌಡ ಕೆ.ಸುರೇಶ್, ಲೋಕೇಶ್, ರಾಜೇಗೌಡ ಮತ್ತಿತರರಿದ್ದರು.

ಕೋಟೆಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ

ಶಾಸಕ ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆ, ನ.13– ತಾಲೂಕಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಭಾನುವಾರ ಬಿರ್ಸಾ ಮುಂಡಾ ಬುಡಕಟ್ಟು ಸಮಾಜಗಳ ಅಭಿವೃದ್ಧಿ ಮತ್ತು ಸೇವಾ ಒಕ್ಕೂಟದಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು. ಪಟ್ಟಣದಲ್ಲಿ ತಾಲೂಕು ಮಟ್ಟದ ಕ್ರೀಡಾಂಗಣವಿದ್ದು, ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರೀಡಾ ಸಚಿವರಿಗೆ ಮನವಿ ಮಾಡಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಕ್ರೀಡಾಪಟುಗಳ ಅನುಕೂಲಕ್ಕಾಗಿ ತಾಲೂಕು ಮಟ್ಟದ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದರು.

ತಾಲೂಕಿನಲ್ಲಿ ಇದೇ ಪ್ರಥಮ ಬಾರಿಗೆ ರಾಜ್ಯ ಮಟ್ಟದ ಕರಾಟೆ ಸ್ಪರ್ಧೆ ಏರ್ಪಡಿಸಿರುವುದು ಸಂತೋಷದ ವಿಚಾರ. ಮುಂದಿನ ದಿನಗಳಲ್ಲಿ ಕರಾಟೆ ಕ್ರೀಡಾಪಟುಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು ಎಂದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಜಿ.ಎನ್.ದೇವದತ್ತ, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಪುರಸಭಾ ಸದಸ್ಯ ಎಚ್.ಸಿ.ನರಸಿಂಹಮೂರ್ತಿ, ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಬಿ.ಜೆ.ಮಹೇಂದ್ರ, ವೆಂಕಟೇಶ್, ಮಹೇಶ್, ಚಂದ್ರು, ಬೆಟ್ಟಸ್ವಾಮಿ, ಮನೋಜ್ ಇದ್ದರು.

ಪಿಎಚ್.ಡಿ ಪದವಿ



ಮೈಸೂರು, ನ.13– ಡಾ. ಎಸ್.ಜೆ ಮಂಜುನಾಥ್ ಅವರ ಮಾರ್ಗದರ್ಶನದಲ್ಲಿ ಪಿ.ಕೆ. ಗೋವರ್ಧನ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ "ಬ್ರ್ಯಾಂಡ್ ಈಕ್ವಿಟಿ ಇನ್ ಮಾರ್ಕೆಟಿಂಗ್ ಆಫ್ ಸೆಲೆಕ್ಟ್ ಇಂಡಿಯನ್ ಅಂಡ್ ಮಲ್ಟಿ ನ್ಯಾಷನಲ್ ಸ್ಪೋರ್ಟ್ಸ್ ವೇರ್ ಅಂಡ್ ಎಕ್ವಿಪ್‌ಮೆಂಟ್ಸ್" ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಸರಗೂರಿನಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಅಪ್ಪಾಜಿ ಕ್ಯಾಂಟೀನ್ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಹಂಚೀಪುರ ಮಠದ ಚನ್ನಬಸವಸ್ವಾಮೀಜಿ ಅವರನ್ನು ಆಹ್ವಾನಿಸಿದರು. ಈ ವೇಳೆ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ವೆಂಕಟೇಶ್, ಯೋಗೇಶ್ ಕುಮಾರ್, ಶಂಭುಗೌಡ, ಪ್ರಶಾಂತ್, ರಘು, ಗಿರೀಶ್, ಸೋಮು ರೈ, ಜಿತೇಂದ್ರ, ವೈಕುಂಠನಾಯಕ, ಸತೀಶ್‌ಗೌಡ, ರವಿ, ನಿಂಗರಾಜು, ಮಧುನಾಗಪ್ಪ, ನರಸಿಂಹರಾಜು, ಸಿದ್ದರಾಜು, ದಿನೇಶ್, ವೆಂಕಟೇಶ್, ಹರೀಶ್, ಡಿ.ನಾಗರಾಜು, ಶಿವಮಲ್ಲಪ್ಪ, ನಾಗೇಗೌಡ, ವೈಕುಂಠನಾಯಕ, ಮಹದೇವ್ ಇನ್ನಿತರರಿದ್ದರು.

ಕನಕದಾಸರ ತತ್ವಾದರ್ಶ ಮೈಗೂಡಿಸಿಕೊಳ್ಳಿ



ಹುಣಸೂರು, ನ.13– ಪ್ರತಿಯೊಬ್ಬರೂ ಕನಕದಾಸರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡುವಂತೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಕರೆ ನೀಡಿದರು.

ತಾಲೂಕಿನ ಮೈಲಾಂಬೂರು ಗ್ರಾಮದಲ್ಲಿ ಕನಕದಾಸ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದಾಸರ ಕೀರ್ತನೆಗಳು ವಿಶ್ವಾದ್ಯಂತ ಪಸರಿಸಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕನಕದಾಸರ ಅಪ್ರತಿಮ ಸಾಹಿತ್ಯ ಸೇವೆ ಗುರುತಿಸಿ ಅದರ ಸಾರವನ್ನು ಅರಿತು ನಾವು ಬದುಕಬೇಕಾಗಿದೆ ಎಂದರು.

ಅಂದಿನ ದಿನಗಳಲ್ಲಿ ಜಾತಿ ನಿರ್ಮೂಲನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕನಕದಾಸರು 16ನೇ ಶತಮಾನದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರಾಗಿದ್ದರು ಎಂದರು.

ನನ್ನ ತಂದೆ ಶಾಸಕ ಜಿ.ಟಿ.ದೇವೇಗೌಡರು ಈ ಹಿಂದೆ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಿದ್ದರು. ಅವರಿಗೆ ನೀವು ನೀಡಿದ ಸಹಕಾರವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದ ಅವರು, ಮುಂಬರುವ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದರು. ಸಮಾರಂಭದಲ್ಲಿ ಜಿಪಂ ಮಾಜಿ ಸದಸ್ಯ ಸುರೇಂದ್ರ, ಮುಖಂಡರಾದ ಧರ್ಮಾಪುರ ರಮೇಶ್, ಶ್ರೀಧರ್, ಬೀರೇಶ್, ಭಕ್ತ ಕನಕದಾಸರ ಸಂಘದ ಅಧ್ಯಕ್ಷ ಮಹೇಂದ್ರ, ಕಾರ್ಯದರ್ಶಿ ಅಕ್ಷಯ್, ರಾಜು, ರಂಗೇಶ್, ಕಿರಣ್, ಯೋಗೇಶ್, ಪುಟ್ಟಮಲ್ಲ, ಮನು, ಗವಿರಾಜು, ರಾಮಚಂದ್ರ, ಪ್ರಮೋದ್, ಕೃಷ್ಣೇಗೌಡ, ಪ್ರತಾಪ್, ಗವಿದಾಸಯ್ಯ, ಪುಟ್ಟಸ್ವಾಮಿ ಆರಾಧ್ಯ, ಗ್ರಾಮದ ಕನಕದಾಸರ ಯುವಕ ಸಂಘದ ಪದಾಧಿಕಾರಿಗಳು ಮತ್ತು ಗ್ರಾಮದ ಯಜಮಾನರು, ಮುಖಂಡರು ಹಾಜರಿದ್ದರು.

ಮನುಕುಲಕ್ಕೆ ಉತ್ತಮ ಸಂದೇಶ ಸಾರಿದ ಮಹಾಚೇತನ ಕನಕದಾಸರು

ಮೂಗೂರು, ನ.13– ಸಾಹಿತ್ಯ ಸಮಾಜಕ್ಕೆ ನವರಸಭರಿತ ಕಾವ್ಯಧಾರೆ ಹರಿಸಿದ ಶ್ರೇಷ್ಠಕವಿ ಕನಕದಾಸರು ಮನುಕುಲಕ್ಕೆ ಉತ್ತಮ ಸಂದೇಶ ಸಾರಿದ ಮಹಾಚೇತನ ಎಂದು ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ ತಿಳಿಸಿದರು.

ಇಲ್ಲಿನ ಗ್ರಾಪಂನಲ್ಲಿ ನಡೆದ ಕನಕದಾಸರ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಕನಕದಾಸರು ತಮ್ಮ ಜೀವಿತಾವಧಿಯಲ್ಲಿ ಕೀರ್ತನೆಗಳ ಮೂಲಕ ಸಮ ಸಮಾಜ ನಿರ್ಮಾಣದ ಗುರಿ ಹೊಂದಿದ್ದರು. ಇವರ ವಿಚಾರಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಅವರ ವ್ಯಕ್ತಿತ್ವ ಅರಿವಾಗುತ್ತದೆ ಎಂದರು. ಗ್ರಾಪಂ ಉಪಾಧ್ಯಕ್ಷ ಜಿ.ಎಸ್.ಮೋಹನ್ ಕುಮಾರ್ ಮಾತನಾಡಿ, ಕನಕದಾಸರು ಭಕ್ತಿ ಪಂಥದ ಜೊತೆಗೆ ತಮ್ಮದೇ ಆದ ವೈಚಾರಿಕತೆ ಮೂಲಕ ಸಮಾಜದ ನ್ಯೂನತೆಗಳನ್ನು



ತಿದ್ದುವಲ್ಲಿ ಮಹತ್ವದ ಹೆಜ್ಜೆ ಇಟ್ಟರು. ಮನುಕುಲದಲ್ಲಿನ ಜಾತಿ ವ್ಯವಸ್ಥೆ ಬುಡಮೇಲು ಮಾಡಲು ಸಮಾಜಕ್ಕೆ ತಮ್ಮದೇ ಆದ ಸಂದೇಶ ಸಾರಿದರು ಎಂದರು. ಈ ವೇಳೆ ಪಿಡಿಓ ಪೂರ್ಣಿಮಾ, ಜವರೇಗೌಡ, ಚೇತನ್, ಭಾಗ್ಯಮ್ಮ, ಶಿವಣ್ಣ, ಕಚೇರಿ ಸಿಬ್ಬಂದಿ ವರ್ಗ ಹಾಜರಿದ್ದರು.

ನಿರ್ಮಾಣ ಹಂತದ ಬಸವ ಭವನಕ್ಕೆ 2.5 ಕೋಟಿ ಅನುದಾನ

ನಾಳೆ ಶಾಸಕ ಹರ್ಷವರ್ಧನ್‌ರಿಂದ 2ನೇ ಹಂತದ ಕಾಮಗಾರಿಗೆ ಚಾಲನೆ

ನಂಜನಗೂಡು, ನ.13– ನಗರದ ಹಂಡುವಿನಹಳ್ಳಿ ಬಡಾವಣೆಯಲ್ಲಿ ನಿರ್ಮಾಣ ಹಂತದಲ್ಲಿರುವ ಬಸವ ಭವನ ಕಾಮಗಾರಿಗೆ ಶಾಸಕ ಬಿ.ಹರ್ಷವರ್ಧನ್ ಮನವಿ ಮೇರೆಗೆ ಲೋಕೋಪಯೋಗಿ ಇಲಾಖೆಯಿಂದ 2.5 ಕೋಟಿ ರೂ. ಅನುದಾನ ಮಂಜೂರಾಗಿದ್ದು, ನ.15 ರಂದು ಶಾಸಕರು 2ನೇ ಹಂತದ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದು ತಾಲೂಕಿನ ವೀರಶೈವ ಲಿಂಗಾಯತ ಮುಖಂಡರು ತಿಳಿಸಿದ್ದಾರೆ.

ನಗರದ ಶ್ರೀಪಾದಸ್ವಾಮಿ ಗದ್ದಿಗೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮತ್ತು ವೀರಶೈವ ಲಿಂಗಾಯತ ಮುಖಂಡರು ಸಭೆ ನಡೆಸಿ ಮಾತನಾಡಿ, ಮೊದಲ ಹಂತದ ಕಾಮಗಾರಿ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿದ್ದು, ಭವನ ಪೂರ್ಣಗೊಳ್ಳಲು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಕಳೆದ 4 ವರ್ಷಗಳಿಂದ ಕಾಮಗಾರಿ ನಡೆಯದೇ ಶಿಥಿಲಗೊಂಡಿರುವ ಕಟ್ಟಡಕ್ಕೆ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ, ಪರಿಶೀಲಿಸಿ ಭವನ ದುಸ್ಥಿತಿಯಲ್ಲಿದ್ದನ್ನು ಕಂಡು ಅಂದೇ ಈ ಕಟ್ಟಡ ಪೂರ್ಣಗೊಳಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಉದ್ಘಾಟಿಸುವ ಭರವಸೆ ನೀಡಿದ್ದರು. ಅದರಂತೆ ಲೋಕೋಪಯೋಗಿ ಇಲಾಖೆಗೆ ಬಸವ ಭವನ ಪೂರ್ಣಗೊಳಿಸಲು ಬೇಕಿರುವ 2.5 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದರು. ಇದೀಗ ಅನುದಾನ ಬಿಡುಗಡೆಯಾಗಿದ್ದು, ನ.15ರಂದು ಶಾಸಕರು 2ನೇ ಹಂತದ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ ಎಂದರು.



ಶಾಸಕರಿಗೆ ಸನ್ಮಾನ: ಬಸವ ಭವನ 2ನೇ ಹಂತದ ಕಾಮಗಾರಿಗೆ 2.5 ಕೋಟಿ ರೂ. ಮಂಜೂರು ಮಾಡಿಸಿರುವ ಶಾಸಕ ಬಿ.ಹರ್ಷವರ್ಧನ್ ಅವರಿಗೆ ಅದ್ದೂರಿಯಾಗಿ ಸನ್ಮಾನಿಸಲು ಸಭೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ನ.15 ರಂದು 2ನೇ ಹಂತದ ಕಾಮಗಾರಿಗೆ ಚಾಲನೆ ನೀಡುವ ವೇಳೆ ನಗರದ ಹುಲ್ಲಹಳ್ಳಿ ವೃತ್ತದಿಂದ ನಿರ್ಮಾಣ ಹಂತದಲ್ಲಿರುವ ಬಸವ ಭವನದವರೆಗೆ ಶಾಸಕ ಬಿ.ಹರ್ಷವರ್ಧನ್ ಅವರನ್ನು ಅದ್ದೂರಿಯಾಗಿ ಮೆರವಣಿಗೆ ಮಾಡಿ ಸನ್ಮಾನಿಸಲಾಗುವುದು ಎಂದ ವೀರಶೈವ ಲಿಂಗಾಯತ ಮುಖಂಡರು, ಅಂದು ದೇವನೂರು ಮಠಾಧ್ಯಕ್ಷ ಮಹಾಂತ ಸ್ವಾಮೀಜಿ, ಮಲ್ಲನಮೂಲೆ ಮಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ ಸೇರಿದಂತೆ ಹರಗುರು ಚರಮೂರ್ತಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್, ನಗರಾಧ್ಯಕ್ಷ ಪ್ರಚಾರ ಕೇಸರಿ ಶಿವನಾಗಪ್ಪ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಸದಸ್ಯ ಮಹದೇವಪ್ರಸಾದ್, ಶ್ರೀವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಬಿಜೆಪಿ ಮಂಡಲ ಅಧ್ಯಕ್ಷ ಹಾಗೂ ಹಿರಿಯ ವಕೀಲ ಮಹೇಶ್, ಮಹಾಸಭಾ ನಿರ್ದೇಶಕರಾದ ಶಿವನಾಗಪ್ಪ, ಮಲ್ಲೇಶ್, ಅಕ್ಕಮಹಾದೇವಮ್ಮ, ಮುದ್ದುಮಾದಪ್ಪ, ಶ್ರೀಪಾದಸ್ವಾಮಿ ಗದ್ದುಗೆ ಅಧ್ಯಕ್ಷ ಸಿ.ವಿ.ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಉಮಾಶಂಕರ್, ವಕೀಲ ಮಹೇಶ್‌ಬಾಬು, ಕೋಮಲ, ಮಹಾಲಿಂಗಪ್ಪ, ಪುಟ್ಟಸ್ವಾಮಿ, ಗುರುಮಲ್ಲಪ್ಪ, ಗೌಡಿಕೆ ಗುರುಸ್ವಾಮಪ್ಪ, ಮಹೇಶ ಸೇರಿದಂತೆ ಇತರರಿದ್ದರು.



ಹುಣಸೂರಿನ ಬಜಾರ್ ರಸ್ತೆಯಲ್ಲಿರುವ ವಕೀಲ ನಯಾಜ್ ಪಾಷ ಅವರ ಕಚೇರಿಯಲ್ಲಿ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಜಯಂತಿ ಆಚರಿಸಲಾಯಿತು. ಈ ವೇಳೆ ವೀರ ಕನ್ನಡಿಗ ಟಿಪ್ಪು ಅಭಿಮಾನಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಕೀಲರಾದ ನಯಾಜ್ ಪಾಷ, ಮಾಜಿ ಅಧ್ಯಕ್ಷ ಮುಜೀಬ್ ಅಹಮದ್, ಯುವ ಮುಖಂಡರಾದ ಶೌಕತ್ ಖಾನ್, ನವೀದ್, ಜಬಿ, ಆದಿಲ್ ಖಾನ್, ಫಾರುಖ್ ಇನ್ನಿತರರಿದ್ದರು.

ಇಂದು ಬೆಳ್ಳಿ ಕಂಡಾಯ ಮೆರವಣಿಗೆ

ಮೈಸೂರು, ನ.13– ಮೈಸೂರು ಮಂಚೇಗೌಡನಕೊಪ್ಪಲು(ಹೆಬ್ಬಾಳು) ಶ್ರೀ ಘನನೀಲ ಸಿದ್ದಪ್ಪಾಜಿ ಸ್ವಾಮಿ ದೇವಾಲಯದಲ್ಲಿ ಸೋಮವಾರ ವಿಶೇಷ ಪೂಜಾ ಕೈಂಕರ್ಯ ನೆರವೇರಲಿದೆ. ಸಂಜೆ 5 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬೆಳ್ಳಿ ಕಂಡಾಯ ಮೆರವಣಿಗೆ ನಡೆದ ನಂತರ ದೇವಾಲಯದ ಆವರಣದಲ್ಲಿ ಕಾರ್ತಿಕ ದೀಪೋತ್ಸವ ಹಾಗೂ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

ಸಿದ್ದಪ್ಪಾಜಿ ಕಂಡಾಯೋತ್ಸವ

ಮೈಸೂರು, ನ.13–ಕಾರ್ತಿಕ ಮಾಸದ ಅಂಗವಾಗಿ ಹೆಬ್ಬಾಳಿನ 1ನೇ ಹಂತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಸೇವಾ ಸಮಿತಿ ವತಿಯಿಂದ ಸೋಮವಾರ ಸಂಜೆ 6ಗಂಟೆಗೆ ಶ್ರೀ ಸಿದ್ದಪ್ಪಾಜಿ ಕಂಡಾಯೋತ್ಸವವನ್ನು ಏರ್ಪಡಿಸಲಾಗಿದ್ದು, ಪೂಜೆಯ ನಂತೆ ಹೆಬ್ಬಾಳಿನ ಪ್ರಮುಖ ರಸ್ತೆಗಳಲ್ಲಿ ಶ್ರೀ ಸಿದ್ದಪ್ಪಾಜಿ ಮೆರವಣಿಗೆ ಆಯೋಜಿಸಿದ್ದು, ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಪಿರಿಯಾಪಟ್ಟಣ ತಾಲೂಕಿನ ದೇವೇಗೌಡನಕೊಪ್ಪಲಿನಲ್ಲಿ 20 ಲಕ್ಷ ರೂ. ವೆಚ್ಚದ ಚರಂಡಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಪುರಸಭಾಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಆಶಾ, ಮುಖ್ಯಾಧಿಕಾರಿ ಮಹೇಂದ್ರ, ಮಾಜಿ ಅಧ್ಯಕ್ಷ ಮಂಜುನಾಥ್ ಸಿಂಗ್, ಸದಸ್ಯರಾದ ಪ್ರಕಾಶ್ ಸಿಂಗ್ ಇದ್ದರು.

ದೃಷ್ಟಿ ದೋಷವುಳ್ಳವರಿಗೆ ತಾಂತ್ರಿಕ ಶಿಕ್ಷಣದ ಅಗತ್ಯವಿದೆ

ರಾಜ ವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲಹೆ





ಮೈಸೂರು, ನ.13(ಎಂಟಿವೈ)– ವಿಶೇಷ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮುಂಬರುವ ದಿನಗಳಲ್ಲಿ ದೃಷ್ಟಿ ದೋಷವುಳ್ಳ ವಿಕಲಚೇತರಿಗೆ ತಾಂತ್ರಿಕ ಶಿಕ್ಷಣ ನೀಡುವ ಬಗ್ಗೆ ಚಿಂತನೆ ಮಾಡುವ ಅಗತ್ಯವಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲಹೆ ನೀಡಿದ್ದಾರೆ.

ಮೈಸೂರಿನ ತಿಲಕ್‌ನಗರದ ಬಂಬೂಬಜಾರ್‌ನಲ್ಲಿರುವ ಸರ್ಕಾರಿ ಅಂಧ ಮಕ್ಕಳ ಪಾಠಶಾಲೆಯಲ್ಲಿ ಭಾನುವಾರ ಇನ್ನರ್‌ವೀಲ್ ಕ್ಲಬ್ ಆಫ್ ಮೈಸೂರು ಹಾಗೂ ಅಂಧರ ಸ್ನೇಹ ಜೀವಿ ವಿದ್ಯಾರ್ಥಿಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಹಾಗೂ ರಾಜ್ಯಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 10ನೇ ತರಗತಿ ಶಿಕ್ಷಣ ಪಡೆದ ಬಳಿಕ ದೃಷ್ಟಿ ವಿಕಲಚೇತರಿಗೆ ಉದ್ಯೋಗಕ್ಕೆ ಪೂರಕವಾದ ತಾಂತ್ರಿಕ ಶಿಕ್ಷಣ ನೀಡುವ ಅನಿವಾರ್ಯತೆ ಇದೆ. ಅದಕ್ಕಾಗಿ ತಾಂತ್ರಿಕ ಶಿಕ್ಷಣದ ಕೋರ್ಸ್ ಆರಂಭಿಸುವ ಮೂಲಕ ದೃಷ್ಟಿ ದೋಷವುಳ್ಳರವನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಕಾರ್ಯಕ್ರಮ ರೂಪಿಸಬೇಕು. ಈ ಕೋರ್ಸ್ ಅನ್ನು ಖಾಸಗಿ ಸಂಸ್ಥೆಗಳು ಮಾಡುವುದಕ್ಕಿಂತ, ಸರ್ಕಾರವೇ ಮಾಡಿದರೇ ತುಂಬಾ ಉತ್ತಮ. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇದಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ವಿಶೇಷಚೇತನ ಮಕ್ಕಳು ನಮ್ಮಂತೆ ಸಾಮಾನ್ಯರಲ್ಲ. ಅವರು ಸರ್ವ ಶ್ರೇಷ್ಠರು. ವಿಕಲತೆ ಕೇವಲ ಅವರಲ್ಲಿ ಮಾತ್ರವಲ್ಲ ಸಾಮಾನ್ಯರಲ್ಲಿಯೂ ಇದೆ. ಇಲ್ಲಿನ ಅಂಧ ಮಕ್ಕಳು ಪ್ಲಾಸ್ಟಿಕ್ ಕುರಿತು ಅರಿವು ಮೂಡಿಸಲು ಮುಂದಾಗಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಅವರಲ್ಲಿನ ಕಾಳಜಿ ದೊಡ್ಡವರಿಗೆ ಪ್ರೇರಣೆಯಾಗಬೇಕು. ಪ್ಲಾಸ್ಟಿಕ್‌ನಿಂದಾಗಿ ಸಮಾಜದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಅದರ ಬಳಕೆ ಪೂರ್ಣ ಪ್ರಮಾಣದಲ್ಲಿ ನಿಲ್ಲಿಸಿದರೆ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯ ಎಂದರು.


ಇದೇ ವೇಳೆ ರಂಗಕರ್ಮಿ ರಾಮಚಂದ್ರ ಮಾತನಾಡಿ, ವಿಶೇಷಚೇತನ ಮಕ್ಕಳು ವಿಶೇಷತೆ ಇರುತ್ತದೆ. ಅವರಲ್ಲಿ ಅಂತರಾತ್ಮ ಶುದ್ಧತೆಯಿಂದ ಕೂಡಿದ್ದು, ಕಲ್ಮಶ ಇರುವುದಿಲ್ಲ. ಮೈಸೂರು ಮಹಾರಾಜರು ನೀಡಿದಂತಹ ಜಾಗಗಳನ್ನು, ಈಗಾಗಲೇ ಅರ್ಧದಷ್ಟು ನುಂಗಿ ಹಾಕಲಾಗಿದೆ. ಶಾಲಾ ಕಾಲೇಜು ಸೇರಿದಂತೆ ಇನ್ನಿತರ ಅಭಿವೃದ್ಧಿಗೆ ನೀಡಿರುವ ಜಾಗವನ್ನು ಉಳಿಸಿಕೊಳ್ಳಲು ನಾವೆಲ್ಲರೂ ಮುಂದಾಗಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಶಾಲಾ ಆವರಣದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ನಮಗೆ ತೊಂದರೆಯಾಗಲಿದೆ. ಈ ಹಿನ್ನೆಲೆಯಲ್ಲಿ ಟ್ಯಾಂಕ್ ನಿರ್ಮಾಣ ಕಾಮಗಾರಿ ಸ್ಥಳಾಂತರಿಸುವಂತೆ ವಿಕಲಚೇತರು ಮನವಿ ಸಲ್ಲಿಸಿದರು.


ಕಾರ್ಯಕ್ರಮದಲ್ಲಿ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕಿ ಕೆ.ಎಸ್. ಲತಾಕುಮಾರಿ, ಅಂಗವಿಕಲರ ಕಲ್ಯಾಣಾಧಿಕಾರಿ ಆರ್.ಮಾಲಿನಿ, ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಗೌರಿ ಗೋಪಾಲ್, ಕಾರ್ಯದರ್ಶಿ ಪಲ್ಲವಿ ಅರುಣ್, ಡಾ.ಅಪ್ಪಾಜಿಗೌಡ, ರೈಲ್ವೆ ಆಸ್ಪತ್ರೆಯ ಮುಖ್ಯ ಔಷಧ ತಜ್ಞ ಗೋವರ್ಧನ್ ಇದ್ದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ನ.13– ಮೈಸೂರು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2022–23 ನೇ ಸಾಲಿಗೆ ನೀಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, 2022ರ ಡಿಸೆಂಬರ್ 31 ಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದೆ. ಆಸಕ್ತರು https://ssp.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. 1–10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅಥವಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಅವರನ್ನು ಸಂಪರ್ಕಿಸಬಹುದು.



Sl.No	Posts For	Qualification
1.	Vice Principal	Any Post Graduation with B.Ed having 3 years of Experience in the field
2.	Chemistry	M.Sc in Chemistry With B.Ed
3.	Physics	M.Sc in Physics with B.Ed
4.	Social Science	M.A with B.Ed in Social Science



ಸಾರ್ವಜನಿಕ ಗಮನಕ್ಕಾಗಿ

ನನ್ನ ಕಕ್ಷಿದಾರರಾದ, ರವರ ಇರ್ರಾದೆಯ ಮೇರೆಗೆ, ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಶಿಲ್ಲೇಗೌಡ ಉರುಫ್ ಮಾಯೀಗೌಡ ಮಗ ಶ್ರೀ ರಾಜೇಗೌಡ ಉರುಫ್ ದೊಡ್ಡೆಹೈದೇಗೌಡ ರವರೊಂದಿಗೆ ಕ್ರಯದ ಕರಾರಿನ ಮೂಲಕ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಜಮೀನನ್ನು, ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯಪತ್ರ ಬರೆದುಕೊಡಲು ಸಿದ್ಧರಿದ್ದು, ಈಗಾಗಲೇ ಕೆಲವು ದಾಖಲಾತಿಗಳನ್ನು ನನ್ನ ಕಕ್ಷಿದಾರರಿಗೆ ನೀಡಿದ್ದು, ಹಾಗಾಗಿ ನನ್ನ ಕಕ್ಷಿದಾರರು ನೋಂದಾಯಿತ ಕ್ರಯಪತ್ರವನ್ನು, ಪಡೆದುಕೊಳ್ಳಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು, ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ಯಾವುದೇ ಅಡಚಣೆ, ತಕರಾರು, ಇಲ್ಲವೆಂದು ಪರಿಗಣಿಸಿ ಮೇಲ್ಕಂಡ ಮಾಲೀಕರಿಂದ ಕ್ರಮ ಬದ್ಧವಾದ ನೋಂದಣಿ ಕ್ರಯಪತ್ರವನ್ನು, ಪಡೆದುಕೊಂಡು, ಮುಂದುವರೆಯಲು ಇಚ್ಛಿಸಿದ್ದು, ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 102/2 ರಲ್ಲಿ ವಿಸ್ತೀರ್ಣ 1.00 ಎಕರೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 99/1 ರಲ್ಲಿ ಪುಟ್ಟೇಗೌಡ ಬಿನ್ ಎಸ್. ಬೋರೇಗೌಡ ರವರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 102/5 ರಲ್ಲಿ ಸಿ. ಗೋಪಾಲ್ ಬಿನ್ ಚಿಕ್ಕರಾಜೇಗೌಡ ; ಉತ್ತರಕ್ಕೆ: ಸರ್ವೆ ನಂ. 102/4 ರಲ್ಲಿ ಸಿ.ಗೋಪಾಲ್ ಬಿನ್ ಚಿಕ್ಕರಾಜೇಗೌಡ ; ದಕ್ಷಿಣಕ್ಕೆ: ಸ.ನಂ. 95/1ಡಿ4 ರಲ್ಲಿ ಲೇಟ್ ಮರೀಗೌಡ ರವರ ಮಗ ಮನೋಜ್ ರವರ ಜಮೀನು, ಕೆ. ಹೆಮ್ಮನಹಳ್ಳಿ ಗಡಿ.

Sd/- Palaksha *B.Sc., LL.B.*
Advocate, Office: No. 645, 1st Floor, Narayana Shastri Road, Behind Sitavilasa Choultry, Mysore-570 024.
Mob: 94480-75718



